
# ತಗು ಸಂಗಾತಿ

ಡಿಸೆಂಬರ್ 16 ರಿಂದ 31, 2000 ಪಾಕ್ಷಿಕ ಪತ್ರಿಕೆ (ಪೆರಾರ್ದೆ1-16)

ನಂ. ೩೫, ಸವಿತಾ ನಿಲಯ, ೧ನೇ ಕ್ರಾಸ್, ೪ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - ೫೭೦ ೦೧೨

ಸಂಪಾದಕಿ : ಪಟ್ಟಡ ಶೀಲಾಮಣಿ Registered : 10-01-96 TCI Kar. 09592 ಕನ್ನಡ ಮತ್ತು ಅರೆಭಾಷೆಯಲ್ಲಿ ಪ್ರಕಟಿತ


Reg. KA/SK/MYS-88 ಸಂಪುಟ : 4 ಸಂಚಿಕೆ : 24 ಪುಟಗಳು : 24 ಬೆಲೆ ರೂ. : 6-00


1 ಆರು ಸಾವಿರ ವರ್ಷಗಳ ಹಿಂದಿದ್ದ ಆರ್ಯಪೂರ್ವ ಭಾರತ




2 ಶಾಲಿವಾಹನ, ಪಲ್ಲವ, ವಿಜಯನಗರ ಸಾಮ್ರಾಜ್ಯಗಳ ಆದಿಪತ್ಯಕ್ಕೆ ಒಳಪಟ್ಟ ಭಾಗ



3 ಕ್ರಿ. ಶ. 550-768 ಬಾದಾಮಿ ಚಾಳುಕ್ಯರ ಕಾಲ



4 ಕ್ರಿ. ಶ. 758-923 ರಾಷ್ಟ್ರಕೂಟರ ಕಾಲ

ಲೇಖನ : ಒಳಪುಟಗಳಲ್ಲಿ

## 6000 ವರ್ಷಗಳ ಹಿಂದೆ ಹರಪ್ಪಾ ಮೊಹೆಂಜದಾರೊದಲ್ಲಿ ಮೆರೆದಕನ್ನಡ ಪಂಚ ದ್ರಾವಿಡ ಭಾಷೆಯಲ್ಲಿ ಕನ್ನಡ ಅತಿಪ್ರಾಚೀನ ಭಾಷೆ.

## ವಧು ಬೇಕಾಗಿದೆ

ಕೇಂದ್ರ ಸರ್ಕಾರಿ ಸ್ವಾಮ್ಯದ ಉದ್ಯಮದಲ್ಲಿ ಉದ್ಯೋಗಿಯಾಗಿರುವ 34 ವರ್ಷ ವಯಸ್ಸಿನ ಕೊಡಗು ಗೌಡ ವಿಧುರರೊಬ್ಬರಿಗೆ ಒಳ್ಳೆಯ ಗೌಡ ಮನೆತನದ ವಧು ಬೇಕಾಗಿದೆ

*ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ :*

ಬಾಕ್ಸ್ ನಂ.10, ಕೊಡಗು ಸಂಗಾತಿ
ನಂ.35, ಸವಿತಾ ನಿಲಯ
1ನೇ ಕ್ರಾಸ್, 4ನೇ ಬ್ಲಾಕ್, ಜಯಲಕ್ಷ್ಮಿ ಪುರಂ, ಮೈಸೂರು -12.

---

**ಸ್ವಲ್ಪ ಇತ್ತ ಗಮನಿಸಿ !!!** *ಇದೀಗ ನಿಮ್ಮ ಸೇವೆಗಾಗಿ ಸದಾ ಲಭ್ಯ*

### ಚಂದ್ರು ಪ್ರಿಂಟ್ ಟೆಕ್

ಕಾವೇರಿ ಕಾಂಪ್ಲೆಕ್ಸ್, ಮಳಿಗೆ ನಂ. 5, ಬಿ. ಎಂ. ರಸ್ತೆ,ಕೊನಿಕ ಲ್ಯಾಬ್ ಹಿಂಭಾಗ, ಕುಶಾಲನಗರ,

ನಮ್ಮಲ್ಲಿ ಡಿ.ಟಿ.ಪಿ., ಆಫ್‌ಸೆಟ್ ಪ್ರಿಂಟಿಂಗ್, ಸ್ಕ್ರೀನ್‌ಪ್ರಿಂಟಿಂಗ್,ಜೆರಾಕ್ಸ್, ರಬ್ಬರ್ ಸ್ಟಾಂಪ್, ಮತ್ತು ಎಲ್ಲಾ ತರಹದ ಮುದ್ರಣಗಳನ್ನು ಅಂದವಾಗಿ ಮುದ್ರಿಸಿ ಕೊಡಲಾಗುವದು.

*ನಗರಕ್ಕೆ ಬಂದಾಗ ಭೇಟಿ ನೀಡಲು ಮರೆಯದಿರಿ " ಗ್ರಾಹಕರ ತೃಪ್ತಿಯೇ ನಮ್ಮ ಧ್ಯೇಯವಾಗಿದೆ "*

ಮಾಲೀಕರು : **ನಂಗಾರು ಸಿ. ಚಂದ್ರಕುಮಾರ್,** ಕುಶಾಲನಗರ.
Phone : 71040

---



## ಚಿರಸ್ಮರಣೆ

ಪರಮಾತ್ಮನು ನಿನ್ನ ಆತ್ಮಕ್ಕೆ ಯಾಗೋಳು ಚಿರಶಾಂತಿನ ಕೊಡಲಿತ್ತೇಳಿ ಪ್ರಾರ್ಥಿಸುವೆ.

ಅಪ್ಪ : ಕಲ್ಲುಮುಟ್ಲು ಯಾದವ, ಅವ್ವ ರುಕ್ಮಿಣಿ ತಮ್ಮ ಪವನ ಮತ್ತೆ
ಕುಟುಂಬದವು, ನೆಂಟರಿಷ್ಟರ್‌ಗ ಹಂಗೆನೆ
ಕಲ್ಲುಮುಟ್ಲು ಬಸಪ್ಪ ಮತ್ತೆ ರೂಪ ದಂಪತಿಗ, ಬೆಂಗಳೂರು.

ಜನನ : 06-10-1980 ಮರಣ : 27-12-1998

---



ಶ್ರೀ ಸೆಟ್ಟೆಜನ ನರೇಂದ್ರ (ಷರಿ)

ಪ್ರಕಟಣೆ : ಚೇರಂಬಾಣೆ ಕ್ಷೇತ್ರದ ಸಂಗಾತಿ ಏಜೆಂಟ್ ಮತ್ತು ವರದಿಗಾರರಾಗಿ ಈ ಹಿಂದೆ ಕಾರ್ಯ ನಿರ್ವಹಿಸುತ್ತಿದ್ದ ಸೆಟ್ಟೆಜನ ನರೇಂದ್ರ (ಷರಿ) ಯವರನ್ನು ಇವರಿಗೆ ಆಸಕ್ತಿ ಇಲ್ಲದ ಕಾರಣ ಕೈ ಬಿಡಲಾಗಿದೆ. ಇನ್ನು ಮುಂದಕ್ಕೆ ಚೇರಂಬಾಣೆ ಕೊಳಗದಾಳು, ಬೇಂಗೂರು, ಐವತ್ತೋಕ್ಲು, ಕೊಟ್ಟೂರು, ಬಿಬಾಡಗ, ಚರಂಡೇಟಿ, ಕೋಪಟ್ಟಿ ಗ್ರಾಮಗಳಿಗೆ ಸೀಮಿತವಾಗಿ ವರದಿ ಕಲೆಕ್ಷನ್, ಜಾಹಿರಾತು ಇತ್ಯಾದಿಯಾಗಿ ಕೆಲಸ ನಿರ್ವಹಿಸಲು ಕೊಳಗದಾಳು ಗ್ರಾಮದ ಶ್ರೀ ಪಾಣತ್ತಲೆ ರಾಮಪ್ಪನವರನ್ನು ನಿಯೋಜಿಸಲಾಗಿದೆ. ಓದುಗರು ಎಂದಿನಂತೆ ಸಹಕರಿಸಬೇಕಾಗಿ ವಿನಂತಿ.

ವ್ಯವಸ್ಥಾಪಕರು

2000, ಡಿಸೆಂಬರ್ 16 ರಿಂದ 31ರ ತನಕ

# ಒಳನೋಟ


| ಕನ್ನಡ ವಿಭಾಗ | ಲೇಖಕರು | ಪುಟಗಳು |
|---|---|---|
| ಗೌಡರು ಸಾಮಾಜಿಕವಾಗಿ ವಿದ್ಯಾಭಿವೃದ್ಧಿಯಲ್ಲಿ ಹಿಂದುಳಿದಿರುವ ಅಂಕಿ ಅಂಶಗಳ ಪಟ್ಟಿ ತಯಾರಿಕೆಯ ಅವಶ್ಯಕತೆ | - ಸಂಪಾದಕೀಯ | 02 |
| ಗಣ್ಯ ವ್ಯಕ್ತಿಗಳ, ನುಡಿಮುತ್ತುಗಳು | - ಸಬ್ಬಂಡ್ರ ಶರತ್‌ಕುಮಾರ್ (ಸುಧಿ) | 02 |
| ಮೈಸೂರಿನಲ್ಲಿ ಕೊಡಗು ಗೌಡರ ಸಂಸ್ಕೃತಿ ಹಾಗೂ ಸಂಪ್ರದಾಯಕ್ಕೆ ಮಣೆ ಹಾಕಿದ ಕೊಡಗು ಗೌಡ ಮಾಜಿ ಸೈನಿಕರು. | - ಸಂಗಾತಿ | 03 |
| ಕವನ : ಸುಂದರ ತಾಣ ಅಬ್ಬಿ | - ಕಡಂಬಳ. ಮೋಹನ್ | 04 |
| ಕೊಡಗು ಗೌಡರ ಆದರ್ಶ ದಂಪತಿಗಳು, ಫ್ಯಾಷನ್ ಶೋ | - ಮೈಸೂರು ಮಿತ್ರ | 05 |
| ಬೈತಡ್ಕ ಜಾನಕಿ ರಚಿತ " ಹಸೆಮಣೆ " ಒಂದು ವಿಮರ್ಶೆ | - ಬಿಟ್ಟೀರ ಚೊಂದಮ್ಮ ಶಂಬು | 06 |
| ಪಂಚ ದ್ರಾವಿಡ ಭಾಷೆಯಲ್ಲಿ ಕನ್ನಡ ಅತಿ ಪ್ರಾಚೀನ ಭಾಷೆ | - ಕೆ. ಮುಕುಡಪ್ಪ. | 09 |
| "ಸಂಸ್ಕಾರ" : ಲಲಿತ ಪ್ರಬಂಧ | - ಕುಂಬಗೌಡನ ರಂಜಿತ್ | 14 |
| ಮಲಬದ್ಧತೆ | - ಡಾ\|\| ಪ್ರವೀಣ ಯನ್. ಎಸ್. | 16 |
| ದಕ್ಷಿಣ ಕನ್ನಡ ಮತ್ತು ಕೊಡಗು ಗೌಡ ಸಮಾಜ, ಸೋಮವಾರ ಪೇಟೆ | - ಸೂದನ ಎನ್. ಸೋಮಣ್ಣ | 17 |
| ಸಂಗಾತಿ ಭವಿಷ್ಯ | - ಜ್ಯೋತಿಷ್ ಗಿರೀಶ್ ಕುಮಾರ್ | 18 |
| ಮರುಕದ ಕರುಳು | - ಬಾರಿಯಂಡ ಜೋಯಪ್ಪ | 19 |
| **ಅರೆಭಾಷಿಕ ವಿಭಾಗ** | | |
| ಐನ್‌ಮನೆ : | - ತೆಕ್ಕದ ಬಿ. ಕುಮಾರ, | 07 |
| ವಾಂಟೆಡ್ ಮಿಸ್ಟರ್ ರಾಜು - ಧಾರಾವಾಹಿ - 23 | - ಶಂಕರನ ಬಸಪ್ಪ | 12 |



| | |
|---|---|
| ಚಂದಾ ಕಳುಹಿಸುವ ಮತ್ತು ಜಾಹೀರಾತು ಪ್ರಸಾರ ಕಛೇರಿ | **ಕೊಡಗು ಸಂಗಾತಿ,** 35,"ಸವಿತಾ ನಿಲಯ", 1ನೇ ಕ್ರಾಸ್, 4ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - 12. ಫೋನ್ : **0821/516771** |
| ಮಡಿಕೇರಿಯಲ್ಲಿ ಸಂಗಾತಿ ಕಛೇರಿ | ಬೈತಡ್ಕ ಜಾನಕಿ ಬೆಳ್ಯಪ್ಪ,,ನಂ. 21-16 ಎಲ್. ಐ. ಸಿ. ಹತ್ತಿರ, ರೇಸ್ ಕೋರ್ಸ್ ರಸ್ತೆ, ಮಡಿಕೇರಿ, ಫೋನ್ : **08272/28047** |
| ಚಿಹ್ನೆ, ಹಸೆಮಣೆ/ಶುಭಾಶಯ ಕಾರ್ಡ್ಸ್ ಕ್ಯಾಸೆಟ್/ಕೀ ಚೈನ್ ಲಭ್ಯ | **ಚೆರಿಯಮನೆ ರಮೇಶ್,** C/o ಪಾಂಡ್ಯನ್ ಕ್ಯಾಸೆಟ್ ಅಂಗಡಿ, ಖಾಸಗಿ ಬಸ್ ನಿಲ್ದಾಣ, ಮಡಿಕೇರಿ, ಫೋನ್ : 08272/29620 |
| ಕುಶಾಲ ನಗರ | ಕುಂಭಗೌಡನ ಸೋಮಣ್ಣ, ಮಯೂರ ಕೋಲ್ಡ್ ಸ್ಟೋರೇಜ್, ಮುಖ್ಯ ರಸ್ತೆ, ಕುಶಾಲನಗರ - 571 234 ಫೋನ್ : 08276/73370 |
| ಬೆಂಗಳೂರು ಮಹಾನಗರ | ಅಮ್ಮಾಜೀರ ಪೊನ್ನಪ್ಪ, 20, 1ನೇ ಮೈನ್, 4ನೇ ಕ್ರಾಸ್, ಸಾಕಮ್ಮ ಗಾರ್ಡನ್, ಬಸವನಗುಡಿ, ಬೆಂಗಳೂರು - 04, ಫೋನ್ :080/6342822 |
| ಬೆಂಗಳೂರು ಮಹಾನಗರ | ಕಲ್ಲುಮುಟ್ಲು ಬಸಪ್ಪ, ನಂ. 37, 3ನೇ ಮೇನ್, ನಂಜಪ್ಪ ಬ್ಲಾಕ್, ಕೆಂಪೇಗೌಡ ನಗರ, ಬೆಂಗಳೂರು -19,ಫೋನ್ : 080/6500946 |

**ಚಂದಾ ವಿವರ : ಜೀವಾವಧಿ ಸದಸ್ಯತನ - 2000 ರೂ., ಬಿಡಿ ಪ್ರತಿ - 6 ರೂ., ಅರ್ಧ ವಾರ್ಷಿಕ -75 ರೂ., ವಾರ್ಷಿಕ ಚಂದಾ - 150 ರೂ. (ಅಂಚೆ ವೆಚ್ಚ ಸೇರಿ), ಒಲೆಗೊಂದರಂತೆ ಸದಸ್ಯರಾಗಿ ಕೊಂಡು ಓದಿ.**

# ಸಂಪಾದಕೀಯ : ಗೌಡರು ಸಾಮಾಜಿಕವಾಗಿ ವಿದ್ಯಾಭಿವೃದ್ಧಿಯಲ್ಲಿ ಹಿಂದುಳಿದಿರುವ ಅಂಕಿ ಅಂಶಗಳ ಪಟ್ಟಿ ತಯಾರಿಕೆಯ ಅವಶ್ಯಕತೆ

ಕರ್ನಾಟಕ ಹಾಗೂ ಕೇಂದ್ರದ ಹಿಂದುಳಿದ ಪಂಗಡಗಳ ಪ್ರತಿ ಜಾತಿ ಯಾ ಪಂಗಡದ ಸಾಮಾಜಿಕ, ಆರ್ಥಿಕ ಹಾಗೂ ವಿದ್ಯಾಭ್ಯಾಸ ವಿಷಯ ಅಂಕಿ ಅಂಶಗಳನ್ನು ಕೇಳಿದರೆ ಗೌಡರಲ್ಲಿ ಶೇಕಡವಾರು ಕೂಲಿಕಾರರು ಎಷ್ಟು ? ಜಮೀನು ಇಲ್ಲದವರು ಎಷ್ಟು ? ಅರ್ಧ ಹೆಕ್ಟೇರ್ ಇರುವವರು ಎಷ್ಟು? ಒಂದು, ಎರಡು .... ಹತ್ತು.. ಇಪ್ಪತ್ತು ... ನೂರು ಸಾವಿರ ಹೆಕ್ಟೇರ್ ಎಷ್ಟು? ಅವಿದ್ಯಾವಂತರು ಎಷ್ಟು ಅದೇ ರೀತಿ ಯಸ್. ಯಸ್. ಎಲ್. ಸಿ., ಪಿ.ಯು.ಸಿ, ಪದವಿ ಇಂಜಿನಿಯರ್, ವೈದ್ಯರು, ಉಪಾಧ್ಯಾಯರು ಕೆ.ಎ.ಯಸ್, ಐ. ಎ.ಯಸ್ ಅಧಿಕಾರಿಗಳು ಎಷ್ಟು? ಮುಂತಾದ ಹಲವಾರು ಪ್ರಶ್ನಾವಳಿಗಳನ್ನು ಇಟ್ಟಿದ್ದಾರೆ.

ಇವೆಲ್ಲದಕ್ಕೂ ಸೂಕ್ತವಾದ ಉತ್ತರ ನಮ್ಮ ವಿದ್ಯಾಸಂಘಗಳಲ್ಲಾಗಲೀ ಯಾ ಗೌಡ ಸಮಾಜಗಳಲ್ಲಾಗಲೀ ಇಲ್ಲವಾದ್ದರಿಂದ ಸಂದರ್ಭ ಬಂದಾಗ ಆಯೋಗದ ಮುಂದೆ ಹೇಳಲು ಅಥವಾ ಬರವಣಿಗೆಯಲ್ಲಿ ಕೊಡಲು ಸಾಧ್ಯವಾಗದ ಸಂದರ್ಭ ಹೆಚ್ಚು. ಮುಂಬರುವ ದಿನಗಳಲ್ಲಿ ನಡೆಯುವ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕೊಡಗು ಜಿಲ್ಲೆ ಗೌಡರ ಸಮ್ಮೇಳನದಲ್ಲಿ ಮೇಲೆ ಕಾಣಿಸಿದ ಅಂಕಿ ಅಂಶಗಳನ್ನು ಆಯಾಯ ಆಯೋಗದ ಪ್ರಶ್ನಾವಳಿಗಳಿಗೆ ತಕ್ಕ ಉತ್ತರವನ್ನು ಕಂಡು ಹಿಡಿಯಲು ತಕ್ಕ ಏರ್ಪಾಡು ಮಾಡಿ ಈ ರೀತಿಯ ಸಮ್ಮೇಳನ ನಡೆಸಿದರೆ ಸಾರ್ಥಕವಾದೀತೆಂದು ಸಂಗಾತಿಯ ಸಲಹೆ.

---

## ಗಣ್ಯ ವ್ಯಕ್ತಿಗಳ, ನುಡಿಮುತ್ತುಗಳು

1. ನಮ್ಮನ್ನು ನಾವು ಗೆದ್ದಾಗ ಮಾತ್ರ ರಾಮ ರಾಜ್ಯದ ನಿರ್ಮಾಣ ಸಾಧ್ಯವಾಗುತ್ತದೆ. ಅದಿಲ್ಲದಿದ್ದರೆ ದೇಶ ರಾವಣ ರಾಜ್ಯವಾಗಿ ಮಾರ್ಪಡಲಿದೆ.

   — ಮಹಾತ್ಮ ಗಾಂಧಿ,

2. ಅಧಿಕಾರಿವಿರುವದು ದಬ್ಬಾಳಿಕೆಗಾಗಿ ಅಲ್ಲ, ಸಾರ್ವಜನಿಕ ಸೇವೆಗಾಗಿ ಮತ್ತು ಶಾಂತಿ ನೆಮ್ಮದಿ ಕಾಪಾಡುವ ಸಲುವಾಗಿ.

   — ಜವಹರಲಾಲ್ ನೆಹರೂ.

3. ಉತ್ತಮ ನಡತೆಯೇ ತಂದೆ ತಾಯಿ ಮಕ್ಕಳಿಗೆ ನೀಡಬೇಕಾದ ನಿಜವಾದ ಆಸ್ತಿ.

   — ರಾಮಕೃಷ್ಣ ಪರಮಹಂಸ

4. ನಾವು ಸುಖವನ್ನು ಕೋರುವುದಿಲ್ಲ, ದುಃಖವನ್ನು ಕೋರುವುದಿಲ್ಲ ಅವುಗಳ ಮೂಲಕ ಅವನ್ನು ಮೀರಿರುವುದನ್ನು ಪಡೆಯಲು ಯತ್ನಿಸುತ್ತೇವೆ.

   — ಸ್ವಾಮಿ ವಿವೇಕಾನಂದ

5. ಕೇವಲ ಕಷ್ಟ ಕಾಲದಲ್ಲಿ ಮಾತ್ರ ದೇವರನ್ನು ಪ್ರಾರ್ಥಿಸದೆ, ನಿರಂತರವಾಗಿ ನೆನೆಯಬೇಕಾದ ಮಾನವತೆಯ ಪ್ರೀತಿಯೇ ದೇವರು.

   — ರವಿಶಂಕರ್ ಸ್ವಾಮೀಜಿ,

6. ಉತ್ತಮ ಪುಸ್ತಕಗಳನ್ನು ಓದುವುದೆಂದರೆ ಬುದ್ಧಿಗೆ ಕಸರತ್ತು ಹಾಗೂ ಮನರಂಜನೆಯನ್ನು ಪಡೆಯಲು ಸಾಧ್ಯ.

   —ಸರ್ವಪಲ್ಲಿ ರಾಧಾಕೃಷ್ಣನ್

7. ಬಾಲ್ಯದಲ್ಲಿ ಮಕ್ಕಳಿಗೆ ಉತ್ತಮ ಶಿಕ್ಷಣ ದೊರೆತಲ್ಲಿ ಅವರು ದೇಶದಲ್ಲಿ ಸತ್ಪ್ರಜೆಗಳಾಗಿ ಬಾಳುವದು ಸಾಧ್ಯ.

   —ಡಾ. ವಿ. ರಾಧಾಕೃಷ್ಣನ್,

8. ಅವರವರ ಮನಸ್ಸೇ ಅವರವರ ಮಿತ್ರ ಮತ್ತು ಶತ್ರು,

   —ಸದ್ಗುರು ಸಾಯಿಶಂಕರ.

9. ಭೂಮಂಡಲದ ಸಕಲ ಸೂತ್ರಗಳನ್ನು ಕೈಯಲ್ಲಿ ಹಿಡಿದು ಕೊನೆಯವರೆಗೂ ಆಳುವವು ಸತ್ಯವಂತರು.

   — ಏಸು ಕ್ರಿಸ್ತ,

10 ದುರಹಂಕಾರ ಮಾನವನಲ್ಲಿದ್ದರೆ ಆತ ತನ್ನನ್ನು ತಾನೇ ಕೊಂದು ಕೊಂಡಂತೆ.

   — ಮಹಮದ್ ಪೈಗಂಬರ್,

ಸಂಗ್ರಹ : ಸಬ್ಬಂಡ್ರ ಶರತ್‌ಕುಮಾರ್ (ಸುಧಿ), ಮಕ್ಕಂದೂರು.

---

**ಕೃತಿ ಇಲ್ಲದ ಮಾತು, ಕಸ ಬೆಳೆವ ತೋಟದಂತೆ,**

# ಮೈಸೂರಿನಲ್ಲಿ ಕೊಡಗು ಗೌಡರ ಸಂಸ್ಕೃತಿ ಹಾಗೂ ಸಂಪ್ರದಾಯಕ್ಕೆ ಮಣೆ ಹಾಕಿದ ಕೊಡಗು ಗೌಡ ಮಾಜಿ ಸೈನಿಕರು.

ದಿನಾಂಕ 3-12-2000ದ ಭಾನವಾರದಂದು ಮೈಸೂರಿನ ಕಲಾ ಮಂದಿರದಲ್ಲಿ ಕೊಡಗು ಗೌಡರ ಸಮ್ಮಿಲನ ಹಾಗೂ ಸಂಸ್ಕೃತಿ, ಸಂಪ್ರದಾಯಗಳ ಪ್ರದರ್ಶನದ ಹೊಣೆಗಾರಿಕೆಯನ್ನು ಕೊ.ಗೌ. ಮಾ.ಸೈನಿಕರು ಹೊತ್ತು ಮೈಸೂರಿನ ಜನತೆಗೆ ತಮ್ಮ ಸಂಸ್ಕೃತಿ ಸಂಪ್ರದಾಯವನ್ನು ಎತ್ತಿ ತೋರಿಸುವಲ್ಲಿ ಸಫಲವಾಗಿದೆ. ನಶಿಸುತ್ತಿರುವ ನಮ್ಮ ಸಂಸ್ಕೃತಿ ಹಾಗೂ ಸಂಪ್ರದಾಯಗಳನ್ನು ಮೇಲುಕುಹಾಕಲು, ಅಲ್ಲದೆ ಮುಂದಿನ ಪೀಳಿಗೆಗಳಿಗೆ ತಮ್ಮ ಸಂಸ್ಕೃತಿ ಹಾಗೂ ಸಂಪ್ರದಾಯಗಳ ಪರಿಚಯವನ್ನು ಕೊಡುವ ಉದ್ದೇಶವೂ ಮಾಜಿ ಸೈನಿಕರದಾಗಿತ್ತು. ಇಂದು ನಮ್ಮ ಜನಾಂಗ ಸಂಸ್ಕೃತಿ ಹಾಗೂ ಸಂಪ್ರದಾಯಗಳಿಗೆ ಸ್ಪಂದಿಸದೇ ಇರುವ ಈ ಸಮಯದಲ್ಲಿ ಸ್ಪಂದನವಾಗುವಂತೆ ಚಟುವಟಿಕೆಗಳನ್ನು ಹಮ್ಮಿಕೊಂಡು ಜನರ ಮನಗೆದ್ದ ಕೊಡಗಿನ ಗೌಡ ಮಾಜಿ ಸೈನಿಕರಿಗೆ ಸಲ್ಲುತ್ತದೆ. ಶಿಸ್ತಿನ ಸಿಪಾಯಿಗಳ ಕಸರತ್ತಿನ ಪ್ರತಿಫಲ ಇಂದು ಮೈಸೂರಿನಲ್ಲಿ ಈ ಕಾರ್ಯಕ್ರಮ ಯಶಸ್ವಿಗೊಂಡಿದ್ದೇ ಅಲ್ಲದೆ ಮೈಸೂರಿನಲ್ಲಿ ಕೊಡಗಿನ ಗೌಡರ ಇರುವಿಕೆಯನ್ನು ಪುಷ್ಠೀಕರಿಸಿ ನಾವು ಇತರರಿಗಿಂತ ಯಾವುದರಲ್ಲಿಯೂ ಕಮ್ಮಿಯಿಲ್ಲವೆಂದು ನಮ್ಮ ಮಾಜಿ ಸೈನಿಕರು ತೋರಿಸಿರುತ್ತಾರೆ. ಜನಾಂಗದ ಸಂಪ್ರದಾಯ ಉಡುಗೆ, ತೊಡುಗೆಗಳ ಪ್ರದರ್ಶನ ದಿಂದ ಕೊಡಗಿನಲ್ಲಿಯೂ ಗೌಡರಿದ್ದಾರೆ, ಅವರ ಉಡುಗೆ, ತೊಡುಗೆಗಳೇ ವಿಭಿನ್ನವಾದವುಗಳೆಂದು ಮೈಸೂರಿನ ಜನತೆಯ ಮನೆಮಾತಾಗುವಂತೆ ಮಾಡಿದೆ. ಇದಕ್ಕೆ ನಮ್ಮ ಜನಾಂಗ ಸ್ಪಂದಿಸಿರುವುದು ನಿಜಕ್ಕೂ ಸಂತೋಷದ ವಿಷಯ.

ಬೆಳಿಗ್ಗೆ ಹತ್ತುಗಂಟೆಗೆ ಪ್ರಾರಂಭವಾಗಬೇಕಿದ್ದ ಕಾರ್ಯಕ್ರಮವು 11-00ಗಂಟೆಗೆ ಸರಿಯಾಗಿ ಪ್ರಾರಂಭವಾಯಿತು. 10ಗಂಟೆಗೆ ಸರಿಯಾಗಿ ಶಿಸ್ತಿನ ಸಿಪಾಯಿಗಳಂತೆ ಅತಿಥಿ ಗಣ್ಯರಾದ ನಮ್ಮ ಕೊಡಗು ಗೌಡ ಸಮಾಜದ ಅಧ್ಯಕ್ಷರಾದ ತೋಟಂಬೈಲು ನಾಣಯ್ಯ, ಗೌಡ ಮಹಿಳಾ ಒಕ್ಕೂಟದ ಅಧ್ಯಕ್ಷರಾದ ಚೇಯಂಡಿ ರಾಧ ಯಾದವ್, ಬೆಂಗಳೂರಿನ ಗೌಡ ಸಮಾಜದ ನಿರ್ದೇಶಕರಾದ ಮೊಟ್ಟನ ರವಿಕುಮಾರ್, ಬೆಂಗಳೂರಿನ ಕೊಡಗು ಹಾಗೂ ದಕ್ಷಿಣ ಕನ್ನಡ ಸಮಾಜದ ಕಾರ್ಯದರ್ಶಿ ನೂಜಿ ದಿನಕರ ಗೌಡ, ಹಾಜರಿದ್ದು ಜನರ ಬರುವಿಕೆಯನ್ನು ಸ್ವಾಗತಿಸುವಂತೆ ಆಸೀನರಾಗಿದ್ದರು. ಗಣ್ಯ ಅತಿಥಿಗಳನ್ನು ಸಂಘದ ಕಾರ್ಯಕಾರಿ ಮಂಡಳಿಯವರು ಹಾಜರಿದ್ದು ಬರಮಾಡಿಕೊಂಡರು. ಸ್ವಲ್ಪ ತಡವಾಗಿಯಾದರೂ ಇನ್ನೊಬ್ಬ ಗಣ್ಯ ವ್ಯಕ್ತಿ, ನಮ್ಮ ಅತಿಥಿಗಳಾದ ತುಂತಜೆ ಗಣೇಶ್‌ರವರು ಆಗಮಿಸಿ ನಮ್ಮ ಕರ್ತವ್ಯವನ್ನು ಪೂರ್ಣಗೊಳಿಸಿದರು. ಬೆಳಿಗ್ಗೆ ಮುಖ್ಯ ಅತಿಥಿಗಳಾದ ತೋಟಂಬೈಲು ನಾಣಯ್ಯ, ನೂಜಿ ದಿನಕರಗೌಡ, ಮೊಟ್ಟನ ರವಿಕುಮಾರ್, ಚೇಯಂಡಿ ರಾಧಾ ಯಾದವ್, ಹಾಗೂ ಸಂಘದ ಅಧ್ಯಕ್ಷರಾದ ತಡಿಯಪ್ಪನ ಕುಮಾರಜಯ ರವರೂ ಜ್ಯೋತಿಯನ್ನು ಬೆಳಗಿಸಿದರು. ಪ್ರಾರ್ಥನೆಯನ್ನು ಅಮ್ಮಾಜೀರ ದೃತಿ ಪೊನ್ನಪ್ಪ, ಬಿಟ್ಟೀರ ರೀನಾ ಶಂಭು ಹಾಗೂ ಹೊಸೂರು ಸಂಧ್ಯಾ ಗಂಗಾಧರನವರಿಂದ ನೆರವೇರಿತು. ತದನಂತರ ಆದರ್ಶ ದಂಪತಿಗಳು, ಗೌಡ ಕಿಶೋರರ ಹಾಗೂ ಗೌಡ ಕಿಶೋರಿಯರ ಪರಿಚಯವಾಯಿತು. ಆದರ್ಶ ದಂಪತಿಗಳಲ್ಲಿ ಮಾಳಿಗೆಮನೆ ಜನಾರ್ಧನ್ ದಂಪತಿಗಳು, ತಡಿಯಪ್ಪನ ಬೆಳ್ಯಪ್ಪ ದಂಪತಿಗಳು, ಕುದುಕುಳಿ ಜನಾರ್ಧನ ದಂಪತಿಗಳು, ಮೊಟ್ಟನ ರವಿಕುಮಾರ್ ದಂಪತಿಗಳು, ಕೊಡಲಿಂಗನ ಮೇದಪ್ಪ ದಂಪತಿಗಳು, ಕೊಂಬಾರನ ಭೀಮಯ್ಯ ದಂಪತಿಗಳು, ಅಮ್ಮಾಜೀರ ಪೊನ್ನಪ್ಪದಂಪತಿಗಳು, ಕತ್ರಿಕೊಲ್ಲಿ ವಸಂತ ದಂಪತಿಗಳು ಹಾಗೂ ನಾಟೋಳನ ಶ್ರೀಧರ ದಂಪತಿಗಳು ಭಾಗವಹಿಸಿದ್ದರು. ಆದರ್ಶ ದಂಪತಿಗಳ ಪ್ರಥಮ ಬಹುಮಾನವನ್ನು ಬೆಂಗಳೂರಿನ ಮೊಟ್ಟನ ರವಿಕುಮಾರ್ ದಂಪತಿಗಳು ಪಡೆದರೆ, ಎರಡನೇ ಬಹುಮಾನವನ್ನು ಸಹ ಬೆಂಗಳೂರಿನ ಕುದುಕುಳಿ ಜನಾರ್ಧನ್ ದಂಪತಿಗಳು ಪಡೆದರು.

ಗೌಡಕಿಶೋರಿಯರ ಫ್ಯಾಷನ್ ಷೊ ಸ್ಪರ್ಧೆಯಲ್ಲಿ ಕರ್ಣಯ್ಯನ ಭಾಗ್ಯಶ್ರೀ ಮುದ್ದಯ್ಯ, ಪಾಂಡನ ಜಸ್ಮಿ ಪ್ರಕಾಶ್, ತುಂತಜೆ ಲತಾ ಉಲ್ಲಾಸ್, ಬಿಟ್ಟೀರ ರೀನಾಶಂಭು, ಪರ್ಲಕೋಟಿ ಪವಿತ್ರ ಕಾರ್ಯಪ್ಪ, ಹುದೇರಿ ಟೀನಾ ಸೋಮಣ್ಣ, ಕೊರಂಬಡ್ಕ, ಪವಿತ್ರ ಬಸಪ್ಪ, ಮುಕ್ಕಾಟ್ಟೀರ ಆಶಾಗೋಪಾಲ, ಕುದುಪಜೆ ಸುಶ್ಮ ಕುಶಾಲಪ್ಪ, ಪಳಂಗೋಟು ರಶ್ಮಿ ಶೇಖರ್, ಶಿರಕಜೆ ಸುಮ ಚೆಟ್ಟಿಯಪ್ಪನವರು. ಭಾಗವಹಿಸಿದ್ದರು. ಮೊದಲನೆ ಬಹುಮಾನ ವನ್ನು ಬೆಂಗಳೂರಿನ ಬಿಟ್ಟೀರ ರೀನಾ ಶಂಭು ತನ್ನದಾಗಿಸಿದರೆ, ಎರಡನೇ ಬಹುಮಾನ ವನ್ನು ಶಿರಕಜೆ ಸುಮ ಚೆಟ್ಟಿಯಪ್ಪ ತನ್ನ ಮಡಿಲಿಗೆ ಹಾಕಿಕೊಂಡರು.

ಗೌಡ ಕಿಶೋರ್ ಸ್ಪರ್ಧೆಯಲ್ಲಿ ಮೂಡಗದ್ದೆ ಸುಮನ್, ಪರಚನ ಪ್ರದೀಪ್, ಹಾಗೂ ಮೆರಕಜೆ ಗಿರೀಶ್ ವಿಶ್ವನಾಥ್ ಭಾಗವಹಿಸಿ, ಮೊದಲನೇ ಬಹುಮಾನವನ್ನು ಕೊಡಗಿನ ಮೂಡಗದ್ದೆ ಸುಮನ್ ಗೆದ್ದರೆ, 2ನೇ ಬಹುಮಾನವನ್ನು ಪರಚನ ಪ್ರದೀಪ್ ತನ್ನದಾಗಿಸಿಕೊಂಡರು. ಈ ಸ್ಪರ್ಧೆಗಳ ಮಧ್ಯೆ ನೃತ್ಯಗಳನ್ನು ಅಳವಡಿಸಲಾಗಿತ್ತು. ನೃತ್ಯಗಳಲ್ಲಿ ಅಮ್ಮಾಜೀರ ನೀತು, ಹಾಗೂ ದೃತಿ ಪೊನ್ನಪ್ಪ, ಬೆಂಗಳೂರಿನ ಮೂಟೇರ ಅಂಜಲಿ ಉತ್ತಪ್ಪ, ಪಳಂಗಾಯ ಎಲಿಯಣ್ಣ ಜಯಶ್ರೀ, ಕುಮಾರಿ, ಬೈಲೇರ ಸೋಮಣ್ಣ ಯೋಗಿತ ಮತ್ತು ಬೈಚನ ದಿಯಾನ ಭಾಗವಹಿಸಿ, ಬೆಂಗಳೂರಿನ ಅಂಜಲಿ ಉತ್ತಪ್ಪ ತನ್ನ ಅಪ್ರತಿಮ ಬಾಲ್ಯಕಲೆಯನ್ನು ಪ್ರದರ್ಶಿಸಿದಳು. ಕಾವೇರಿನಾಡಿನ ಸಂಸ್ಥಾಪಕ ಅಮ್ಮಾಜೀರ ಪೊನ್ನಪ್ಪನವರು ಗುಡ್ಡೆಮನೆ ಅಪ್ಪಯ್ಯಗೌಡರ ಒಂದು ತುಣುಕನ್ನು ಪ್ರದರ್ಶಿಸಿದರು. ಮಧ್ಯಾಹ್ನದ ಭೋಜನ ನಂತರ ಸಭಾ ಕಾರ್ಯಕ್ರಮ ಪ್ರಾರಂಭವಾಯಿತು.

ವೇದಿಕೆಯಲ್ಲಿ ಅತಿಥಿಗಳಾಗಿ ಕೊಡಗುಗೌಡ ಸಮಾಜದ ಅಧ್ಯಕ್ಷರಾದ ತೋಟಂಬೈಲು ನಾಣಯ್ಯನವರು, ಕೊಡಗುಗೌಡ

ಅರ್ಧ ಕಲಿತವನಿಗೆ ಅಬ್ಬರ ಹೆಚ್ಚು

ಸಾಂಸ್ಕೃತಿಕ ಅಕಾಡೆಮಿಯ ಅಧ್ಯಕ್ಷರಾದ ತುಂತಜೆ ಗಣೇಶ್‌ನವರು, ಗೌಡ ಮಹಿಳಾ ಒಕ್ಕೂಟದ ಅಧ್ಯಕ್ಷೆ ಚೀಯಂಡಿ ರಾಧ ಯಾದವ್ ರವರು ಬೆಂಗಳೂರು ಕೊಡಗು ಗೌಡ ಸಮಾಜದ ನಿರ್ದೇಶಕರಾದ ಮೊಟ್ಟನ ರವಿಕುಮಾರ್‌ನವರು, ಹಾಗೂ ಬೆಂಗಳೂರಿನ ಕೊಡಗು ಮತ್ತು ದ. ಕ. ಜಿಲ್ಲಾ ಗೌಡ ಸಮಾಜದ ಕಾರ್ಯದರ್ಶಿ ನೂಜಿ ದಿನಕರ ಗೌಡನವರು ಆಸೀನರಾಗಿದ್ದರು. ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೊ. ಗೌ. ಮಾ. ಸೈ. ಕ್ಷೇ. ಸಂಘದ ಅಧ್ಯಕ್ಷರಾದ ತಡಿಯಪ್ಪನ ಕುಮಾರ ಜಯ ವಹಿಸಿದ್ದರು.

ಅತಿಥಿಗಳ ಪರಿಚಯವನ್ನು ಸಂಘದ ಉಪಾಧ್ಯಕ್ಷರಾದ ಶ್ರೀ ಕುಯ್ಯಮುಡಿ ರಾಮಪ್ಪನವರು ಮಾಡಿದರು. ಸಂಘದ ಅಧ್ಯಕ್ಷರ ಪ್ರಾಸ್ತಾವಿಕ ಭಾಷಣದ ನಂತರ, ಕೊಡಗು ಗೌಡ ಸಮಾಜದ ಅಧ್ಯಕ್ಷರಾದ ತೋಟಂಬೈಲು ನಾಣಯ್ಯನವರಿಂದ ಜನಾಂಗಕ್ಕೆ ಕೆಲವು ಕಿವಿಮಾತುಗಳನ್ನು ಹೇಳಿ ಆದರ್ಶ ದಂಪತಿ ಹಾಗೂ ಫ್ಯಾಷನ್ ಶೋ ಕಾರ್ಯಕ್ರಮವನ್ನು ಉತ್ತಮ ಮಟ್ಟದೆಂದು, ಪ್ರತಿಭೆಗಳಿಗೆ ಇಂತಾ ವೇದಿಕೆ ಒಂದು ಒಳ್ಳೆಯ ಅವಕಾಶವನ್ನು ಮಾಡಿ ಕೊಟ್ಟಿದೆ ಎಂದು ಹೇಳಿದರು. ಕೊಡಗು ಗೌಡ ಅಕಾಡಮಿಯ ಅಧ್ಯಕ್ಷರಾದ ತುಂತಜೆ ಗಣೇಶ್ ಮಾತನಾಡಿ ನಮ್ಮ ಸಂಸ್ಕೃತಿ ಸಂಪ್ರದಾಯಗಳನ್ನು ಪ್ರದರ್ಶಿಸಬೇಕು. ತಮ್ಮ ಆಚಾರವಿಚಾರ, ಭಾಷೆಯನ್ನು ಬೆಳೆಸಬೇಕು, ಇದಕ್ಕೆ ನಮ್ಮ ಕೀಳರಿಮೆಯನ್ನು ಬದಿಗೊತ್ತಬೇಕೆಂದು ಕರೆ ನೀಡಿದರು. ಕೊಡಗು ಗೌಡ ಸಮಾಜ ಬೆಂಗಳೂರಿನ ನಿರ್ದೇಶಕರಾದ ಮೊಟ್ಟನ ರವಿಕುಮಾರ್ ಮಾತನಾಡಿ ಬೆಂಗಳೂರಿನಲ್ಲಿ ಉದಯವಾಗಲಿರುವ ವಿದ್ಯಾಸಂಸ್ಥೆಗೆ ಜನ ಸ್ಪಂದಿಸಿಬೇಕೆಂದು, ಅಲ್ಲದೆ ವಿದ್ಯಾಸಂಘದ ಉದ್ದೇಶಗಳನ್ನು ವಿವರಿಸಿದರು. ಇನ್ನೋರ್ವ ಮುಖ್ಯ ಅತಿಥಿಗಳಾದ ಬೆಂಗಳೂರಿನ ಕೊಡಗು ಮತ್ತು ದಕ್ಷಿಮ ಕನ್ನಡ ಗೌಡ ಸಮಾಜದ ಕಾರ್ಯದರ್ಶಿ ಆದ ನೂಜಿ ದಿನಕರ ಗೌಡ ಮಾತನಾಡಿ ಜನ ಸಂಘಟನೆಗೆ ಉತ್ತಮವಾದ ಕಾರ್ಯಕ್ರಮ, ಜನಾಂಗ ಹಾಗೂ ಮಾಜಿ ಸೈನಿಕರಿಗೆ ತಮ್ಮ ಅನುಭವ ಉದಾಹರಣೆಯನ್ನು ಉಲ್ಲೇಖಿಸಿ ತಮ್ಮ ಅಮೂಲ್ಯವಾದ ಹಿತವಚನವನ್ನು ನೀಡಿದರು.

1. ಕೊಡಗು ಗೌಡ ಸಮಾಜ, ಮಡಿಕೇರಿ ಇವರು ನೀಡಿದ ಆದರ್ಶ ದಂಪತಿ ಮೊದಲನೆ ಬಹುಮಾನವನ್ನು ಕೊಡಗು ಗೌಡ ಸಮಾಜದ ಅಧ್ಯಕ್ಷರಾದ ತೋಟಂಬೈಲು ನಾಣಯ್ಯರವರು ವಿತರಿಸಿದರು.
2. ಗೌಡ ಮಹಿಳಾ ಒಕ್ಕೂಟ, ಮಡಿಕೇರಿ, ಇವರು ನೀಡಿದ ಆದರ್ಶ ದಂಪತಿ ಎರಡನೇ ಬಹುಮಾನವನ್ನು ಗೌಡ ಮಹಿಳಾ ಒಕ್ಕೂಟದ ಅಧ್ಯಕ್ಷರಾದ ಚೀಯಂಡಿ ರಾಧ ಯಾದವ್ ರವರು ವಿತರಿಸಿದರು.
3. ಕೊಡಗು ಗೌಡ ಸಮಾಜ, ಬೆಂಗಳೂರು ಇವರು ನೀಡಿದ ಗೌಡ ಕಿಶೋರಿ ಮೊದಲನೆ ಬಹುಮಾನವನ್ನು ಕೊಡಗು ಗೌಡ ಸಮಾಜ, ಬೆಂಗಳೂರು ಇದರ ನಿರ್ದೇಶಕರಾದ ಮೊಟ್ಟನ ರವಿಕುಮಾರ್‌ರವರು ವಿತರಿಸಿದರು.
4. ಕೊಡಗು ವಿದ್ಯಾಸಂಘ, ಮಡಿಕೇರಿ ನೀಡಿದ ಗೌಡ ಕಿಶೋರಿ ಎರಡನೇ ಬಹುಮಾನವನ್ನು ವಿದ್ಯಾಸಂಘದ ಪರವಾಗಿ ಕೊಡಗು ಗೌಡ ಮಾಜಿ ಸೈನಿಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ತಡಿಯಪ್ಪನ ಕುಮಾರ್ ಜಯರವರು ವಿತರಿಸಿದರು.
5. ದಕ್ಷಿಣ ಕನ್ನಡ ಹಾಗೂ ಕೊಡಗು ಗೌಡ ಸಮಾಜ, ಬೆಂಗಳೂರು ಇವರು ನೀಡಿದ ಗೌಡ ಕಿಶೋರ್ ಮೊದಲನೆ ಬಹುಮಾನವನ್ನು ದ.ಕ. ಹಾಗೂ ಕೊಡಗು ಗೌಡ ಸಮಾಜದ ಕಾರ್ಯದರ್ಶಿ ನೂಜಿ ದಿನಕರ ಗೌಡರು ವಿತರಿಸಿದರು.
6. ಕೊಡಗು ಗೌಡ ಸಾಂಸ್ಕೃತಿಕ ಅಕಾಡಮಿ ಮಡಿಕೇರಿ ನೀಡಿದ ಗೌಡ ಕಿಶೋರ್ ಎರಡನೇ ಬಹುಮಾನವನ್ನು ಅಕಾಡಮಿ ಅಧ್ಯಕ್ಷರಾದ ತುಂತಜೆ ಗಣೇಶ್‌ರವರು ವಿತರಿಸಿದರು.

ಕಾರ್ಯಕ್ರಮದ ಕೊನೆಗೆ ವೇದಿಕೆಯಲ್ಲಿ ನೃತ್ಯ, ಆದರ್ಶ ದಂಪತಿಗಳು ಹಾಗೂ ಫ್ಯಾಷನ್ ಶೋ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲರಿಗೂ ಮಾಜಿ ಸೈನಿಕರ ನೆನಪಿನ ಕಾಣಿಕೆಯನ್ನು ನೀಡಿ ಗೌರವಿಸಲಾಯಿತು. ಸಂಘದ ಆರ್ಥಿಕ ಅಭಿವೃದ್ಧಿಗಾಗಿ ಅಳವಡಿಸಿದ ಲಾಟರಿ ಯೋಜನೆಯನ್ನಯ ಲಾಟರಿಯನ್ನು ಮುಖ್ಯ ಅತಿಥಿಗಳಿಂದ ಎತ್ತಲಾಯಿತು. ಇದರಲ್ಲಿ 10 ಬಹುಮಾನಗಳಿದ್ದವು. ಈ ಕಾರ್ಯಕ್ರಮದ ನಿರೂಪಣೆ ಮಾಡಿದ ಬೆಂಗಳೂರಿನ ಕರ್ಣಯ್ಯನ ಸುನಿಲ್ ಹಾಗೂ ಎಡಿಕೇರಿ ಸುದರ್ಶನ್‌ರವರನ್ನು ಗೌರವಿಸಲಾಗಿ, ಶ್ರೀಯುತರುಗಳು ತಮ್ಮ ನಿರೂಪಣೆಗೆ ಜನರಿಂದಲೂ, ಅತಿಥಿಗಳಿಂದಲೂ ಅಲ್ಲದೇ ಮಾಜಿ ಸೈನಿಕರಿಂದಲೂ ಶಹಬಾಶ್‌ಗಿರಿ ಪಡೆದು ಉತ್ತಮ ನಿರೂಪಕರೆಂದೆನಿಸಿಕೊಂಡರು. ಸೈನಿಕರ ಸಂಘದ ಕಾರ್ಯದರ್ಶಿ ಕರ್ಣಯ್ಯನ ಪಿ. ಲಕ್ಷ್ಮಣನವರು ಸರ್ವರನ್ನು ವಂದಿಸಿದರು.

— ಸಂಗಾತಿ.

## ಸುಂದರ ತಾಣ ಅಬ್ಬಿ

ಅಬ್ಬಿ ಜಲಪಾತ ನೋಡಲು ಬಹು ಚಂದ
ನೀರನ್ನು ನೋಡಿ ಆಡಲೂ ಆನಂದ
ಕೊರ್ರೆಸುವ ಶಬ್ದವನ್ನು ಹೊರಸೂಸಿ ದುಮುಕುತಿದೆ
ಹಾಲಿನ ನೊರೆಯನ್ನು ಹೊರ ಚೆಲ್ಲುತ್ತಿದೆ.
ಗೋಪುರದ ಶಿಲೆಯನ್ನು ಹೋಲುತ್ತಿದೆ.
ಅಂಕು ಡೊಂಕಿನಿಂದ ನರ್ತಿಸುತ್ತ ಹರಿಯುತಿದೆ.
ಇದನ್ನು ನೋಡಲು ಪ್ರವಾಸಿಗರು ಬರುತ್ತಾರೆ.

ನೀರು ನೋಡಿ ಈಜಲು ಹೋಗುತ್ತಾರೆ
ತಮ್ಮ ಸಾಹಸವನ್ನು ಎಲ್ಲರಿಗೂ ತೋರಿಸುತ್ತಾರೆ
ಈಜಲು ಆಗದೆ ಮುಳುಗಿ ಪ್ರಾಣ ಬಿಡುತ್ತಾರೆ
ಬರುವಾಗ ಸಂತೋಷದಿಂದ ಬರುತ್ತಾರೆ
ಹಿಂತಿರುಗುವಾಗ ದುಃಖದಿಂದ ತೆರಳುತ್ತಾರೆ.
ನೋಡಲು ಬಂದವರಿಗೆ ಪ್ರವಾಸಿ ಸ್ಥಳವಾಗಿದೆ.
ನೀರಿನಲ್ಲಿ ಇಳಿದವರಿಗೆ ಮೃತ್ಯು ಕೂಪವಾಗಿದೆ.

— ಕಡಂಬಳ ಮೋಹನ್ ಗಾಳಿಬೀಡು.

# ಕೊಡಗು ಗೌಡರ ಆದರ್ಶ ದಂಪತಿಗಳು, ಫ್ಯಾಷನ್ ಶೋ

ಮೈಸೂರು, ಡಿ.3- ಕೊಡಗು ಗೌಡ ಮಾಜಿ ಸೈನಿಕರ ಕ್ಷೇಮಾಭಿ ವೃದ್ಧಿ ಸಂಘ ತನ್ನಪ್ರಥಮ ವಾರ್ಷಿಕೋತ್ಸವದ ಅಂಗವಾಗಿ ಇಂದು ಕಲಾ ಮಂದಿರದಲ್ಲಿ ಆಯೋಜಿಸಿದ್ದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲೊಂದಾದ ನಡೆದ ಆದರ್ಶ ದಂಪತಿಗಳ ಸ್ಪರ್ಧೆಯಲ್ಲಿ ಬೆಂಗಳೂರಿನ ಕೊಡಗುಗೌಡ ಸಮಾಜದ ನಿರ್ದೇಶಕ ಮೊಟ್ಟನ ರವಿಕುಮಾರ್ ದಂಪತಿಗಳು ಪ್ರಥಮ ಸ್ಥಾನ ಗಳಿಸಿದರು.

ಒಟ್ಟು ೯ ದಂಪತಿಗಳು ಭಾಗವಹಿಸಿದ್ದ ಸ್ಪರ್ಧೆಯಲ್ಲಿ ಕುದುಕುಳಿ ಜನಾರ್ಧನ್ ದಂಪತಿಗಳು ಎರಡನೆಯ ಸ್ಥಾನ ಪಡೆದರು. ಗಂಡ-ಹೆಂಡಿರ ನಡುವೆ ಇರುವ ಸಾಮರಸ್ಯವನ್ನು ಪರೀಕ್ಷಿಸಲು ಮೂಕಾಭಿನಯ, ಪ್ರೇಕ್ಷಕರಿಗೆ ಮನರಂಜನೆ ಒದಗಿಸಲು ಗಂಡನ ಮುಖಕ್ಕೆ ಬಿಂದಿ ಅಂಟಿಸುವುದು, ಹೂವಿನ ಹಾರ ಬದಲಾಯಿಸು ವುದು, ಇವೇ ಮುಂತಾದ ಸ್ಪರ್ಧೆಗಳು ನಡೆದವು.

ಕಿಕ್ಕಿರಿದು ನೆರೆದಿದ್ದ ಸಭಿಕರು ಈ ಸುಂದರ ಸಮಾರಂಭದ ಸೊಬಗನ್ನು ಸವಿದರು. ಸಮಾರಂಭವನ್ನು ಕೊಡಗು ಗೌಡ ಸಮಾಜದ ಅಧ್ಯಕ್ಷ ತೋಟಂಬೈಲು ಎಂ. ನಾಣಯ್ಯ ದೀಪ ಬೆಳಗಿಸಿ ಉದ್ಘಾಟಿಸಿದರು.

ಇದೇ ಸಂದರ್ಭದಲ್ಲಿ ನಡೆದ 'ಗೌಡ ಕಿಶೋರ' ಹಾಗೂ 'ಗೌಡ ಕಿಶೋರಿ 'ಸ್ಪರ್ಧೆಗಳಲ್ಲಿ ಅನುಕ್ರಮವಾಗಿ ಮೂಡಗದ್ದೆ ಸುಮನ್, ಪರಚನ ಪ್ರದೀಪ್ ಹಾಗೂ ಬಿಟ್ರ ರೀನಾ ಶಂಭು, ಶಿರಕಜೆ ಸುಮ ಚೆಟ್ಟಿಯಪ್ಪ ವಿಜೇತರಾದರು.

ಸಭಿಕರೂ ಸಾಂಪ್ರದಾಯಿಕ ವೇಷ ಭೂಷಣದಲ್ಲಿದ್ದುದ ರಿಂದ ಅಲ್ಲಿ ಹಬ್ಬದ ವಾತಾವರಣ ತುಂಬಿ ತುಳುಕುತ್ತಿತ್ತು.

'ಗೌಡ ಕಿಶೋರಿ' ಪದವಿಗೆ ತೀವ್ರ ಪೈಪೋಟಿ ಏರ್ಪಟ್ಟಿತ್ತು. ಸ್ಪರ್ಧೆಯಲ್ಲಿ ಭಾಗವಹಿಸಿದ್ದ ೧೧ ಹುಡುಗಿಯರು ತಮ್ಮ ಪರಂಪರಾಗತ ಉಡುಪಿನಲ್ಲಿ ಮಿಂಚಿದರು. ಅಡಿಯಿಂದ ಮುಡಿಯವರೆಗೆ ಮೈತುಂಬ ಉಡುಗೆ ತೊಡುಗೆ ತೊಟ್ಟು ವಿನೂತನ ರೀತಿಯ ಫ್ಯಾಷನ್ ಶೋ ನಡೆಸಿಕೊಟ್ಟರು.

ರಂಗು ರಂಗಿನ ಉಡುಪುಗಳು ನೆರೆದಿದ್ದ ಪ್ರೇಕ್ಷಕರ ಮನರಂಜಿಸುವಲ್ಲಿ ಸಫಲವಾಯಿತಲ್ಲದೆ ಜನಾಂಗದ ಪರಂಪರ 'ಯನ್ನು ಪ್ರತಿಬಿಂಬಿಸಿತು.

೬ನೇ ತರಗತಿಯಲ್ಲಿ ಓದುತ್ತಿರುವ ಮೈಸೂರಿನ ಕರ್ಣಯ್ಯನ ಭಾಗ್ಯಶ್ರೀ ಮುದ್ದಯ್ಯ ಪರಂಪರಾಗತ ದಿರಿಸನ್ನು ಧರಿಸಿ ಪುಟ್ಟ ಪುಟ್ಟ ಹೆಜ್ಜೆಯನ್ನಿಟ್ಟು ರ್‍ಯಾಂಪ್ ಮೇಲೆ ನಡೆದಾಗ ನೆರೆದಿದ್ದವರ ಕರತಾಡನ ಕಿವಿಗಡಚಿಕ್ಕಿಸಿತು.

ಹುಡುಗರು ಬಿಳಿ ಪೇಟಾ, ಕುಪ್ಪಸದಟ್ಟಿ ತೊಟ್ಟು ನಡೆದಾ ಗಲೂ ಸಭಿಕರು ಉತ್ಸುಕರಾಗಿ ಅವರನ್ನು ಹುರಿದುಂಬಿಸಿದರು.

ಆದರ್ಶ ದಂಪತಿಗಳು ಮತ್ತು ಗೌಡ ಕಿಶೋರ-ಗೌಡ ಕಿಶೋರಿ ಸ್ಪರ್ಧೆಗಳ ನಡು ನಡುವೆ ಹಾಡು- ನೃತ್ಯಗಳು ನಡೆದವು. ಬೆಂಗಳೂರಿನ ೫ನೇ ತರಗತಿಯಲ್ಲಿ ಅಭ್ಯಸಿಸು ತ್ತಿರುವ ಮೂಟೇರ ಅಂಜಲಿ ಉತ್ತಪ್ಪ ಇತ್ತೀಚಿನ ಜನಪ್ರಿಯ ಹಿಂದಿ ಹಾಡು ಮಾಧುರಿ-ಪ್ರಭುದೇವ್ ಜೊತೆ ನರ್ತಿಸಿರುವ 'ಕೆ ಸರಾ ಸರಾ'ಹಾಡಿಗೆ ಮನಮೋಹಕವಾಗಿ ಕುಣಿದಳು.

ಸಮಾರಂಭದಲ್ಲಿ ಮಡಿಕೇರಿಯ ಕೊಡಗು ಗೌಡ ಸಮಾಜದ ಅಧ್ಯಕ್ಷ ತೋಟಂಬೈಲು ನಾಣಯ್ಯ, ಗೌಡ ಅಕಾಡೆಮಿ ಅಧ್ಯಕ್ಷ ತುಂತಜೆ ಗಣೇಶ್, ಗೌಡ ಮಹಿಳಾ ಒಕ್ಕೂಟದ ಅಧ್ಯಕ್ಷೆ ಚೀಯಂಡಿ ರಾಧ ಯಾದವ್, ಬೆಂಗಳೂರಿನ ದಕ್ಷಿಣ ಕನ್ನಡ ಮತ್ತು ಕೊಡಗು ಗೌಡ ಸಮಾಜದ ಕಾರ್ಯದರ್ಶಿ ದಿನಕರ ಗೌಡ, ಬೆಂಗಳೂರಿನ ಕೊಡಗು ಗೌಡ ಸಮಾಜದ ನಿರ್ದೇಶಕ ಮೊಟ್ಟನ ರವಿಕುಮಾರ್, ಕೊಡಗು ಗೌಡ ಮಾಜಿ ಸೈನಿಕರ ಕ್ಷೇಮಾಭಿವೃದ್ಧಿ, ಸಂಘದ ಅಧ್ಯಕ್ಷ ತಡಿಯಪ್ಪನ ಕುಮಾರ್ ಜಯ, ಉಪಾಧ್ಯಕ್ಷ ಕುಯ್ಯಮುಡಿ ರಾಮಪ್ಪ, ಕಾರ್ಯದರ್ಶಿ ಕರ್ಣಯ್ಯನ ಲಕ್ಷ್ಮಣ, ನಿರ್ದೇಶಕ ಪಟ್ಟಡ ಪ್ರಭಾಕರ್ ಮುಂತಾದವರು ಉಪಸ್ಥಿತರಿದ್ದರು.

### ರಂಜಕ ಉತ್ತರಗಳು

ಫ್ಯಾಷನ್ ಶೋದಲ್ಲಿ ಭಾಗವಹಿಸಿದ್ದ ಸ್ಪರ್ಧಾಳುಗಳು ತೀರ್ಪುಗಾರರ ಪ್ರಶ್ನೆಗಳಿಗೆ ಸ್ವಾರಸ್ಯಕರ ಉತ್ತರಗಳನ್ನು ನೀಡಿದರು.

ತೀರ್ಪುಗಾರರು ಪರ್ಲಕೋಟಿ ಪವಿತ್ರಳಿಗೆ ಕೇಳಿದ ಪ್ರಶ್ನೆ :ವೀರಪ್ಪನ್ ಏಕೆ ಹಿಡಿಯಲಾಗುತ್ತಿಲ್ಲ?"

ಒಂದು ಕ್ಷಣ ಯೋಚಿಸಿದ ಪವಿತ್ರ ಉತ್ತರಿಸಿದಳು : "ರಾಜಕೀಯವೇ ಇದಕ್ಕೆ ಕಾರಣ. ರಾಜಕೀಯದಲ್ಲಿರುವವರು ಇಚ್ಛಾಶಕ್ತಿಯ ಕೊರತೆಯಿಂದಾಗಿ ವೀರಪ್ಪನ್ ಇಂದು ಇಷ್ಟು ದೈತ್ಯಾಕಾರವಾಗಿ ಬೆಳೆದು ಬಿಟ್ಟಿದ್ದಾನೆ."

ಮಾತೃಭಾಷೆಯ ವಿದ್ಯಾಭ್ಯಾಸ ಏಕೆ ಅಗತ್ಯ"

ಎಂಬ ಪ್ರಶ್ನೆಗೆ ಸುಷ್ಮಾ ಕುಶಾಲಪ್ಪ " ನಾವು ಮೊದಲು ನಮ್ಮ ನಾಡು-ನುಡಿಯನ್ನು ಅರಿತು ಆಮೇಲೆ ಬೇರೆಯದಕ್ಕೆ ಪ್ರಾಮುಖ್ಯತೆ ಕೊಡಬೇಕು" ಎಂದು ಪ್ರೌಢ ಉತ್ತರವಿತ್ತಳು.

ತೀರ್ಪುಗಾರರು " ಭಾರತವು ಅಣ್ವಸ್ತ್ರ ತಯಾರಿಸಬೇಕೆ? ಬೇಡವೆ?" ಎಂಬ ಗಂಬೀರ ಪ್ರಶ್ನೆಗೆ ಆಶಾ ಗೋಪಾಲ ಎಂಬ ಸ್ಪರ್ಧಾಳು " ಅದು ಬೇಕು. ಏಕೆಂದರೆ ಅನ್ಯದೇಶೀಯರು ನಮ್ಮ ಮೇಲೆ ಆಕ್ರಮಣ ನಡೆಸದೇ ಇರಲಿ ಎಂದು ನಾವು ಅಣ್ವಸ್ತ್ರ ತಯಾರಿಸಬೇಕು. ಆದರೆ ಅದನ್ನು ಯಾರ ಮೇಲೂ ಪ್ರಯೋಗಿಸ ಬಾರದು" ಎಂದು ಉತ್ತರಿಸಿ ಪ್ರೇಕ್ಷಕರ ಚಪ್ಪಾಳೆ ಗಿಟ್ಟಿಸಿದಳು.

ಕಣ್ಮನವನ್ನು ಸೆಳೆಯುತ್ತಿದ್ದ ಪುಟಾಣಿ ಭಾಗ್ಯಶ್ರೀಗೆ ತೀರ್ಪುಗಾರರು " ನಿನಗೆ ಯಾವ ಚಲನಚಿತ್ರ ನಟ ಇಷ್ಟ?" ಎಂದು ಕೇಳಿದ್ದಕ್ಕೆ ತಟ್ಟನೆ ಒಂದು ಕ್ಷಣವೂ ಯೋಚಿಸದೆ "ಹೃತಿಕ್ ರೋಷನ್" ಎಂದು ಉತ್ತರಿಸಿದಳು. 'ಏಕೆ' ಎಂಬ ಮರುಪ್ರಶ್ನೆಗೆ "ಅವನ ಬಾಡಿ ಚೆನ್ನಾಗಿದೆ. ಅವನು ಡ್ಯಾನ್ಸ್ ಚೆನ್ನಾಗಿ ಮಾಡುತ್ತಾನೆ. ನೋಡಲು ಚೆನ್ನಾಗಿದ್ದಾನೆ" ಎಂದು ತುಂಟ ನಗೆ ಬೀರುತ್ತ ನುಡಿದಳು.

**(4-12-2000ದ ಮೈಸೂರು ಮಿತ್ರ ವರದಿ.)**

---

**ಗುಣ ನೋಡಿ ಹುಡುಗಿ ತರಬೇಕು, ಹಾಲು ನೋಡಿ ಹಸು ತರಬೇಕು.**

# ಬೈತಡ್ಕ ಜಾನಕಿ ರಚಿತ " ಹಸೆಮಣೆ " ಒಂದು ವಿಮರ್ಶೆ

"ಹಸೆಮಣೆ" ಎಷ್ಟು ಮುದ್ದಾದ ಹೆಸರು. ಕೇಳುವವರ, ನೋಡುವವರ ಮನಸ್ಸನ್ನು ಕ್ಷಣದಲ್ಲಿ ಸೆರೆಹಿಡಿಯುವ ಸಾಮರ್ಥ್ಯವಿರುವ ಅರ್ಥಪೂರ್ಣ ಶಿರೋನಾಮೆ ಮತ್ತು ಮುಖಪುಟದ ಚಿತ್ರಗಳು.

ಪುಸ್ತಕವನ್ನು ಕೈಗೆತ್ತಿಕೊಂಡಾಗ ಕಳೆದುಹೋದ ನಮ್ಮ ಮನೆಯ ಸದಸ್ಯರೊಬ್ಬರು ಮತ್ತೆ ಸಿಕ್ಕಿದಷ್ಟು ಸಂತೋಷವಾಯಿತು. ಪುಸ್ತಕದ ಮೊದಲ ಪುಟ ತೆರೆದಾಗ ಅಂತರಂಗದ ಕದ ತೆರೆದಂತಾಯಿತು. ಗೌಡರ ಕುಲದೇವ" ಶ್ರೀ ವೆಂಕಟರಮಣ ಸ್ವಾಮಿಯ ಚಿತ್ರ ಕಣ್ಮನ ತುಂಬಿತು. " ಸಣ್ಣ ಸಣ್ಣ ನಾಮಸಣ್ಣ ನೀಲಿಯ ನಾಮ ಎಷ್ಟೊಂದು ಹರಿನಾಮ" ಈ ಒಂದೇ ವಾಕ್ಯದಲ್ಲಿ ಇಡೀ ವಿಷ್ಣು ಪುರಾಣವೇ ಅಡಕವಾಗಿದೆ ಎಂಬುದು ಬಲ್ಲಿರಾ?

ಎರಡನೆಯ ಪುಟ ತಿರುವುತ್ತಿದ್ದಂತೆಯೆ, ಮೈ ರೋಮಾಂಚನವಾಯಿತು. ನನ್ನಾರಾಧ್ಯ ದೇವತೆ ಶಾರದೆಯ ಮುದ್ದಾದ ಚಿತ್ರ, ಅಲ್ಲದೆ ಶೃಂಗೇರಿ ಪೀಠದ ಈಗಿನ ಗುರುಗಳ ಭಾವಚಿತ್ರವು ಅರ್ಥಗರ್ಭಿತವಾಗಿದೆ.

ಒಂದೊಂದು ಪುಟಗಳನ್ನು ತೆರೆಯುತ್ತಾ ಹೋದಂತೆ ಗೌಡ ಜನಾಂಗದ ಜೀವನ ಚರಿತ್ರೆಯು ತೆರೆದಿಟ್ಟಂತೆ ಕಂಡಿತು. " ಜರಿಯ ಮುಂಡಾಸವ ತಲೆಯ ಮೇಲಿಟ್ಟು|ನೂಲಿನ ಜನಿವಾರ ಹೆಗಲಾ ಮೇಲಿಟ್ಟು| ನೀಟಾದ ನಾಮವ ಧರುಸ್ಯಾರು.| ಕಲ್ಯಾಣವೇ|| "ಕಾವೇರಿ ಹೊಳೆ ಹತ್ತಿ ಬರುತ್ತಾನೆ ಮದುವಣ್ಣಾ| ಚಿನ್ನಾದ ಜನಿವಾರ ಇಟ್ಟುಕೊಂಡು" ಈ ಸಾಲುಗಳನ್ನು ಓದಿದಾಗ, ಹಿಂದೆ ಗೌಡರು ಜನಿವಾರ ಧರಿಸುತ್ತಿದ್ದರು. ಅಲ್ಲದೆ ಬಾಸಿಂಗ ಕೂಡ ಕಟ್ಟುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಈಗಲೂ ಸಹ ಕೆಲವೊಂದು ಕುಟುಂಬದವರಿಗೆ ಪಟ್ಟೆ ಬಾಸಿಂಗವಿದೆ. ಇದೆಲ್ಲಾ ಇಂದು ಮರೆಯಾಗಿದೆ. ಇದಕ್ಕೆಲ್ಲಾ ಕಾರಣ ಕಾಲ ಮತ್ತು ಪರಿಸರ.

ಬಣ್ಣ ಬಂಗಾರದ ಹಾಡಿನಲ್ಲಿ ಬರುವ " ಆ ಊರು ಮಳೆ ಬಂದು ಈ ಊರು ಕೆರೆ ತುಂಬಿ, ಗೋವೇ ಸಾಗರದ ಹೊಸ ಮಳೆ " ಗೌಡರು ಗೋವಾ, ಸಾಗರ ಕಡೆಯಿಂದ ಸಾಗಿ ಬಂದಿರುವುದು ತಿಳಿಯುತ್ತದೆ. " ಮುತ್ತಿನ ಚೆಂಡು ಮುವತ್ತು ನವಲಕ್ಕಿ (ನವಿಲು +ಹಕ್ಕಿ) ಕಂಚಿಗೂ ಪುರದಿಂದೋದಿಸುವ ರೂಪಾಗಳಾ" ಕಂಚಿಪುರ (ಕಂಚಿಪಟ್ಟಣ, =ಕಾಂಜಿವರಂ) ದಿಂದ ತಂದಂತ ಸೀರೆಗೆ ಒಡಲೆಲ್ಲಾ ಮುತ್ತಿನ ಅಥವಾ ಚಿನ್ನದ ಚೆಂಡು ಇದೆ, ಮುವತ್ತು ನವಿಲು ಹಕ್ಕಿಗಳು ಅಂಚು ಮತ್ತು ಸೆರಗಿನಲ್ಲಿ ಇದೆ ಎಂದು ಸೀರೆಯನ್ನು ನಾನಾರೀತಿಯಲ್ಲಿ ವರ್ಣನೆ ಮಾಡಿ ಅದನ್ನು ಮದುಮಗಳಿಗೆ ಒದಿಸುತ್ತಾರೆ (ಒದಿಸು =ಕಾಣಿಕೆ ನೀಡು) " ಓಲೆ ಚಿನ್ನ ವೈನಾಡು" ಇಂದಿಗೂ ವೈನಾಡಿನ ಚಿನ್ನ ಬಹಳ ಹೆಸರುವಾಸಿಯಾದದ್ದು. ಕಂಚಿಪಟ್ಟಣದ (ಕಾಂಜೀವರಂ) ಸೀರೆ ವೈನಾಡಿನ ಚಿನ್ನವನ್ನು ತರುತ್ತಿದ್ದ ಗೌಡರು ಸಾಮಾನ್ಯರೇ ? ಅಂತಹ ಸೀರೆ ಉಡಿಸುವಾಗ ಚಿನ್ನ ತೊಡಿಸುವಾಗ ಅದನ್ನು ವರ್ಣಿಸುವ ಬಗೆ ಎಷ್ಟೊಂದು ವೈವಿಧ್ಯಮಯವಾಗಿದೆ. ಒಂದೊಂದು ಸಾಲು ಗೌಡರ ಆಚಾರ ವಿಚಾರಗಳನ್ನು ಪ್ರತಿಬಿಂಬಿಸುತ್ತಿದೆ. ಕೆಲವೊಂದು ಪದಗಳು, ಸಾಲುಗಳು, ಅಥವಾ ಇಡೀ ಪದ್ಯವೇ ಕೊಡಗಿಗೆ ಪಸರಿದ ನಂತರವೇ ಹೆಣೆದಿರಬಹುದು ಅಥವಾ ಮಾರ್ಪಾಟು ಆಗಿರಬಹುದು ಎಂಬ ಶಂಕೆಯು ಉಂಟಾಗುತ್ತದೆ.

ಸಬ್ಬಮ್ಮ ಶಾರದೆ ದೇವಿಗೆ ಹರಿಕೆ ಹಣ ಕಟ್ಟುವಾಗ ಹೇಳುವ ಹಾಡುಗಳು ಕೊಡಗಿನ ಗೌಡರಿಗೂ ಮಲೆನಾಡ ಗೌಡರಿಗೂ ಇರುವ ಸಂಬಂಧವನ್ನು ಸಾರಿ ಹೇಳುತ್ತದೆ. ಕೊಡಗು ಮಲೆಯ ಅಣ್ಣಂದಿರ ಮದುವೆಗೆ ಬರುವಾ ಸಬ್ಬಮ್ಮ ದೇವಿ ಹಿಡಿದ ಪನ್ನಕೊಡೆ, ಗಜ್ಜೆಕತ್ತಿ ಏನೋ ರಹಸ್ಯವನ್ನು ಹೇಳುವಂತಿದೆ.

ಇನ್ನೊಂದು ವಿಷಯವೆಂದರೆ ಗೌಡವತಿಯರ ತಾಳಿಸರ. ಅದು ಸಣ್ಣ ಸಣ್ಣ ಗುಂಡುಪೋಣಿಸಿ ಮಾಡಿದ ಸರವಾಗಿತ್ತು. ಬರಬರುತ್ತಾ, ಅಡ್ಡಿಗೆ ಚೈನ್, ರೋಪ್‌ಚೈನ್, ಕರಿಮಣಿಸರ ಹೀಗೆ ಬದಲಾಯಿತು. ಮಲೆನಾಡ ಗೌಡವತಿಯರು ಇಂದಿಗೂ ಗುಂಡುಗಳನ್ನೇ ಬಳಸುತ್ತಾರೆ. ಅದು ಅವರಿಗೆ ಪ್ರತಿಷ್ಠೆಯ ಸಂಕೇತವೂ ಹೌದಂತೆ.

ಒಟ್ಟಿನಲ್ಲಿ ಗೌಡರ ಬಗ್ಗೆ ಸಂಶೋಧನೆ ಮಾಡಲು ಉಳಿದಿರುವ ಒಂದೇ ಒಂದು ಆಶಾಕಿರಣ ಈ ಶೋಭಾನೆ (ಸೋಬಾನೆ) ಹಾಡುಗಳು. ಇದನ್ನು ಉಳಿಸಿ ಬೆಳಸಬೇಕಾದುದು ಪ್ರತಿಯೊಬ್ಬ ಗೌಡನ ಆದ್ಯ ಕರ್ತವ್ಯವೂ ಹೌದು, ಗೌಡರ ಖಜಾನೆಗೆ ಇಂತಹ ಒಂದು ಅನರ್ಘ್ಯ ರತ್ನವನ್ನು ಒದಗಿಸಿ ಕೊಟ್ಟ ಬೈತಡ್ಕ ಜಾನಕಿಯವರನ್ನು ಹಾಗೂ ಸೋಬಾನೆಗಳನ್ನು ಒದಗಿಸಿ ಕೊಟ್ಟ ಹಿರಿಯ ಬಂಧು ಭಗಿನಿಯರನ್ನೂ ಎಷ್ಟು ಶ್ಲಾಘಿಸಿದರೂ ಕಡಿಮೆಯೇ ? ನಮ್ಮ ಹಿರಿಯರು ಹಾಡುವಾಗ ಅಲ್ಲಲ್ಲಿ ಆಗುತ್ತಿದ್ದ ಉಚ್ಚಾರ ದೋಷಗಳನ್ನು ಆದಷ್ಟು ಮಟ್ಟಿಗೆ ಶುದ್ಧವಾಗಿಸಿದ್ದಾರೆ. ಎಲ್ಲದರ ಜೊತೆ, ಹೊನ್ನಮ್ಮನ ಕೆರೆಯ ಕತೆ, ಗಂಗೆ ಗೌರಿಕತೆ ಎಲ್ಲವೂ ಹಸೆಮಣೆಗೆ ಮೆರುಗು ನೀಡಿವೆ, ಸಾಕಷ್ಟು ಸೋಬಾನೆಗಳು ಬಿಟ್ಟು ಹೋಗಿದ್ದರೂ ಸಹ ಇದೊಂದು ಅದ್ಭುತ ಸಾಧನೆಯೇ ಸರಿ. ಮದುರಂಗಿ ಶಾಸ್ತ್ರದ ಹಾಡಂತು ಎಲೆ ತರಲು, ಬಣ್ಣರಿಂದ ವಿಮರ್ಶೆಮಾಡಿ, ಒಡ್ಡೋಲಗ ಸಮೇತ ಹೋಗಿ ಎಲೆ ತಂದು ಚಂದನದ ಮಣೆಯಲ್ಲಿ ಅರೆದು ಶೋಕ ಸಂಜೀವಿನಿ ಕಡ್ಡಿಯಿಂದ ಮದುರಂಗಿ ತಿದ್ದುತಿದ್ದರೆಂಬುದು ಆಶ್ಚರ್ಯಕರವಾಗಿದೆ.

ಸೋಬಾನೆಯ ಸಾಲುಗಳಿಗೆ ಅರ್ಥ ಬರೆಯುತ್ತಾ ಹೋದರೆ ಮುಗಿಯುವುದೇ ಇಲ್ಲ. ಇಂತಹ ಉತ್ಕೃಷ್ಟ ಸೋಬಾನೆ ಉಳಿಯಬೇಕಾದರೆ ಮದುವೆಗಳು ಮೊದಲಿನಂತೆ ಮನೆಗಳಲ್ಲೆ ನಡೆಯಬೇಕು. ಹಿರಿಯರು ಅನುಭವಿಗಳೂ ಆದ ಶ್ರೀಮಾನ್ ಪ್ರೊ. ಪೂಜಾರಿ ಮೊಣ್ಣಪ್ಪನವರ ಮುನ್ನುಡಿ ಹಸೆಮಣೆಗೆ ಮತ್ತಷ್ಟು ಮೆರುಗನ್ನು ನೀಡಿದೆ. ಗೌಡ ಜನಾಂಗ ಬಾಳಿ ಬದುಕಿ ನಡೆದು ಬಂದ ಹಾದಿಯ ಮೇಲೆ ಬೆಳಕು ಚೆಲ್ಲುವ ಬೈತಡ್ಕ ಜಾನಕಿಯವರ ಸಾಹಸವನ್ನು ಹೊಗಳಲು ಶಬ್ದವೇ ಸಿಗುತ್ತಿಲ್ಲ. ಇವರಿಗೂ ಇವರ ಕುಟುಂಬಕ್ಕೂ ಕುಲದೇವರು ಶ್ರೀ ವೆಂಕಟರಮಣ ಮತ್ತು ಶೃಂಗೇರಿ ಶಾರದಾ ಮಾತೆಯ ಕರುಣೆಯ ನೆರಳು ಸದಾ ಇರಲಿ ಎಂದು ಮನದುಂಬಿ ಹಾರೈಸುತ್ತೇನೆ.

— ಬಿಟ್ಟೀರ ಚೊಂದಮ್ಮ ಶಂಬು, ಬೆಂಗಳೂರು.

**ಮೇಲೆ ನೋಡಿ ಉಗುಳಿದರೆ ಬಾಯಿಗೇ ಬೀಳುವುದು ಖಂಡಿತ.**

# ಐನ್‌ಮನೆ :

ಅರಮನೆ, ಅರಮನೆಲೊಂದು ಗುರುಮನೆ ಇದ್ದದೆ. ಹಿಂದೆ ಒಂದು ಪ್ರದೇಶದ ಆಡಳಿತ ನಡ್ಸುವ ರಾಜನ ಮನೆನ ಅರಮನೆ ತೇಳುವೆ. ಅದ್ ಆ ಪ್ರದೇಶದ ಕೇಂದ್ರಲಿ ಇರ್ತಿತ್. ಅದ್ ಆ ರಾಜ್ಯದ ರಾಜಧಾನಿ. ಆ ಅರಮನೆಗೆ ಬಹಳ ಮಹತ್ವ. ಅದೇ ಅರಮನೆಲಿ ಗುರುಮನೆ ಕೂಡ ಇರ್ತಿತ್ತ್. ಗುರಿವಿನ ಮಾರ್ಗದರ್ಶನ ಇಲ್ದೆ ರಾಜ ತನ್ನ ಕಾರ್ಬಾರ್‌ನೆ ಮಾಡ್ತಿತ್ತ್‌ಲೆ. ಆ ಅರಮನೆಲಿ ಅಥವಾ ಅದಿಕೆ ಹೊಂದಿಕಂಡ್ ಆ ರಾಜನ ವಂಸದ ದೇವುರ ದೇವಸ್ಥಾನ ಇತ್ತ್. ಆ ದೇವುರ ಉತ್ಸವ ವರ್ಷಕ್ಕೊಂದು ಸಲ ಚಾಚೂತಪ್ಪದೆ ನಡ್ಕಂಡ್ ಬರ್ತಿತ್ತ್. ಅದ್ ರಾಜನ ಆಜ್ಞಾನುಸಾರ ನಿಯಮಬದ್ದವಾಗಿ ಯಾವುದೇ ಲೋಪ ಇಲ್ಲದೆ ನಡೆತಿತ್ತ್. ಕಾಲಕ್ರಮೇಣ ರಾಜ ಮನೆತನದ ಪತನ ಆದಂಗೆ ಕೇವಲ ಅರಮನೆ ಉಳ್ದ್ ಆ ಸಾಂಪ್ರದಾಯಿಕ ಹಿನ್ನಲೆ ಹಂಗೆನೆ ಮುಂದ್‌ವರ್ತ್‌. ಅಂತದರ್ಲಿ ಮೈಸೂರು ಅರಮನೆ ಅಲ್ಲಿ ಪ್ರತಿ ವರ್ಷ ನಡೆಯುವ ಚಾಮುಂಡೇಶ್ವರಿ ಉತ್ಸವ ದಸರ ಹಬ್ಬ ಒಂದು.

ನೂರಾರ್ ವರ್ಷಗಳ ಹಿಂದೆ ಗೌಡ ಜನಾಂಗಕ್ಕೆ ಸಂಬಂಧಿಸಿದ ಜನ ಹಲವು ಕಡೆಂದ, ಕೆಲವು ಕಾರಣಂದ ಕೊಡಗ್ ನಾಡಿಗೆ ಬಂದೊ. ಬಂದವು ಬಹಳಷ್ಟ್ ಜನ ಇಲ್ಲಿ ನೆಲೆ ನಿಂತೊ. ಇಲ್ಲೆ ನೆಲೆ ನಿಂತವು ತಮ್ಮ ಕುಟುಂಬದ ಊರುನ ಕೆಲವೊಂದು ಸಾಂಪ್ರದಾಯಿಕ ಆಚರಣೆನ, ಸಂಸ್ಕೃತಿನ, ಭಾಸೆನ ಇಲ್ಲಿ ಮುಂದುವರ್ಸಿದೊ. ತಮ್ಮ ಕುಟುಂಬಕ್ಕೆ ಸಂಬಂದಿಸಿದ ದೇವುರ, ದೈವನ ಇಲ್ಲಿಯೂ ಆರಾಧನೆ ಮಾಡಿಕಂಡ್ ಬಂದೊ. ಸುರ ಕ್ರಿಯಾದಿಗಳಂದ ದೇವುರ್‌ನ, ಸುರ-ಅಸುರ ಕ್ರಿಯಾದಿಗಳಂದ ದೈವನ ಪೂಜಿಕಂಡ್ ಮುಂದುವರ್ದ ಅದರ್ನ ತಮ್ಮ ಪೀಳಿಗೆಗೆ ರವಾನಿಸಿಕಂಡ್ ಬಂದೊ. ಹಿಂಗೆ ತಾವು ನೆಲ್ಸಿದ ಜಾಗಲಿ ಸಾಮಾನ್ಯ ಭವ್ಯ ವಾಸ್ತು ನಿರ್ಮಾಣ ಮಾಡಿ ಕೌಟುಂಬಿಕ ಜೀವನ ಪ್ರಾರಂಭಿಸಿ ತನ್ನ ಕುಟುಂಬ, ಮನೆಗೆ ನಾಮಕರಣ ಮಾಡ್ದೊ, ಈ ನಾಮಕರಣನ ಕೆಲವು ಜನ ತಮ್ಮ ಮೂಲ ಮನೆ ಹೆಸ್ರ ಅಂದರೆ ತಾವು ಇತರ ಊರುಲಿ ಇರ್‌ಕನ ಇದ್ದ ಮನೆ ಹೆಸ್ರ್, ಇನ್ನ್ ಕೆಲವು ಜನ ತಾವು ತಕಂಡ, ಸಾಗುವಳಿ ಮಾಡ್ತ ಇರುವ ಮಣ್ಣ್‌ನ, ತಾವು ಯಾರ ಕೈಯಿಂದ ತಕೊಂಡ ಅದರ ಹೆಸ್ರ್ ಅಥವಾ ಅವರ ಮನೆ ಹೆಸ್ರ್ ಹಾಕಿದೊ .ಇನ್ನ್ ಕೆಲವು ಜನ ಕಾಲ್ಪನಿಕ, ಪ್ರಾಕೃತಿಕ ಅಥವಾ ತನ್ನ ಹೆಸ್ರಂದಲೆ ಆ ಮನೆಗೆ ನಾಮಕರಣ ಮಾಡಿ ಆ ಒಂದು ಕುಟುಂಬನ ವೃದ್ಧಿಸಿದೊ.

ಹಿಂದೆ ಪಿತೃಪ್ರಧಾನ ಕುಟುಂಬ ಅವಿಭಕ್ತ ಕುಟುಂಬ ಆಚರಣೆಲಿ ಇತ್ತ್. ಪಿತೃ ಪ್ರಧಾನ ಕುಟುಂಬ ಅಥವಾ ಅವಿಭಕ್ತ ಕುಟುಂಬಲಿ ಆ ಕುಟುಂಬದ ಹಿರಿಯವನೆ ಮುಖ್ಯ ಕುಟುಂಬದ ಜವಾಬ್ದಾರಿನ ನೋಡಿ ಕಂಬತಿತ್ತ್ ಅವನ ನಿರೂಪಣೆ ಮಾರ್ಗದರ್ಶನ ಹಂಗೆ ಕಿರಿಯರ ಸಹಕಾರ ಸಹಾನುಭೂತಿಂದ ಅಂದ್‌ನ ಕುಟುಂಬ ಜೀವನ ನಡ್ಸ್‌ತಿತ್ತ್. ಇಂತ ಸಮಯಲಿ ಕಾಲಂದ ಕಾಲಕ್ಕೆ ಆ ಕುಟುಂಬದ ಸದಸ್ಯರ ಸಂಖ್ಯೆ ಜಾಸ್ತಿ ಆಗ್ತಾಹೋತ್. ಅದರಂದ ಅವರ ಅನುಕೂಲಕ್ಕಾಗಿ ಅಂದರೆ ದೊಡ್ಡದಾದ ಭವ್ಯವಾದ ಮನೆ ನಿರ್ಮಾಣ ಮಾಡಿಕೆ ತೊಡ್ಗಿದೊ. ಇಂತ ದೊಡ್ಡ ಮನೆ ವಿಸ್ತಾರ ಆದ ಆಯಕಟ್ಟಲಿ, ಚೌಕಕಾರಲಿ, ಕೆಲವೊಂದು ಮನೆ ಒಳಾಂಗಣ ಹೊಂದಿರುವ ಹಂಗೆ ಮಾಳಿಗೆ ಇರುವ ಮನೆ ರೂಪಗೊಂಡತ್.

ಪಿತೃಪ್ರಧಾನ ಕುಟುಂಬಲಿ ರೂಪಗೊಂಡ ಈ ಮನೆ ಬಹಳ ದೊಡ್ಡದಾಗಿತ್. ಈ ಮನೆನ ವಾಸ್ತು ಶಿಲ್ಪ ಆಧಾರದ ಮೇಲೆ ಕಟ್ಟಿದೊ. ಎತ್ತರ ಆಗಿ ಇರುವ ಅಭಿಪಾಯ ಎತ್ತರದ ಜಗ್‌ಲ್ ಹೊರಗಡೆ ತೆರ್ದ್ ಕೈಯಾಲೆ ಕೈಯಾಲೆಲಿ ಎಡ ಬಲ ಬದಿಗೆ ಐಮರ ಕೂರುವ ಜಾಗ ಅದಿಕೆ ಮರ ಹಾಕಿ ನಿರ್ಮಿಸಿದೊ. ಮಧ್ಯಲಿ ಮೆಟ್ಲ್ ಮೆಟ್ಲ್ ಹತ್ತಿದಂಗೆ ಐಮರದ ಎರಡ್ ಮೂಲ ತುದಿಲಿ ವೃತ್ತಾಕಾರದ ಚೌಕಾಕರದ ಹಲವ್ನ ಭುಜ ಇರುವ ಕಂಬನ ಚಿತ್ತಾಕೃತಿಲಿ ನಿರ್ಮಿಸಿದೊ. ಮುಂದೆ ಮನೆ ಒಳಗೆ ಪ್ರವೇಶ ಮಾಡಿಕೆ ಬೃಹತ್ ಆಕಾರದ ವಿಸ್ತಾರ ಆದ ಮೂಡನ ಬಾಗಲ್ ಎಲ್ಲಾ ಮನೆಗೆ ಪೂರ್ವ ಪಶ್ಚಿಮವಾಗಿಯೇ ಇದ್ದ್ ಮುಖ್ಯದ್ವಾರ ಪೂರ್ವಕಡೆಗೆ ಇರ್‌ತ್ತತ್. ಅದರ ಡಟ್ಲಗ ಚಿತ್ರ ವಿಚಿತ್ರ ಕೈ ಕೆಲ್ಸಂದ ಕೂಡಿತ್ತ್. ಸೂರ್ಯ, ಚಂದ್ರ, ಎಲೆ, ಹೂ, ಬಳ್ಳಿ ಮನುಷ್ಯನ ಮುಖಾಕೃತಿಂದ ಕೆತ್ತಿ ನಿರ್ಮಾಣ ಮಾಡ್ತಿದ್ದೊ. ಮುಖ್ಯದ್ವಾರಂದ ಒಳಬಾಗನ ಬಾಡೆನ ಕಡಿಮೆ ಅಗಲ ಹೆಚ್ಚ್ ಉದ್ದ ಇರುವಂಗೆ ನಿರ್ಮಿಸಿದೊ. ಬಾಡೆ ಗೊಡೆಲಿ ಮೂಡದಿಕ್ಕಿಗೆ ಒಂದು ಗುಳಿಲಿ ಮಣ್ಣ್‌ನ ದೀಪ ಇಡ್ತಿದ್ದೊ. ಬಾಡೆ ಮೂಲೆಲಿ ಅಟ್ಟಕ್ಕೆ ಹೋಕೆ ಏಣಿ ಇತ್ತ್. ನಂತರ ಮೂರು ಬದಿ, ಎರಡ್ ಬದಿ ನಾಲ್ಕು ಬದಿ ಮಲ್ಗುವ ಕೋಣೆಗ ಇರ್ತಿದ್ದೊ ಈ ಕೋಣೆಗೆ ಬೆಳ್ಕ್‌ನ ವ್ಯವಸ್ಥೆ ಕಡಿಮೆ ಇದ್ದ್ ಕತ್ತಲೆ ಕೋಣೆ ಆಗೆ ಇರ್ತಿತ್. ಹಿಂಬದಿಲಿ ಕುಂಞಿ ಬಾಡೆ ಮತ್ತೆ ಅಡಿಗೆ ಮನೆ ಅಡಿಗೆ ಮನೆಗೆ ಉದ್ದದ ಹಿಂದಕ್ಕೆ ಮುಂದಕ್ಕೆ ತಳ್ಳುವ ಮರದ ಕಿಡಿಕ್ಕೆ ಮಾಡ್ದೊ. ಹಿಂಗೆ ತಮ್ಮ ಕುಟುಂಬದ ವಾಸಸ್ತ್ಯಕ್ಕೆ ಅನುಕೂಲ ಆದಂಗೆ ಆ ಒಂದು ಮನೆನ ನಿರ್ಮಾಣ ಮಾಡ್ದೊ. ಅದರ್ನೆ ನಾವು ಇಂದ್ ದೊಡ್ಡಮನೆ, ಐನ್ ಮನೆತ ಕರ್ದವೆ.

ಈ ಒಂದು ದೊಡ್ಡ ಮನೆಲಿ ಕೈಯಾಲೆಲಿ ಒಂದು ತೂಗುವ ದೀಪ, ಬಾಡೆಲಿ ಗೋಡೆ ಕಂಡಿಲಿ ಮಣ್ಣಿನ ದೀಪ, ಅಟ್ಟಲಿ ವೆಂಕಟರಮಣ ದೇವುರ ಮುಡುಪು ಇದ್ದ್ ಒಂದು ದೇವಸ್ಥಾನದ ಮಾದರಿಲಿ ಇತ್ತ್. ಬಾಡೆ ಮತ್ತೆ ಅಲ್ಲಿರುವ ದೀಪ ತುಂಬಾ ಪವಿತ್ರ. ಯಾವುದೇ ಕಾರ್ಯಕ್ರಮ ನಡಿಯೋಕುತ ಆದರೆ ಬಾಡೆ ದೀಪ ಹಚ್ಚಿ ಅಲ್ಲಿಗೆ ಅಕ್ಕಿ ಹಾಕಿ ತಮ್ಮ ಕಾರ್ಯಕ್ರಮ ಮಾಡ್ತಿದ್ದೊ. ಹಿಂದೆ ದೂರ ಪ್ರಯಾಣ ಮಾಡೊಕುತಾದರೆ ದೇವರು ಸ್ಥಳಕ್ಕೆ ಹೋಕುತ್ತಾದರೆ, ಮಿಲಿಟರಿಗೆ ಹೋಕನ, ಕೂಸುನ ತೊಟ್ಟಿಗಿಲ್‌ಗೆ ಹಾಕ್‌ಕನ, ಯಾವುದೆ ಹರ್ಕೆ ಹೇಳಿಕಂಬಕನ, ಗೂಡೆಗಳ ನೆರ್ದ ಮದುವೆ ಮಾಡಕನ ಈ ಬಾಡೆ ದೀಪನ ಹೊಸ ಮನೆವರನ್ನೆಲ್ಲಾ ಕರ್ದ ಎಲ್ಲವು ಅಕ್ಕಿ ಹಿಡ್ಕಂಡ್ ಹಿರಿಯಂವ ಒಕ್ಕಣೆ ಹೇಳಿ ದೀಪಕ್ಕೆ ಅಕ್ಕಿ ಹಾಕಿ ಎಲ್ಲಾ ಹಿರಿಯರ

ಮನೆ ಇಲ್ಲದವನಿಗೆ ಮಾನ ಇಲ್ಲ, ಹಣ ಇಲ್ಲದವನಿಗೆ ಬೆಲೆ ಇಲ್ಲ.

ಕೈ ಕಾಲ್ ಹಿಡ್ದ್ ಮುಂದೆನ ಕಾರ್ಯ ಮಾಡ್ತಿದ್ದೊ. ಹಿಂದೆ ಮತ್ತೆ ಈಗಲೂ ಮದುವೆ ಆಕನ ಹಸೆ ಬರಿಯೋದು, ಗೂಡೆ ಅಥವಾ ಹೈದ್ ಕುದ್ದ್ ಅವನ ಎಲ್ಲಾ ಶಾಸ್ತ್ರ ನಡಿಯದು ಈ ದೀಪದಡಿಲೆ. ಇದರ್ನ ನೆಲ್ಕಕ್ಕಿ ಅಡಿತ ಕರ್ದವೆ. ಇದ್ ಈಗಲೂ ದೊಡ್ಡ ಮನೆಲಿ ರೂಢಿಲಿ ಉಟ್ಟು.

ಆ ಒಂದು ಕುಟುಂಬದ ಯಾವುದೇ ಕಾರ್ಯಕ್ರಮ ಪ್ರಾರಂಬ ಆಕೆ ಮುಂದೆ ಕಾರಣಕೆ ಮಡ್ಗುದು ರೂಢಿ . ಹುಂಜ ಲಾಕಿನ ಕೊಂದ್ ಸಾರ್ ಮಾಡಿ, ನೀರ್ ದೋಸೆ ಅಥವಾ ರೊಟ್ಟಿ ಮಾಡಿ ಒಂದು ಅನ್ನಬಾಗುವ ಚಿಬ್ಬುಲುಲಿ ನೀರ್ ದೋಸೆ, ರೊಟ್ಟಿ, ಅನ್ನ ಅದಿಕೆ ಕೋಳಿ ಗೈಪು ಹಾಕಿ ಅಡಿಗೆ ಮನೆ ಬೆಸೆಗೆಲಿ ಮಡಿಗಿ ಹಂಗೆನೆ ಕುಪ್ಪಿ ಗಲಾಸ್‌ಲಿ ಬೈನೆ ಕಳ್ಳ್ ಅಥವಾ ಭತ್ತದ ಸರಾಯ ಮಡಿಗೆ ಎಲ್ಲವು ಅಕ್ಕಿ ಹಾಕಿ ಕೈ ಮುಕ್ಕಂಡ್ ಕೆಲ ನಿಮಿಷ ಹಿಂದೆ ತಿರಿಗಿ ಮೌನವಾಗಿ ಇದ್ದ್ ಮತ್ತೆ ವಾಪಾಸ್‌ತಿರಿಗೆ ಎಡೆನ ಎಳ್ದ್ ಮಡಿಗಿದ ಕಳ್ಳನ ಪಟ್ಟೆದಾರಂಗೆ ಕೊಟ್ಟ್ ನೀರ್ ದೋಸೆ ಮಾಸ ತುಂಡ್‌ನ ಕೊಟ್ಟ್ ಎಲ್ಲವೂ ಹಂಚಿತಿಂದ್ ಮುಂದೆನ ಕಾರ್ಯಕ್ರಮ ಸುರು ಮಾಡ್ತಿದ್ದೊ.

ದೊಡ್ಡ ಮನೆಲಿ ಬಹಳ ಕಟ್ಟ್ ಕಟ್ಟಲೆ ಉಟ್ಟು. ಪ್ರಸೂತಿ ಆದವು ಮೂರು ದಿನ ಕೊಟ್ಟಿಗೆಲೆ ಮಲ್ಗೋಕು. ದೊಡ್ಡ ಮನೆಲಿ ಇರಿಕೆ ಬೊತ್ತ್. ಐಮರಲಿ ಹೆಣ್ಣ್ ಜನ, ಇತರ ಜಾತಿಯವು ಕೂರಿಕೆ ಬೊತ್ತ್. ಹಿಂದೆ ದೊಡ್ಡ ಮನೆಲಿ ಸೀಮೆ ಎಣ್ಣೆ ಉಪಯೋಗಿಸ್‌ತಿತ್ತ್‌ಲೆ. ಹರಳೆಣ್ಣೆ ಅಥವಾ ಕಡ್ಲೆ ಎಣ್ಣೆ ಮಾತ್ರ ದೀಪಕೆ ಹಾಕುತ್ತಿದ್ದೊ. ಕಟ್ಟಳೆ ಬಾಗ್‌ಲ್‌ನ ಬೆಳಿಗ್ಗೆ ಕೋಳಿ ಕೂಂಗಿದಂಗೆ ತೆಗ್‌ದರೆ ಮತ್ತೆ ಹಾಕ್ತಿದ್ದದ್ ಸೂರ್ಯ ಮುಳ್‌ಗಿದ ಮ್ಯಾಲೆ. ಅಂದರೆ ಮಲ್ಗ್‌ಕಾಕನ ಹಾಕುತ್ತಿದ್ದೊ. ದೊಡ್ಡ ಮನೆನ ಬೆಳಿಗ್ಗೆ ಸಾಯಂಕಾಲ ಗುಡ್ಸಿ, ಸಗಣಿ ನೀರ್ ಹಾಕಿ ದೇವುರಿಗೆ ದೀಪ ಹಚ್ಚುತಿದ್ದೊ.

ಕಾಲ ಕಳ್ದಂಗೆ ಕುಟುಂಬ ಬೆಳ್ಕಂಡ್ ಹೋತ್. ಸದಸ್ಯರ ಸಂಖ್ಯೆ ಹೆಚ್ಚಾತ್. ಆ ಮನೆಲಿ ಇರುವಷ್ಟ್ ಜಾಗ ಇಲ್ಲದಿರ್‌ಕನ ಬೇರೆ ಬೇರೆ ಕಡೆ ಮನೆ ಕಟ್ಟಿ ವಾಸಸ್ಯ ಹೂಡಿಕೆ ಸುರು ಮಾಡ್ದೊ. ಅವು ದೊಡ್ಡ ಮನೆಗೆ ದೀಪಕ್ಕೆ ಎಣ್ಣೆ ಕೊಡ್ತಿದ್ದೊ. ಅವರವರ ಪಾಲ್‌ನ ಕೆಲ್ಸ ಅವವು ಮಾಡ್ತಿದ್ದೊ. ಕುಟುಂಬ ದೊಡ್ಡದಾಗ್‌ತಾ ಹೋತ್. ನಾಗರಿಕತೆ ಹೊಸ ಹೊಸ ತಿರುವು ಪಡ್‌ಕಂಡ್ ಬಾತ್. ಜನ ವಿದ್ಯಾವಂತರಾದೊ. ನಾನಾ ಕಡೆ ಹೋಗಿ ಆಸ್ತಿ ಸಂಪಾದನೆ ಮಾಡ್ದೊ, ಉದ್ಯೋಗ ವ್ಯಾಪಾರ ದೃಷ್ಟಿಂದ ನಗರಕ್ಕೆ ಹೋದೊ. ಅವೆಲ್ಲಾ ಮದುವೆ, ಹಬ್ಬ ಹರಿದಿನ ಮುಂತಾದ ದಿನ ಆ ಮನೆಗೆ ಬಂದ್ ಎಲ್ಲಾ ಕಾರ್ಯಕ್ರಮಲಿ ಬಾಗಿ ಆತಿದ್ದೊ.

ವರ್ಷ ವರ್ಷ ಕಳ್ದಂಗೆ ಕಾಲ ಬದಲಾವಣೆ ಆಕಂಡ್ ಬಾತ್. ಜನ ಬಹಳ ವಿದ್ಯಾವಂತರಾದೊ. ವೈಜ್ಞಾನಿಕ ಯುಗ ಬೆಳ್ತ್. ಸಂಪ್ರದಾಯ ಮೂಢನಂಬಿಕೆ, ಸಂಸ್ಕೃತಿನ ಮೂದಲಿಕೆ ಮಾಡಿಕೆ ಸುರು ಮಾಡ್ದೊ. ವೈಭವಿಕರಣ ಜೀವನ ಪ್ರಾರಂಬ ಆಕನ ಸಾಂಸ್ಕೃತಿಕ ಮನೋಭಾವನೆನ ಮಾತೃಭಾಷೆ ಮೇಲೆ ಇನ್ನಿತರೆ ಭಾಷೆ ದಾಳಿ ಮಾಡ್ದರಂದ ಪ್ರಭಾವಿತವಾದ ಭಾಷೆ ಸಾಮ್ರಾಜ್ಯ ಸ್ಥಾಪಿಸಿತ್. ಹಳ್ಳಿ ಭಾಷೆ ಅರೆ ಭಾಷೆ ತನ್ನ ಅಸ್ತಿತ್ವನ ಕಳ್‌ಕಂಡತ್. ಕಟ್ಟಡಲಿ ಕೂಡ ಬದಲಾವಣೆ ಆಗಿ ಹೊಸ ವಿದಾನದ ಕಟ್ಟಡಗ ನಿರ್ಮಾಣ ಆತ್. ಇದರಂದ ಹಳೆ ಮನೆ ತನ್ನ ಭವ್ಯತೆನ ಕಳಕಂಡ್ ಮೂಲೆಗುಂಪು ಆಕೆ ಸುರು ಆತ್. ಕೆಲವಷ್ಟ್ ಜನ ಆ ಒಂದು ಐನ್ ಮನೆನ ಮುರ್ದ್ ಅಲ್ಲಿ ಹೊಸ ಶೈಲಿ ಮನೆ ಮಾಡ್ದೊ. ಇನ್ ಕೆಲವು ಅಲ್ಲಿದ್ದ ಮರ ಮುಟ್ಟು ಮಾರಿ ಕಾರ್ಯ ಕ್ರಮಕ್ಕೆ ಅವಶ್ಯಕವಾಗುವ, ವೆಂಕಟರಮಣನ ಮುಡುಪಿಡುವ ಗುಡಿ ಮಾಡ್ದೊ. ಇನ್ನ್‌ಷ್ಟ ಜನ ದೊಡ್ಡ ಮನೆಂದ ದೂರ ಆಗಿ ಆ ಕಡೆ ತಿರಗಿ ನೋಡದೆ ಅದ್ ಬಿಸ್‌ಲ್ ಮಳೆ ಹೊಡ್ತಕ್ಕೆ ಸಿಕ್ಕಿ ಭಗ್ನಾವಸ್ಥೆಗೆ ಬಾಕೆ ಸುರಾತ್. ಬಹಳಷ್ಟ್ ದೊಡ್ಡ ಮನೆ ಈ ಸ್ಥಿತಿಲಿ ಈಗ ಉಟ್ಟು.

ಇಂದ್ ಸಾಂಪ್ರದಾಯಿಕ ಮನೋಭಾವನೆ ಇರುವ ಜನ ಮುಂದೆ ಬಂದ ಆ ದೊಡ್ಡ ಮನೆನ ಪುನಶ್ಚೇತನಗೊಳ್ಸಿ ಹಳೆ ಸಂಪ್ರದಾಯಿಕ ಆಚರಣೆನ ಮುಂದುವರ್ಸಿ ಮುಂದಿನ ತಲೆಮಾರಿಗೆ ರವಾನಿಸುವ ಪ್ರಯತ್ನ ಮಾಡ್ತಾ ಒಳೊ. ಇದರ್ಂದ ಹಳೆ ಸಾಂಪ್ರದಾಯಿಕ ಆಚರಣೆ ಮುಂದೆನ ಜನಾಂಗಕ್ಕೆ ನಮ್ಮವರೆಗೆ ಹೆಂಗೆ ಬಾತೊ ಹಂಗೆ ಸಾಗಿಕೆ ಉತ್ತಮ ವಾಹಕ ಆದೆ, ನಾವು ಭಾಷೆನ ಕೂಡ ಮರಿಯಕೆ ಆಗದ್. ಯಾಕೆತೆಳ್ರೆ ಭಾಷೆನೇ ಸಂಸ್ಕೃತಿಯ ವಾಹಕ. ಯಾಗ ಭಾಷೆ ನಾಶ ಆದೆ ಆಗ ಸಂಸ್ಕೃತಿನೂ ನಾಶ ಆದೆ. ಭಾಷೆ ಮತ್ತೆ ಸಂಸ್ಕೃತಿ ದೇಹ ಮತ್ತೆ ಆತ್ಮ ಇದ್ದಂಗೆ. ಇದರ ಗರ್ಭನೆ ಐನ್ ಮನೆ. ಐನ್ ಮನೆ ನಾಶ ಆದರೆ ಇನ್ನೂ ವಾಸ್ತವಿಕ ಪ್ರಪಂಚಕ್ಕೆ ಪ್ರವೇಶ ಮಾಡದ ಶಿಸುನ ಗರ್ಭಲೆ ಹತ್ಯ ಮಾಡ್ದಂಗೆ. ಕಾರಣ ನಮ್ಮ ಗುರುಕಾರಣರ್ ಇರ್ದು ಐನ್ ಮನೆ ತೇಳುವ ದೇವಾಲಯದ ಗರ್ಭ ಗುಡಿಲಿ. ಆದ್ರಂದ ನಾವೆಲ್ಲ ಈಗ ಭಗ್ನಾವಸ್ಥೆಲಿ ಇರುವ ಐನ್ ಮನೆನ ಜೀರ್ಣೋದ್ದಾರ ಮಾಡಿ ಜೊತೆಗೆ ನಮ್ಮ ಭಾಷೆ, ಸಂಸ್ಕೃತಿನ ರೂಡಿಸಿ ಪರಂಪರೆನ ಬೆಳ್ಸಿಕಂಡ್ ಉಳ್ಸಿಕಂಡ್ ಮುಂದೆನ ಪೀಳಿಗೆಗೆ ಸಾಗಿಸೊಕು. ಇದ್ ನಾವು ನಮ್ಮ ಮಕ್ಕಳಿಗೆ ಮುಂದೆ ಬದುಕೊಕುತ ಹಣ ಮಾಡಿಟ್ಟದ ಕ್ಕಿಂತಲೂ ಬಹಳ ಮಹತ್ವವಾದ ಕೆಲ್ಸ. ಈ ಒಂದು ಪ್ರಯತ್ನನ ಈ ವರ್ಷಂದ ತೆಕ್ಕಡೆ ಕುಟುಂಬ ಮಾಡ್ತಾ ಉಟ್ಟು. ಇದೇ ರೀತಿ ಎಲ್ಲಾ ಕುಟುಂಬವು ಕೈ ಬುಟ್ಟ ಐನ್ ಮನೆನ ರಕ್ಷಿಸಿ ನಿಮಿಗೆಲ್ಲ ಶ್ರೀಗುರು ವೆಂಕಟರಮಣ ಶೃಂಗೇರಿ ಅಂಬಿಕೆ ಆಯುರಾರೋಗ್ಯ ಸುಖ ಸಂಪತ್ತು ಕೊಟ್ಟ್ ಕಾಪಾಡಲಿತ ನಾನ್ ಪ್ರಾರ್ಥಿಸಿನೆ.

**— ತೆಕ್ಕಡೆ ಬಿ. ಕುಮಾರ, ಮುತ್ತಾರ್ಮುಡಿ,**

---

## *ವಿವಾಹ*

ಮಡಿಕೇರಿ ತಾಲೋಕು, ಹೊಸ್ಕೇರಿ ಗ್ರಾಮದ ಬೊಳ್ಳೂರು ಕೆಂಚಪ್ಪನವರ ಮಗಳು ಪ್ರೇಮಲತಳ ವಿವಾಹ ಉಡುಪಿ ಕಲ್ಯಾಣಪುರದ ನಿವಾಸಿ ಸೂರ್ಯನಾರಾಯಣ ಅವರ ಮಗ ಕೃಷ್ಣರವರ ಜೊತೆ ದಿನಾಂಕ 24.11.2000 ರಂದು ಧರ್ಮಸ್ಥಳದ ಮಂಜುಕೃಪ ಛತ್ರದಲ್ಲಿ ನಡೆಯಿತೆಂದು ತಿಳಿದು ಬಂದಿದೆ.

---

**ಹಣೆ ಬರಹವನ್ನು ಕೈಯಿಂದ ತಿದ್ದಲು ಸಾಧ್ಯವೆ ?**

# ಪಂಚ ದ್ರಾವಿಡ ಭಾಷೆಯಲ್ಲಿ ಕನ್ನಡ ಅತಿ ಪ್ರಾಚೀನ ಭಾಷೆ :

## 6000 ವರ್ಷಗಳ ಹಿಂದೆ ಹರಪ್ಪಾ ಮೊಹೆಂಜ್ದಾರೊದಲ್ಲಿ ಮೆರೆದ ಕನ್ನಡ

ಯಾವುದೇ ದೇಶದಲ್ಲಿ ಅತ್ಯಂತ ಪ್ರಾಚೀನ ಜನಸಮುದಾಯ, ಅವರಾಡುವ ಮೊದಲ ಮಾತು, ಆ ಜನಸಮುದಾಯ ನಿರ್ಮಿಸಿದ ಕೃತಿಗಳಿಂದ ಆ ದೇಶಕ್ಕೆ ಹೆಸರು, ಭಾಷೆ, ಸಂಸ್ಕೃತಿ ಉಂಟಾಗಿರುತ್ತದೆ: ಇಂತಹ ಸಂಸ್ಕೃತಿಯೇ ಜಾನಪದ ಸಂಸ್ಕೃತಿಯಾಗಿ ಇಂದಿಗೂ ಭಾರತದೇಶಧಲ್ಲಿ ಉಳಿದು ಬಂದಿದೆ. ದೇವಮಾನವರ ಭಾಷೆ ಅಥವಾ ನಾಗರೀಕ ಭಾಷೆ ಅಥವಾ ಆರ್ಯರ ಭಾಷೆ ಎಂದು ಕರೆಸಿಕೊಳ್ಳುವ **ಸಂಸ್ಕೃತ ಭಾಷೆಯು** ಕ್ರಿ.ಪೂ. 4000 (ಅಂದರೆ ಇಲ್ಲಗೆ ಸುಮಾರು 6ಸಾವಿರ ವರ್ಷಗಳ ಹಿಂದಿನಿಂದ)ದಿಂದ ಬಳಕೆಯಲ್ಲಿದೆಯೆಂದು ಹೇಳಲಾಗಿದೆ. ಗೌತಮ ಬುದ್ಧನು ಸ್ಥಾಪಿಸಿದ ಬೌದ್ಧ ಧರ್ಮವು (ಕ್ರಿ.ಪೂ. 300 ರಿಂದ) ಪ್ರಸಾರವಾಗಿದ್ದು **'ಪ್ರಾಕೃತ ಭಾಷೆ'**ಯಿಂದ ಎಂದು ತಿಳಿದುಬಂದಿದೆ. ಈ ಬೌದ್ಧ ಧರ್ಮ ಮತ್ತು ಪ್ರಾಕೃತ ಭಾಷೆಯ ಸುಮಾರು ಒಂದು ಸಾವಿರ ವರ್ಷಗಳ ಕಾಲ ಜನಸಾಮಾನ್ಯರನ್ನು ಆಳಿದ್ದವು. ಕ್ರಿ. ಶ. 5 ನೇ ಶತಮಾನದಿಂದ ಈಚೆಗೆ ಕನ್ನಡ, ತಮಿಳು, ತೆಲುಗು, ಮಲೆಯಾಳಂ, ಮರಾಠಿ ಭಾಷೆಗಳ ಜನರ ಬಗ್ಗೆ ಹೆಚ್ಚಿನ ದಾಖಲೆಯುಳ್ಳ ಇತಿಹಾಸವನ್ನು ನಾವು ಕಾಣುತ್ತೇವೆ. 1961ರ ಜನಗಣತಿಯಲ್ಲಿ ಸಂಸ್ಕೃತಕ್ಕೆ ಸಂಬಂಧಿಸಿದ ಕುತೂಹಲಕರವಾದ ಅಂಶವೊಂದಿದೆ. ಕರ್ನಾಟಕದ 2.36 ಕೋಟಿ ಜನಸಂಖ್ಯೆಯಲ್ಲಿ ಕೇವಲ 79 ಜನ ಗಂಡಸರು, 46 ಜನ ಹೆಂಗಸರು (ಒಟ್ಟು 125ಜನ) ಸಂಸ್ಕೃತವನ್ನು ತಮ್ಮ ಮಾತೃಭಾಷೆಯಾಗಿ ಬರೆಸಿದ್ದಾರೆ. ಭಾರತ ದೇಶದಲ್ಲಿ 1961 ಜನಗಣತಿಯಲ್ಲಿ 38.15 ಕೋಟಿ ಜನರು ಹಿಂದಿ, ಮರಾಠಿ, ತಮಿಳು. ಕನ್ನಡ ಇತ್ಯಾದಿ ಇತರ ಭಾಷೆಗಳನ್ನು ಮಾತೃಭಾಷೆಯಾಗಿ, ಕೇವಲ 2554 ಜನರು ಸಂಸ್ಕೃತವನ್ನು ಮಾತೃಭಾಷೆಯಾಗಿ ಮತ್ತು 18297 ಜನರು ಇಂಗ್ಲೀಷ್‌ನ್ನು ಮಾತೃಭಾಷೆಯೆಂದು ಬರೆಸಿದ್ದಾರೆ. (ಕರ್ನಾಟಕದ ಪರಂಪರೆ ಸಂ.1 ಪುಟ 102). ಈಗ ಭಾರತದಲ್ಲಿ ಸಂಸ್ಕೃತ, ಪ್ರಾಕೃತ ಮಾತನಾಡುವ ಜನರನ್ನು ಪತ್ತೆ ಹಚ್ಚುವುದು ವ್ಯರ್ಥಸಾಹಸವೇ ಸರಿ.

ವೇದಗಳ ಭಾಷೆ ಎನಿಸಿಕೊಂಡ ಸಂಸ್ಕೃತ, ಅಶೋಕನಂತಹ ಚಕ್ರವರ್ತಿಯಿಂದ ಬುದ್ಧಧರ್ಮದ ತತ್ವಗಳನ್ನು ಪ್ರಸಾರ ಮಾಡಿದ ಪ್ರಾಕೃತ ಭಾಷೆಗಳು ಜನಸಾಮಾನ್ಯರು ಇರಲಿ, ಪಂಡಿತ ವಿದ್ವಾಂಸರು ಕೂಡ ಮಾತನಾಡದಷ್ಟು ನಮ್ಮ ದೇಶದಿಂದ ಮಾಯವಾಗಿದ್ದು ಏಕೆ ? ಈ ಭಾಷೆಗಳು ನಿಜವಾಗಿಯೂ ಬಹುಸಂಖ್ಯಾತರ ದೇಸೀಯ ಭಾಷೆಗಳೇ ? ಈಗ ಹೆಚ್ಚು ಜನಸಮುದಾಯ ಮಾತನಾಡುತ್ತಿರುವ ಹಿಂದಿ, ಮರಾಠಿ, ಕನ್ನಡ, ತಮಿಳು, ತೆಲುಗು, ಮಲೆಯಾಳಂ ಭಾಷೆಗಳಲ್ಲಿ ಯಾವುದು ಈ ದೇಶದ ಮೂಲ ನಿವಾಸಿಗಳ ಪ್ರಥಮ ಭಾಷೆಯಾಗಿರಬಹುದು ? ಇಂತಹ ಕೆಲವು ಸಂದೇಹ ನಿವಾರಣೆಗೆ ಕೆಳಕಂಡ ಆಧಾರಗಳನ್ನು ಇಲ್ಲಿ ಒದಗಿಸಲಾಗಿದೆ.

ನಮ್ಮ ದೇಶದಲ್ಲಿ ವೇದಗಳ ಕಾಲ ಮತ್ತು ಬುದ್ಧನ ನಂತರದ ಕಾಲಗಳಲ್ಲಿ ಗ್ರಂಥಸ್ಥ, ಆಡಳಿತ ಮತ್ತು ವ್ಯವಹಾರಗಳಿಗಾಗಿ ಸಂಸ್ಕೃತ, ಪ್ರಾಕೃತಭಾಷೆಗಳು ಬಲವಂತವಾಗಿ ಹೇರಲ್ಪಟ್ಟು, ಇವುಗಳ ಬಳಕೆಯಿದ್ದರೂ ಕೂಡ, ಜನಸಾಮಾನ್ಯರು ತಮ್ಮ ತಮ್ಮ ದೇಶೀಯ ಮಾತೃಭಾಷೆಗಳನ್ನೇ ಹೆಚ್ಚಾಗಿ ಬಳಸುತ್ತಿದ್ದರು. (ಹಾಲು ಮತದರ್ಶನ ಪುಟ-40). ವಿದ್ವಾಂಸರಿಂದ, ಆಡಳಿತ ನಡೆಸುವ ರಾಜರಿಂದ ವ್ಯವಹಾರ, ಆಡಳಿತದಲ್ಲಿ ಒತ್ತಾಯದಿಂದ ಬಳಸುತ್ತಿದ್ದ ಸಂಸ್ಕೃತ, ಪ್ರಾಕೃತಗಳು ರಾಜರ ಬದಲಾವಣೆಯಿಂಧ, ಜನಸಾಮಾನ್ಯರು ಈ ಭಾಷೆಗಳನ್ನು ಕಡೆಗಣಿಸಿದ್ದರಿಂದ ಇವೆರಡೂ ಕ್ರಮೇಣ ನಶಿಸಿ ಹೋದವು. ಮೊದಲು ಸಂಸ್ಕೃತ- ಪ್ರಾಕೃತ ಭಾಷೆಗಳ ಆರ್ಭಟದಲ್ಲಿ, ವೈಭವದಲ್ಲಿ ಹಿಂದೆ ಸರಿದಿದ್ದ ಕನ್ನಡ, ತಮಿಳು, ತೆಲುಗು, ಮಲೆಯಾಳಂ, ದೇಶೀ ಭಾಷೆಗಳು ಕ್ರಮೇಣ ಮತ್ತೆ ತಲೆ ಎತ್ತಿ ನಿಂತ ಬಗ್ಗೆ ಇತಿಹಾಸದಲ್ಲಿ ಸ್ಪಷ್ಟವಾದ ದಾಖಲೆಗಳಿವೆ. ಉತ್ತರ ಭಾರತದಲ್ಲಿ ಒಂದು ಕಾಲದಲ್ಲಿ ಜನಸಮುದಾಯದಿಂದ ಹೇರಳವಾಗಿ ಬಳಸುತ್ತಿದ್ದ ಕನ್ನಡ, ತಮಿಳು ಭಾಷೆಗಳ ಸ್ಥಾನದಲ್ಲಿ ಸಂಸ್ಕೃತ-ಪ್ರಾಕೃತಗಳ ಪ್ರಭಾವದಿಂದ ಹಿಂದಿ, ಪಂಜಾಬಿ, ಬಂಗಾಳಿ, ಸಿಂಧಿ... ಭಾಷೆಗಳು ಹುಟ್ಟಿದವು; ಹಾಗೆಯೇ ಕನ್ನಡ, ಸಂಸ್ಕೃತ-ಪ್ರಾಕೃತಗಳಿಂದ ಮರಾಠಿ-ಗುಜರಾತಿ ಭಾಷೆಗಳು ಬೆಳೆದು ಬಂದವು.

ಒಂದು ಕಾಲದಲ್ಲಿ ಕನ್ನಡ-ತಮಿಳು ಸೇರಿ ಒಂದೇ ಭಾಷೆಯಾಗಿದ್ದುದು ತಿಳಿದ ವಿಷಯ. ಕನ್ನಡ -ತಮಿಳು ಭಾಷೆಯಿಂದ ತೆಲುಗು ಮೊದಲು ಬೇರ್ಪಟ್ಟು ಸಂಸ್ಕೃತದ ಅನೇಕ ಪದಗಳನ್ನು ಹೊಂದಿದ ಭಾಷೆಯಾಯಿತು. ಆರ್ಯಾವರ್ತದ ಹೊರಗೆ ಅಂದರೆ ದಕ್ಷಿಣ ಭಾರತದ ಮೊದಲನೇ ಪ್ರದೇಶಗಳಾದ ಆಂಧ್ರ ಮತ್ತು ಮಹಾರಾಷ್ಟ್ರಗಳು ಬಹುಬೇಗ ಸಂಸ್ಕೃತ ಪ್ರಭಾವಕ್ಕೆ ಒಳಗಾಗಿ ಬೆಳೆದು ಬಂದವು. ಮಲೆಯಾಳ, ನಂತರ ಕನ್ನಡವು ಸಹ ಸಂಸ್ಕೃತದ ಕೆಲವು ಪದಗಳನನು ಜೀರ್ಣಿಸಿಕೊಂಡು ಬೆಳೆದುಬಂದಿದೆ. ಆದರೆ ತಮಿಳು ಮಾತನಾಡುವವರು ತಮ್ಮ ಭಾಷೆಯ ಮೇಲಿನ ಹೆಚ್ಚಿನ ಅಭಿಮಾನದಿಂದ ಸಂಸ್ಕೃತವನ್ನು ದೂರ ಇಟ್ಟು ಬೆಳೆಯತೊಡಗಿದ್ದರಿಂದ, ತಮಿಳೇ ಬಹಳ ಪ್ರಾಚೀನ ಭಾಷೆ ಎನ್ನುವಂತೆ ಭಾಸವಾಗುತ್ತಿದೆ. **ಕನ್ನಡ-ತಮಿಳು, ಕನ್ನಡ-ತೆಲಗು, ಕನ್ನಡ-ಮರಾಠಿ**ಗಳಿಗಿರುವ ಸೋದರ ಸಂಬಂಧವನ್ನು ಗಮನಿಸಿದಾಗ, ಈ ಮೂರು ಭಾಷೆಗಳಿಗೆ ಕನ್ನಡವೇ ಸಾಮಾನ್ಯ(common) ಸಂಪರ್ಕವಾಗಿರುವುದರಿಂದ ಕನ್ನಡವೇ ದಕ್ಷಿಣ ಭಾರತದಲ್ಲಿ ಪ್ರಾಚೀನ ಭಾಷೆ ಎಂದು ನಿರ್ಧರಿಸಲಾಗಿದೆ.

ಭೂಚರಿತ್ರೆಯ ಆಧಾರದ ಮೇಲೆ, ದಕ್ಷಿಣದಲ್ಲಿ ಪರ್ಯಾಯ ದ್ವೀಪ ಸುಮಾರಾಗಿ ಕಚ್ (ಗುಜರಾತ್ ಗಡಿಯ

ಮೇಲ್ಭಾಗ) ಮತ್ತು ಕಲ್ಕತ್ತಾವನ್ನು ಸೇರಿಸುವ ರೇಖೆಗೆ ದಕ್ಷಿಣದಲ್ಲಿರುವ ತ್ರಿಕೋನ ಭಾಗವು ಸ್ಥಿರವಾದ ಮತ್ತು ದೃಢವಾದ ಶಿಲಾಭಾಗವನ್ನು ಹೊಂದಿ ಸಮುದ್ರ ಮಟ್ಟದಿಂದ ಮೇಲೆದ್ದು ಪ್ರಥಮವಾಗಿ ಘನ ಭೂ ಭಾಗವಾಯಿತು (ಪುಟ-7 ಕರ್ನಾಟಕದ ಪರಂಪರೆ ಭಾಗ-). ವೈಜ್ಞಾನಿಕವಾಗಿ ದಕ್ಷಿಣ ಭಾರತದ ಭೂಭಾಗ ಮೊದಲು ಘನವಾಗಿದ್ದರಿಂದ ಇಲ್ಲಿ ಪ್ರಥಮವಾಗಿ ಸಸ್ಯ, ಪ್ರಾಣಿ ಮತ್ತು ಮಾನವನ ಉಗಮಕ್ಕೆ ಕಾರಣವಾಗಿದೆ. ಒಂದು ಕಾಲದಲ್ಲಿ ಉತ್ತರ ಭಾರತ ಮತ್ತು ದಕ್ಷಿಣ ಭಾರತದ ಮಧ್ಯೆ ಸಮುದ್ರವಿತ್ತೆಂದು ತಿಳಿದು ಬರುತ್ತದೆ.

ದಕ್ಷಿಣ ಭಾರತದಲ್ಲಿ ಪ್ರಥಮವಾಗಿ ಜನಿಸಿದ ಮಾನವನು ಕಾಲಕ್ರಮೇಣ ಅಭಿವೃದ್ಧಿ ಹೊಂದಿ ಸಾಮ್ರಾಜ್ಯಗಳನ್ನು ಕಟ್ಟಿ ಆಳಿದನು. ಈ ದಕ್ಷಿಣ ಭಾರತವನ್ನು ಆಳಿದ ಪ್ರಖ್ಯಾತ ಮೂರು ಸಾಮ್ರಾಜ್ಯಗಳು : **ಶಾಲಿವಾಹನ** (ಶಾತವಾಹನ) ಕ್ರಿ. ಪೂ. 121 ರಿಂದ ಕ್ರಿ.ಶ. 78 ರಲ್ಲಿ; **ಪಲ್ಲವರು** ಕ್ರಿ. ಶ. 4 ನೇ ಶತಮಾನದಿಂದ 8 ನೇ ಶತಮಾನ ಮತ್ತು **ವಿಜಯನಗರ** ಕ್ರಿ. ಶ. 12 ರಿಂದ 16ನೇ ಶತಮಾನದ ಅರಸರು. ಶಾತವಾಹನ ( ಶಾಲಿವಾಹನ) ಮತ್ತು ವಿಜಯನಗರ ಸಾಮ್ರಾಜ್ಯಗಳ ರಾಜಧಾನಿ ಬಳ್ಳಾರಿಯಾಗಿತ್ತು. ಬಳ್ಳಾರಿ ಕನ್ನಡಿಗರ ಮೂಲ ಸ್ಥಾನಗಳಲ್ಲೊಂದು; ಶಾಲಿವಾಹನ ಮತ್ತು ವಿಜಯನಗರ ಸ್ಥಾಪಕರು ಕನ್ನಡಿಗರೆಂಬ ಬಗ್ಗೆ ಪುರಾವೆ ಬೇಕಿಲ್ಲ. ( ಕರ್ನಾಟಕ ಪರಂಪರೆ ಸಂಪುಟ 1, ಪುಟ 124 ಮತ್ತು ಸಂಪುಟ 2 ಪುಟ 8; ಶಂಬಾ ಜೋಶಿಯವರ ಹಾಲುಮತ ದರ್ಶನ ಪುಟ 9; ಮರ್ರಾಟೀ ಸಂಸ್ಕೃತಿ ಪುಟ 9 ಮತ್ತು 249). ಪಲ್ಲವರು ಮದ್ರಾಸ್ (ಚೆನ್ನೈ) ಹತ್ತಿರವಿರುವ ಮಹಾಬಲಿಪುರಂ ರಾಜಧಾನಿಯನ್ನಾಗಿರಿಸಿಕೊಂಡು ದಕ್ಷಿಣ ಸಾಮ್ರಾಜ್ಯವನ್ನಾಳಿದರು. ಇವರು ಉಪಯೋಗಿಸುತ್ತಿದ್ದ ನಾಣ್ಯದ ಹೆಸರು ಕುರುಂಬಾ (ಕುರುಬ) ನಾಣ್ಯ, ತಮಿಳಿನಲ್ಲಿನ ಕುರುಂಬಾ ಪದ ಕನ್ನಡದಲ್ಲಿ ಕುರುಬ ಆಗಿದೆ. ಆಗಲೂ ತಮಿಳುನಾಡಿನಲ್ಲಿ ಕುರುಬ ಜನಾಂಗದವರ ಮಾತೃಭಾಷೆ ಕನ್ನಡ. ಪಲ್ಲವರು ಕುರುಬರೆಂದು ಸಂಶೋಧಕರು ತಿಳಿಸಿದ್ದಾರೆ. The Madras Cen(us Report of 1891 describes Kurubas as the modern representatives of the ancient pallavas (Kurumbas) who dominated the south, and can be rightly treated as the earliest stratum of society with prioriety occupation. (Tribes of Mysore by A.A.D. Luiz_ page_ 19 & 127). ಹಿರೇಹಡಗಲಿ, ಮೈದಾವೋಲು ಮತ್ತು ಇತರ ಪ್ರಾಚೀನ ಪ್ರಾಕೃತ ಶಾಸನಗಳು ಪಲ್ಲವರ ಸಾತಹನಿಹರ ಅಥವಾ ಶಾತವಾಹನ ರಾಷ್ಟ್ರದಲ್ಲಿ ಆಳುತ್ತಿದ್ದರೆಂದು ತಿಳಿಸುತ್ತವೆ. (ಈ ಪ್ರದೇಶಗಳು ಧಾರವಾಡ, ಬಳ್ಳಾರಿ ಜಿಲ್ಲೆಗಳಲ್ಲಿವೆ). ಹೀಗೆ ಮೂಲತಃ ಪಲ್ಲವರು ಕರ್ನಾಟಕದಲ್ಲಿದ್ದರು (ಕರ್ನಾಟಕ ಪರಂಪರೆ ಸಂಪುಟ-1 ಪುಟ 160).ತಮಿಳುನಾಡಿನ ಸೇಲಂ, ಕೊಯಂಬತ್ತೂರು, ಕೃಷ್ಣಗಿರಿ ಜಿಲ್ಲೆಗಳಲ್ಲಿ ಒಕ್ಕಲಿಗರು (ಗೌಂಡರ್), ಚೆಟ್ಟಿಯಾರರು (ನೇಕಾರರು), ನಾಯ್ಕರು (ವಾಲ್ಮೀಕಿ)ಜನಾಂಗದವರ ಮಾತೃಭಾಷೆ ಇಂದಿಗೂ ಕನ್ನಡವಾಗಿದೆ. ಈಗ 4-5 ವರ್ಷಗಳ ಹಿಂದೆ **ಮದ್ರಾಸ್** ನಗರವನ್ನು '**ಚೆನ್ನೈ**' ಎಂದು ಹೊಸ ನಾಮಕರಣ ಮಾಡಲಾಯಿತು. ಆ ಸಂದರ್ಭದಲ್ಲಿ ಇಂಡಿಯನ್ ಎಕ್ಸ್‌ಪ್ರೆಸ್ ನಲ್ಲಿ ಬಂದ ವರದಿ ಪ್ರಕಾರ ಮದ್ರಾಸ್‌ನಗರದ ಪೂರ್ವದ ಹೆಸರು '**ಚನ್ನಪಟ್ಟಣಂ**'; ಬೆಂಗಳೂರು ಹತ್ತಿರ ಒಂದು **ಚನ್ನಪಟ್ಟಣ**ವಿದೆ. ಈ ಎರಡೂ ಸ್ಥಳಗಳ ಹೆಸರು ಅಚ್ಚ ಕನ್ನಡದಲ್ಲಿರುವುದು ಕುತೂಹಲ ಮತ್ತು ಅಭಿಮಾನವನ್ನು ತರುತ್ತದೆ. ಈ ಕನ್ನಡದ ಹೆಸರಿಡಲು ಹಿಂಜರಿದ ತಮಿಳುನಾಡಿನ ನಾಯಕರು "ಚೆನ್ನೈ' ಎಂದು ಹೆಸರಿಟ್ಟರು. ಅದು ಏನೇ ಇರಲಿ ಪೂರ್ವದ ಸಮುದ್ರ ತೀರದಲ್ಲಿ ಕನ್ನಡದ ಪದಗಳು ವಿಜೃಂಭಿಸಿದ್ದವು, ಅಂದರೆ ಕನ್ನಡ ಪ್ರದೇಶವಾಗಿತ್ತು ಎನ್ನುವುದನ್ನು ಸಾಬೀತುಪಡಿಸುತ್ತದೆ.

"**ಕಾವೇರಿಯಿಂದಂ ಆ ಗೋದಾವರಿವರಂ ಇರ್ದನಾಡು ಅದು ಕನ್ನಡದೊಳ್**" ಎಂದು ಕವಿರಾಜಮಾರ್ಗದ ಕರ್ತೃ ನೃಪತುಂಗ 9ನೇ ಶತಮಾನದಲ್ಲಿ ಬರೆದಿರುವುದು ದಕ್ಷಿಣ ಭಾರತದ ರಾಜ್ಯಗಳಲ್ಲಿ ಕನ್ನಡವೇ ಪ್ರಧಾನವಾಗಿರುವುದನ್ನು ದೃಢೀಕರಿಸುತ್ತದೆ. ಈಗಿರುವ ಆಂಧ್ರ, ತಮಿಳುನಾಡು, ಕರ್ನಾಟಕ, ಮಹಾರಾಷ್ಟ್ರದ ಕೆಲವು ಪ್ರದೇಶಗಳು ಕಾವೇರಿಯಿಂದ-ಗೋದಾವರಿ ನದಿಗಳ ಮಧ್ಯೆ ಇರುವುದನ್ನು ಕಂಡಾಗ, 9ನೇ ಶತಮಾನದಲ್ಲಿ ಭೌಗೋಳಿಕ ಪ್ರದೇಶಗಳಲ್ಲಿ ಕನ್ನಡವನ್ನು ಬಹು ಸಂಖ್ಯಾತರು ಮಾತನಾಡುತ್ತಿದ್ದರೆಂದು ನಿರ್ಧರಿಸಲಾಗಿದೆ. **ಶಂಬಾ ಜೋಶಿ** ಯವರು ಇನ್ನೂ ಮುಂದಕ್ಕೆ ಕನ್ನಡ ಗಡಿಯನ್ನು ವಿಸ್ತರಿಸಿ, ಕಾವೇರಿ ಯಿಂದ ನರ್ಮದಾನದಿವರೆಗೆ ಕನ್ನಡ ಪ್ರದೇಶವಿದ್ದು ಕನ್ನಡ ಮಾತನಾಡುವ ಬಹುಸಂಖ್ಯಾತ ಜನಸಮುದಾಯ ವಿದ್ದುದನ್ನು ತಮ್ಮ ಸಂಶೋಧನೆಗಳಿಂದ ಪತ್ತೆ ಹಚ್ಚಿದ್ದಾರೆ. ಮಧ್ಯಪ್ರದೇಶ, ಒರಿಸ್ಸಾ, ಮಹಾರಾಷ್ಟ್ರ, ಗುಜರಾತ್ ರಾಜ್ಯಗಳಲ್ಲಿ ಇಂದಿಗೂ ಕನ್ನಡದ ಹೆಸರಿನ ಗ್ರಾಮ, ತಾಲ್ಲೂಕು, ಜಿಲ್ಲೆಗಳನ್ನು ಹೆಸರಿಸಿ ದ್ದಾರೆ. (ಮಹಾರಾಷ್ಟ್ರ-ಗುಜರಾತ್ ಒಂದೇ ರಾಜ್ಯವಾಗಿದ್ದು ಸ್ವಾತಂತ್ರ್ಯ ನಂತರ ಎರಡು ಪ್ರತ್ಯೇಕ ರಾಜ್ಯಗಳಾದವು).

**ಶಂಬಾ ಜೋಶಿ**ಯವರು 1936ರಲ್ಲಿ **ಕರ್ನಾಟಕದ ವೀರ ಕ್ಷತ್ರಿಯರು** ಮತ್ತು 1937 ರಲ್ಲಿ '**ಕನ್ನಡದ ನೆಲೆ**' ಎಂಬ ಸಂಶೋಧಕ ಕೃತಿಗಳನ್ನು ಬರೆದು ಕಾವೇರಿಯಿಂದ ಗೋದಾವರಿಯುವರೆಗೆ, ಅಲ್ಲಿಂದ ಆರ್ಯಾವರ್ತ ಪ್ರದೇಶವೆನಿಸಿಕೊಂಡ ಸಿಂಧುನದಿ ತೀರದ ಹರಪ್ಪಾ ಮೊಹೆಂಜಾದಾರೋ ಪ್ರದೇಶದಲ್ಲಿ ಕನ್ನಡ ಭಾಷೆಯಿತ್ತೆಂದು ಖಚಿತವಾಗಿ ಬರೆದಿದ್ದರು. ಕನ್ನಡದ ನೆಲೆಯಲ್ಲಿ (ಪುಟ 9 ರಲ್ಲಿ) ಶಂಬಾರವರು ಈ ರೀತಿ ದಾಖಲಿಸಿದ್ದಾರೆ: "ಈಜಿಪ್ಟ್‌ನಲ್ಲಿ ದೊರೆತ ಗ್ರೀಕ್ ನಾಟಕದಲ್ಲಿ ಕನ್ನಡ ಮಾತುಗಳು ಬಂದುದನ್ನು ನೋಡಿದರೆ ಕ್ರಿ. ಶ. 2 ನೆಯ ಶತಕದ ಸುಮಾರಿಗೆ ಕನ್ನಡಿಗರೂ, ಗ್ರೀಕರಿಗೂ ಬಳಕೆಯಿದ್ದಿತೆಂದು ವ್ಯಕ್ತವಾಗುತ್ತದೆ. ಚಂದ್ರವಳ್ಳಿಯ ಅಗೆತದಲ್ಲಿ ಆರ್. ನರಸಿಂಹಾಚಾರ್ಯರಿಗೆ ದೊರೆತ ರೋಮನ್

ನಾಣ್ಯಗಳಿಂದ ಪ್ರಾಚೀನ ಕಾಲಕ್ಕೆ ಗ್ರೀಕ್ ರೋಮನ್‌ರೊಡನೆ ಕರ್ನಾಟಕದ ವ್ಯಾಪಾರ - ವ್ಯವಹಾರ ನಡೆಯುತ್ತಿದ್ದುದು ಬೆಳಕಿಗೆ ಬಂದಿದೆ ".

ಸಿಂಧೂ ಸಂಸ್ಕೃತಿಯ ಭಾಷೆಯೂ ಒಂದು ಬಗೆಯ ದ್ರಾವಿಡ ಭಾಷೆಯಾಗಿತ್ತೆಂದು ಅಭಿಪ್ರಾಯ ಪಡಲಾಗಿದೆ. (1908 Annual Report Of Mysore Archaeological Department). ಈಗ ಪಾಕಿಸ್ತಾನದಲ್ಲಿರುವ 'ಬ್ರಾಹೂಈ' ಭಾಷೆಯು ದ್ರಾವಿಡ ಭಾಷೆಯಾಗಿತ್ತೆಂದು ಬಗೆಯಲಾಗಿದೆ. (ಕರ್ನಾಟಕ ಪರಂಪರೆ ಸಂಪುಟ-1, ಪುಟ 90). The civilisation of the Indus Valley Was associated with the speakers of the Dravidian Language ( Page 93 of Anthropology in India by L.A.K. Iyer & L.K.B. Ratham). **ಫಾದರ್ ಹೆರಾಸ್**‌ರವರು ಹರಪ್ಪಾ ಮತ್ತು ಮೊಹೆಂಜೊದಾರೊದಲ್ಲಿ ದೊರೆತ ಪ್ರಾಚೀನ ಶಾಸನಗಳನ್ನು ಅಧ್ಯಯನಗೈದು ಬಹಳ ಪರಿಶ್ರಮದಿಂದ ಬರೆದ **'ಕರ್ನಾಟಕ ಮತ್ತು ಮೊಹೆಂಜದಾರೊ'** ಎಂಬ ಸಂಶೋಧನ ಲೇಕನದಲ್ಲಿ ಕರ್ನಾಟಕದ ಮೂಲಿಗರೇ ಸಿಂಧೂ ನದಿ ತೀರದಲ್ಲಿದ್ದವರೆಂದು ತಿಳಿಸಿದ್ದಾರೆ. (ಶಂಬಾ ಜೋಶಿಯವರು ಕನ್ನಡದ ನೆಲೆ ಪುಟ 109). ಮಾಹೆಂಜದಾರೋ -ಹರಪ್ಪಾ ಪ್ರದೇಶದಲ್ಲಿ ಉತ್ಖನನದಲ್ಲಿ ಬಂಗಾರದ ಅಲಂಕಾರಿಕ ವಸ್ತುಗಳು ಕರ್ನಾಟಕದ ಹಟ್ಟಿ ಗಣಿಯಿಂದ ಬಂದ ಬಂಗಾರದಿಂದ ಮಾಡಿದವುಗಳೆದು ಸರ್‌ಜಾನ್ ಮಾರ್ಷಲ್‌ರು ಮೊಹೆಂಜಾದಾರೊದ ಬಗ್ಗೆ ಬರೆದ ಪ್ರಖ್ಯಾತ ಗ್ರಂಥದಲ್ಲಿ ತಿಳಿಸಿದ್ದಾರೆ (ಶಂಬಾರ ಮರ್ಹಾಟಿ ಸಂಸ್ಕೃತಿ ಪುಟ-53). ಕರ್ನಾಟಕ ಮತ್ತು ಮಾಹೆಂಜದಾರೋ ಪ್ರದೇಶಗಳಲ್ಲಿ ಕನ್ನಡಿಗರ ಸಂಪರ್ಕವಿದ್ದುದರಿಂದ **ಹರಪ್ಪಾ- ಮೊಹೆಂಜದಾರೊದಲ್ಲಿ ಕನ್ನಡವಿತ್ತೆಂದು ಶಂಬಾ ಜೋಶಿಯವರು ಕ್ರಿ. ಶ. 1936-37ರಲ್ಲಿ ಬರೆದ ತಮ್ಮ ಕೃತಿಗಳಲ್ಲಿ ಘಂಟಾ ಘೋಷವಾಗಿ ಪ್ರಕಟಿಸಿದರು.**

ಸ್ವಾತಂತ್ರ್ಯಪೂರ್ವದಲ್ಲಿ ಹರಿದು ಹಂಚಿಹೋಗಿದ್ದ ಕನ್ನಡ ಪ್ರದೇಶಗಳನ್ನು ಒಂದುಗೂಡಿಸುವ ಧ್ಯೇಯದಿಂದ ಬಿ. ಎಂ. ಶ್ರೀ.ಯವರು ಆಗಿನ ಮೈಸೂರು. ಮುಂಬಯಿ, ಹೈದರಾಬಾದ್, ಬಳ್ಳಾರಿ ಪ್ರಾಂತಗಳಲ್ಲಿ ಸಂಚರಿಸಿ (ಕ್ರಿ. ಶ. 1930 ರಿಂದ 1950ರ ವರೆಗೆ ) ಕನ್ನಡದ ಬಗ್ಗೆ ಅನೇಕ ಸಂಶೋಧಕ ಭಾಷಣಗಳನ್ನು ಮಾಡಿದ್ದಾರೆ. 1940 ಮಾರ್ಚಿಯಲ್ಲಿ ತಿರುಪತಿಯಲ್ಲಿ ನಡೆದ ಅಖಿಲ ಭಾರತ ಪ್ರಾಚ್ಯ ಸಮ್ಮೇಳನದ ಕನ್ನಡ ಶಾಖೆಯಲ್ಲಿ **ಕನ್ನಡ ಮೊದಲೊ - ತಮಿಳು ಮೊದಲೊ?** ಎಂಬ ತಮ್ಮ ಅಧ್ಯಕ್ಷ ಭಾಷಣ ದಲ್ಲಿ ಕೆಳಕಂಡ ಮಹತ್ವದ ಅಂಶಗಳನ್ನು ಪ್ರತಿಪಾದಿಸಿದ್ದಾರೆ. 'ಕನ್ನಡ - ತಮಿಳಿನಿಂದ ಮೊದಲು ತೆಲುಗು ಬೇರೆಯಾಗಿ, ತಮಿಳು- ಕನ್ನಡ ಒಂದಾಗಿದ್ದು, ಆಮೇಲೆ ಎರಡಾಗಿ ಒಡೆದುವೆಂಬುದಕ್ಕೆ ಕುರುಹುಗಳು ಸ್ಪಷ್ಟವಾಗಿವೆ. ಉತ್ತರ ಭಾರತದಲ್ಲಿ ದ್ರಾವಿಡ ಭಾಷೆಗಳು ಸಂಸ್ಕೃತ-ಪ್ರಾಕೃತಗಳಲ್ಲಿ ಸೇರಿಹೋಗಿ ನಿರ್ನಾಮ ವಾದುವು. ಮೊಹೆಂಜದಾರೊ ಹರಪ್ಪ ಶೋಧನೆಗಳ ಲಿಪಿಯ ಭಾಷೆಯಾವುದೆಂದು ನಿರ್ಧಾರವಾಗುವ ವರೆಗೂ ಎಷ್ಟು ಹಿಂದಕ್ಕೆ ದ್ರಾವಿಡ ಹೋಗುತ್ತದೆ ಎಂದು ನಿರ್ಧರಿಸುವ ಹಾಗಿಲ್ಲ' ಎಂದಿದ್ದಾರೆ (ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ ಪುಟ -168). ಹೀಗೆ ಹೇಳಿದ ಬಿ. ಎಂ. ಶ್ರೀಯವರು ಅದೇ ಭಾಷಣದಲ್ಲಿ 'ಭಾಷಾಶಾಸ್ತ್ರ ದೃಷ್ಟಿಯಲ್ಲಿ ಕನ್ನಡ ತನ್ನ ಸ್ವರೂಪ ಸ್ವಚ್ಛತೆಯಿಂದ ತಮಿಳಿಗಿಂತ ಹಳೆಯದು. ಕನ್ನಡದ ನುಡಿಗಳೂ, ವ್ಯಾಕರಣದ ನಿರಿಗಳೂ, ಭಾಷಾ ಶಾಸ್ತ್ರ ದೃಷ್ಟಿಯಿಂದ ಕನ್ನಡದಲ್ಲೇ ಪೂರ್ವ ರೂಪಗಳಾಗಿಯೂ, ತಮಿಳಿನವು ಅನಂತರದ ರೂಪಗಳಾಗಿಯೂ ಸ್ಪಷ್ಟವಾಗಿ ಕಾಣುತ್ತವೆ. ಈ ಕುರುಹುಗಳಿಂದ ಕನ್ನಡ ತಮಿಳಿನಿಂದ ಹುಟ್ಟಿಲ್ಲ. ಕನ್ನಡವೇ ಮೊದಲೆಂದು ತೋರುತ್ತದೆ' ಎಂದು ಹೇಳಿದ್ದಾರೆ. (ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ ಪುಟ 170, 171). ಶಂಬಾ ಜೋಶಿ ಅವರಂತೆ ನಿಖರವಾಗಿ ಕನ್ನಡವೇ ಮೊದಲೆಂದು ಬಿ.ಎಂ. ಶ್ರೀ. ಅವರು ಸ್ಪಷ್ಟವಾಗಿ ಹೇಳದಿದ್ದರೂ, ಕನ್ನಡವೇ ಮೊದಲೆಂಬ ವಾದದ ಕಟೆಗೆ ಹೆಚ್ಚು ವಾಲಿದ್ದಾರೆ.

ಅಮೆರಿಕದ ನ್ಯೂಹೇವನ್‌ದಲ್ಲಿ ವಾಸಿಸುವ ಕನ್ನಡಿಕರಾದ ಡಾ. ಡಿ. ಆರ್. ಗೋವಿಂದರಾಜುರವರು ದಿನಾಂಕ 7-5-94 ರಂದು **ಪ್ರಜಾವಣಿಯ** ವಾಚರವಾಣಿಯಲ್ಲಿ **'ಕನ್ನಡ, ತುಳು, ಹರಪ್ಪಾ'** ಎಂಬ ಲೇಖನ ಬರೆದು ಕನ್ನಡಕ್ಕೆ 5000 ಸಾವಿರ ವರ್ಷಗಳ ಇತಿಹಾಸವಿರುವುದನ್ನು ಪ್ರೊ. ವಾಲ್ಟರ್ ಎ. ಫೇರ್ ಸರ್ವೀಸ್ ಎಂಬ ನುರಿತ ವಿಜ್ಞಾನಿ ಸಮರ್ಥಿಸಿರುವುದನ್ನು ಬರೆದಿದ್ದಾರೆ. ಪ್ರೊ. ವಾಲ್ಟರ್ ಅವರು ಈಜಿಪ್ಟ್, ಮೆಸಪೊಟೋಮಿಯಾ, ಇರಾನ್ ಮತ್ತು ಹರಪ್ಪಾ ಸಂಸ್ಕೃತಿಗಳ ಮೇಲೆ ಸುಮಾರು ಐವತ್ತು ವರ್ಷಗಳ ಕಾಲ ಭೂ ಉತ್ಖನನ ಸಂಶೋಧನೆಗಳನ್ನು ನಡೆಸಿ, ಅವು ಗಳನ್ನು ಹೋಲಿಸಿ, ಆಧರಿಸಿ ಬರೆದ "The Harappan Civilisation & its writing (1992)' ಎನ್ನುವ ಪುಸ್ತಕದಲ್ಲಿ, ಪಶ್ಚಿಮ ಭಾರತದ ಹರಪ್ಪಾ ಮೊಹೆಂಜದಾರೊದಲ್ಲಿ ಕನ್ನಡ-ತುಳು ಮಾತನಾಡುತ್ತಿದ್ದ ಬಗ್ಗೆ ತಿಳಿಸಿದ್ದಾರೆ. ಇವರು ಮಂಡಿಸಿರುವ ವಾದದ ಬಗ್ಗೆ ಗೋವಿಂದರಾಜುವರು ದೃಢೀಕರಣ ಬಯಸಿ ಪತ್ರ ಬರೆದಿದ್ದಾರೆ.

ಗ್ರಂಥಾಲಯದ ಸೌಲಭ್ಯಗಳಿಲ್ಲದ, ರೇಡಿಯೋ, ಟಿ.ವಿ., ಇಂಟರ್‌ನೆಟ್ ಇತ್ಯಾದಿ ಶರವೇಗದ ಮಾಧ್ಯಮಗಳಿಲ್ಲದ ಅಂದಿನ ಕಾಲದಲ್ಲಿ ಶಂಬಾ ಜೋಶಿಯವರು 1936-37 ರಲ್ಲಿಯೇ ಭಾರತ ದೇಶದ ಮೂಲ ನಿವಾಸಿಗಳ ಪ್ರಥಮ ಭಾಷೆ ಕನ್ನಡ ಎಂದು ಸಾರಿದ್ದರು. 1940ರಲ್ಲಿ ಬಿ. ಎಂ. ಶ್ರೀ. ಯವರು, ಅದಕ್ಕೂ ಮುಂಚೆ ಫಾದರ್ ಹೆರಾಸ್, ಜಾನ್ ಮಾರ್ಷಲ್ ಮತ್ತು ಪ್ರಜಾವಾಣಿಯಲ್ಲಿ ಪ್ರಕಟವಾದ ಪತ್ರದಲ್ಲಿ ತಿಳಿಸಿರುವಂತೆ ಪ್ರೊ. ವಾಲ್ಟರ್ ಎ. ಫೇರ್ ಸರ್ವೀಸ್‌ರವರ ಸಂಶೋಧನಾ ಲೇಖನಗಳು ಶಂಬಾರವರ ವಾದವನ್ನು ದೃಢೀಕರಿಸುವುದರಿಂದ, ಭಾರತ ದೇಶದ ಮೂಲ ನಿವಾಸಿಗಳ ನುಡಿಯಾದ ಕನ್ನಡವೇ ಮೊದಲಿನ ಭಾಷೆಯಾಗಿದ್ದು, ಇದಕ್ಕೆ 6000 ವರ್ಷಗಳ ಇತಿಹಾಸವಿದೆ ಎಂಬುದನ್ನು ನಿರ್ಧರಿಸಲಾಗಿದೆ.

— ಕೆ. ಮುಕುದಪ್ಪ. ಕೃಪೆ : ಪ್ರಜಾವಾಣಿ.

**ದೇಶ ತಿರುಗಬೇಕು, ಭಾಷೆ ಕಲಿಯಬೇಕು.**

# ವಾಂಟೆಡ್ ಮಿಸ್ಟರ್ : [ನಮ್ಮ ರಾಜು ಮಂಜ ಕಥೆ]

ಲೇಖನ : ಶಂಕರನ ಬಸಪ್ಪ

ಧಾರಾವಾಯಿ - 23

ಹಿಂದಿನ ಸಂಚಿಕೆಂದ ......

Mr. ರಾಜು ದಿನ ನಿತ್ಯ ಏನಾದರೊಂದು ಕೆಲ್ಸನ ಹುಡಿಕಿಕಂಡ್ ಮಾಡುತನೇ ಇರೋಕು. ಏನೂ ಕೆಲ್ಸಗ ತಲೆಗೆ ಹೊಳ್ತಿಲೆತಾದ್ರೂ ಅಂದ್ ಹೆಂಗಾದ್ರೂ ಮಾಡಿ ಒಂದಷ್ಟ್ ಹಣನ ಸಂಪಾದಸಿಯೇ ತೀರೋಕು. ಹಂಗಾಗಿ ನೆನ್ನೆದಿನ ಏನೂ ಕೆಲ್ಸ ಕಣ್ಣಿಗೆ ಕಾಣದೇ ಇದ್ದುದರಂದ ಆ ಅರಸಿಕೆರೆ ರಸ್ತೆ ರಾಬರಿ ಕಡೇಂದ ಸಿಕ್ಕಿದೆಂತಹ ಚಿನ್ನಾಭರಣಗಳನ್ನ ಅಲ್ಲೇ ಎದುರುಗಡೆ ಇರುವ ಮಾರ್‍ವಾಡಿ ಅಂಗಡಿಲಿ ಅದರ ಅಡ ಮಡ್ಗಿ ಅಂದ್‌ನ ಹಣನ ಜಮಾಮಾಡಿಕಂಡತ್. ಇರಲಿ ಮುಂದಕೆ ಈ ಮಾರ್‍ವಾಡಿನ ಪರಿಚಯ ಇದ್ದುದರಂದ ಏನಾದ್ರೂ ಪ್ರಯೋಜನ ಆದೆತಾ ಲೆಕ್ಕಹಾಕಂಡತ್ ......

ಮುಂದಕೆ ........

ಬೆಳಿಗ್ಗೆ 9-30 ಗಂಟೆ ಆಗಿತ್. ಕೆ. ಆರ್. ಸರ್ಕಲ್‌ಲಿ ದೊಡ್ಡದೊಡ್ಡ ಬಟ್ಟೆಅಂಗಡಿ ಷೋರೂಂ ಗ ಒಂದೊಂದೇ ಬೀಗ ಬಿಚ್ಚಿಕೊಂಡ್ ಬಾಗ್‌ಲ್‌ನ ತೆರೆಯುತಿದ್ದೊ. ಒಂದೊಂದು ಮಳಿಗೆ ಗಳಿಗಂತೂ 8-10 ಬೀಗಗಳ ಜಡ್ಡಿದ್ದೊ. ಅದರೆಲ್ಲಾ ಬಿಚ್ಚಿ ಬಾಗಲ್ ತೆಗಿಯಕೆ 20 ನಿಮಿಷನೇ ಬೇಕಾದು ಇದರನೆಲ್ಲಾ ನೋಡಿ ಕಂಡ್ ರಾಜು ಕೆ. ಆರ್. ಸರ್ಕಲ್ ಹತ್ರಂದ ಸಯ್ಯಾಜಿರಾವ್ ರೋಡ್‌ನ ಕ್ರಾಸ್ ಮಾಡಿಕೆ ನಿಂತ್‌ಕಂಡಿತ್. ಆ ಸಿಗ್ನಲ್ ಲೈಟ್ ಬಾಕೆ ಮುಂದೆ ತುಂಬಾ ಜನ ಅಲ್ಲಿಗೆ ಬಂದ್ ಜಮಾಯಿಸಿಕಂಡೊ.

ಒಂದ್ ಫ್ಯಾಮಿಲಿ ಅಪ್ಪ ಅಮ್ಮ ಜೊತೆಗೆ ಎರಡ್ ಹೆಣ್ಣ್ ಮಕ್ಕಳೊಟ್ಟಿಗೆ ಒಬ್ಬ ಮಂಜಕೂಡಾ ಇದ್ದೊ. ಅವು ಹಂಗೇ ಕೊಡಗ್ ಭಾಷೆಲಿ ಮಾತಾಡಿಕಂಡಿರ್‌ಕನ ರಾಜುನ ಕೆಮಿ ನೆಟ್ಟಂಗೆ ಆತ್. ಎದ್ ಅಂಗಡಿಕ್ ಪೋಚೆಂಗಿ ಕಮ್ಮಿರೇಟ್‌ಲ್ ಬಟ್ಟೆಕ್‌ಟ್ರೊ ಪಪ್ಪಾ ತಾ ಆ ಹೈದ ಕೇಳ್ತ್ ? ಎಯ್ ಬಾರ್‍ರಾ ಚಾಮಿ ಎದೇಂಗಿ ಓರು ಬಲ್ಯ ಶಾಪ್‌ಕ್ ನುಗ್ಗನ ನಾಡ ಮೊವಕ್ಕ್ ಎಚ್ಚಕ್ ಪಣ ಖರ್ಚ್ ಆಚೆಂಗೂ ಪರೊಲ್ಲೇ, ಆಚೆಂಗಿ ನಲ್ಲನಲ್ಲ ಬಟ್ಟೆನ ಎಡ್‌ತ್‌ವನ ಆಚಾ? ತಾ ಕೇಳ್ತ್ ಈ ಸಿಗ್ನಲ್ ಲೈಟ್ ಸ್ಟಾಪ್ ಸಿಗ್ನಲ್ ಬಂದಾಕನ ಒಂದರ ಹಿಂದೆ ಒಂದರಂಗೆ ಸ್ಕೂಟರ್ ಗಾಡಿಗ ಒಂದ್ ಸಾಲ್‌ಲಿ ಕಮ್ಮಿತೇಳಿರೂ ನೂರು ಗಾಡಿಗ ಬಂದ್ ನಿಂತ್‌ಬುಟ್ಟಿದ್ದೊ. ಅದರೊಟ್ಟಿಗೆ ಮಾರುತಿ ಕಾರ್‌ಗಳ ಅವಾಂತರ ಅವುಗಳ ಜೊತೆಗೆ ಬೇರೆ ಪ್ರವೇಟ್ ಟೆಂಪೋಗ, ಜೀಪ್‌ಗ ಅಬ್ಬ ಇವೆಲ್ಲಾ ದಾಟಿಹೋಕೆ ಮೂರು ನಿಮಿಷ ಟೈಂ ಬೇಕಾತ್ತ್. ಇದರ ಮಧ್ಯೆ ರಾಜು ಮಂಜ ಆ ಫ್ಯಾಮಿಲಿ ಮಧ್ಯೆಹೋಗಿ ಆ ಅಜ್ಜಂಗೆ ಹಲೋ ಅಂಕಲ್ ತಾ ಕರ್ದ್ ನಮಸ್ಕಾರ ಮಾಡಿ ಕೈಹಿಡದ್ ಸೇಖ್‌ಹ್ಯಾಂಡ್ ಮಾಡಿ ನಿಂಗ ಸುಂಟಿಕೊಪ್ಪತಿಂಜಿ ಬಂದ Mr. ಗಣಪತಿಂದ್ ಕಾಂಬಲ್ಲಾ ಹೇಳಿ ನಗೆ ಆಡ್ತ್. ಹಂಗೇ ನಾಡಪೆದ "ರಾಜೂಂದ್ ನಾನೂ ಕೂಡಾ ಇಲ್ಲೇ ಸುಕ್ರೀಸ್ ಎಂಪೋರಿಯಂಜಿ ಬಟ್ಟೆನ ಪರ್ಚೆಸ್ ಮಾಡುವಕ್ ಬಂದಂವ. ನಾಡ ಬಟ್ಟೆಶಾಪ್‌ನ ನಿಂಗ ನೋಟಿಲೆಕ್ಕಲ್ಲಾ ಮಡಿಕೇರಿರ ಕಾಲೇಜ್‌ರೋಡ್‌ಲ್ ಲಕ್ಷ್ಮಿ ಎಂಪೋರಿಯಂದ್. ಅದೇನಾಡ ಅಂಗಡಿ. ನಾನ್ ಇಲ್‌ಂಜಿ ಹೋಲ್ ಸೇಲ್‌ಲ್ ಪರ್ಚೆಸ್ ಮಾಡ್ವಿ. ಹಾಂ. ಅನ್ನನಕೆ ನಿಂಗಕೂ ಬಟ್ಟೆಬರೆ ಎಲ್ಲಾ ಬೊಂಡೊಂದ್ ಕಾಂಬಲ್ಲಾ? ಆಚಿ ನಾಡ ಕೂಡ ನೀಂಗ ಎಲ್ಲರೂ ಬಾರಿ, ನಾನ್ ನಿಂಗಕ್ ನಾಡ ಹೋಲ್‌ಸೇಲ್ ಪ್ರೈಚ್‌ಲೇ ಬಟ್ಟೆನ ಕೊಡುಪಿಚಿಡುವಿ.

ನಿಂಗ ನಾಡಕೂಡ ಬಂದಕ ನಿಂಗಕ್ ಬೊಂಡ್ಯಾನ ಕ್ವಾಲಿಟಿ ಬಟ್ಟೆನ ಎಡ್ತವೌಲು, ತಾ ನಗೆಆಡಿಕಂಡ್ ಹೇಳಿಕಂಡ್ ಆ ಹೈದನ ಮಖನ ಒಮ್ಮೆ ಮತ್ತೆ ಆ ಗೂಡೆಗಳ ಮಖನ್ನೊಮ್ಮೆ ನೋಡಿ ಎಲ್ಲವಕ್ಕೂ ವಿಶ್‌ಮಾಡ್ತ್.

ಆಗ ಆ ಅಜ್ಜ ಇಲ್ಲೆರಾ ಮೋನೆ ನಾಡಪೆದ ಮೊಣ್ಣಪಂದ್. ಸುಂಟಿಕೊಪ್ಪತ್‌ರ ಬೊಟ್ಟೋಳಂಡಮನೆ. ಆಚಿ ನೀನ್ ಅಚ್ಚಕ್ ಓರ್ ಸಹಾಯನ ಮಾಡ್ ಮೋನೆ. ನಾಡ ಮೊವ ಝೂನ್ಸಿಕ್ ಮಂಗಲ ಉಂಡ್. ಆಂಗಾಯ್ತ್ ಚೆನ್ನಂಗ್ ಜಾಸ್ತಿ ಬಟ್ಟೆ ಬೊಂಡಿಜಿತ್. ಇಕ್ಕ ನೀನ್ ಕಿಟ್‌ನದ್ ನಲ್ಲದೇ ಆಚಿತ್ತಾ ವಿಶ್ವಾಸಲಿ ನಗೆಆಡಿಕಂಡ್ ಹೇಳ್ದೋ. ಅಷ್ಟೊತ್ತಿಗೆ ಆ ರಸ್ತೆ ಕ್ರಾಸ್ ಮಾಡಿಕೆ ಸಿಗ್ನಲ್ ಲೈಟ್ ಹಸಿರ್ ಬಣ್ಣನ ತೋರ್ಸಿತ್. ರಾಜು ಅವರನೆಲ್ಲಾ ಜೊತೆಗೆ ಕರಕಂಡ್ ಅಲ್ಲೇ ಮಫತ್‌ಲಾಲ್ ಹೋಲ್‌ಸೇಲ್ ಶೋ ರೂಂ, ಸುಕ್ರೀಸ್ ಎಂಪೋರಿಯಂನ ಮೆಟ್ಲ್ ಹತ್ತಿತ್.

ಬಾಗಲಲ್ಲೇ ಸೇಲ್ಸ್ ಬಾಯ್ ವೆಲ್‌ಕಮ್ ಮಾಡಿಒಳಗೆ ಕರ್‍ಕಂಡತ್. ಒಳಗೆ ಈಜನ ಎಲ್ಲಾ ನುಗ್ಗಿ ಆಕನ ಅಲ್ಲಿ ಕುದ್ದಿದ್ದ ಸಾಹುಕಾರ ಇವರನ್ನ ಬರಮಾಡಿಕಂಡ್ ಒಳಗಡೆಎಲ್ಲಾ ರೂಂಗಳ ಲೈಟ್‌ನ ಆನ್ ಮಾಡ್ದೊ. ರಾಜು ಹಂಗೇ ಆ ಸಾಹುಕಾರಂಗೆ ವಿಶ್‌ಮಾಡಿ ನಗೆ ಆಡಿಕಂಡ್ ಕಣ್ಣ್‌ಹೊಡ್ದ್. ಇವು ನನ್ನ ಕಡೆ ಗಿರಾಕಿನ ಕರ್‍ಕೊಂಡು ಬಂದೊಳೆ. ನನ್ನ ನೋಡಿಕಂಬಕುತಾ ತಲೆ ಆಡಿಸಿಕಂಡೆ ಕೇಳ್ತ್. ಆ ಸಾಹುಕಾರ ಒಂದ್ ಸ್ಟೈಲ್‌ನೊಂದಿಗೆ ಐದ್ ಬೆರಳ್‌ನ ತೋರ್ಸಿಕಂಡ್ ಓಕೆ ತ್ತೇಳಿ, ಒಂದು ಹೈದನ ಕರ್ದ್ ಕೂಲ್‌ಡ್ರಿಂಕ್ಸ್ ತರ್ಸಿಕೆ ಕಳ್ಸಿತ್. ಅಷ್ಟೊತ್ತಿಗೆ ಝೂನ್ಸಿಗೂಡೆ ಹೇಳ್ತ್ ಪೊಪ್ಪ ಪೊಡಿಯ (ಸೀರೆ) ಬಟ್ಟೆ ಎಡ್ಕನ ಅದಾನಮಿಞತ್ತೇಳ್ತ್. ಮೇಲಕ್ಕೆ ಆ ಸೇಲ್ಸ್ ಹೈದ ಎಲ್ಲವರನ್ನ ಒಳಗಡೇಂದ್ಲೇ ಮಹಡಿ ಮೇಲಕ್ಕಿ ಸ್ಟೆಪ್ಸ್‌ಲಿ ಕರ್‍ಕಂಡ್ ಹೋತ್ ಅಲ್ಲಿ ಕಣ್ಣಿಗೆ ಒಳ್ಳೆ ಹಬ್ಬದಂಗೆ ತರ ತರದ ರೇಶ್ಮೆ ಸೀರೆಗಳ ಎಳ್ದ್ ಎಳ್ದ್ ಹೊರಗೆ ಹಾಕಿದೊ. ಈ ಗೂಡೆಗ ಅದರ ನೋಡಿ ಖುಷಿ ಪಟ್ಟಿಕಂಡ್ ಇವರ ಮೈಬಣ್ಣಕ್ಕೆ ಒಪ್ಪುವಂತ ಕಲರ್‌ಗಳ 10 ಮೈಸೂರು ಸಿಲ್ಕ್ ಸೀರೆಗಳ ಸೆಲೆಕ್ಟ್ ಮಾಡಿಕಂಡೊ.

ಆಮೇಲೆ ಒಳ್ಳೆ ಒಳ್ಳೆ ಡಿಸೈನ್ದ್ ಜಾರ್ಜೆಟ್ ಸೀರೆಗಳ ಸೆಲೆಕ್ಟ್‌ಮಾಡಿಕೆ ಶುರು ಮಾಡಿದೊ. ಆಗ ಇವುಕೆಲ್ಲಾ ತುಂಬಾ ಸಖೆ ಆಗಿ ಹೋಗಿತ್. ಸೇಲ್ಸ್ ಬಾಯ್, ಅಲ್ಲಿಸುತ್ತ ಇದ್ದ ಫ್ಯಾನ್‌ಗಳ ಆನ್ ಮಾಡ್ತ್. ಆಗ ಇನ್ನೊಬ್ಬ ಹೈದ ಉದ್ದುದ್ದ

ಗ್ಲಾಸ್‌ಗಳಲ್ಲಿ ಕೋಲ್ಡ್ ಆರೆಂಜ್ ಜ್ಯೂಸ್‌ನ ತಂದ್ ಕೊಡ್ತ್. ಎಲ್ಲವೂ ಈ ಜ್ಯೂಸ್‌ನ ಕುಡ್ದ್ ಪುನಃ ಒಳ್ಳೊಳ್ಳೆ ಡಿಸೈನ್ ಸೀರೆಗಳ ಆರಿಸಿಕಂಬೊಕೆ ಇವರ ಕಣ್ಣ್‌ಗ ಹುಡುಕಾಡಿದೊ., ಅದೂ ಕೂಡಾ10 ಸೀರೆಗ ಸೆಲೆಕ್ಟ್ ಆತ್, ಹೀಂಗೇ, ಸೀಫಾನ್, ನೈಲಾನ್, ಟೆರಿಕಾಟ್, ವಾಯಿಲ್‌ತ ಆದಮೇಲೆ ಇನ್ನೊಮ್ಮೆ ಈಗಿನ ಲೇಟೆಸ್ಟ್ ಹೆಸ್ರ್‌ಗಳ ಸೀರೆನ ಸೆಲೆಕ್ಟ್‌ಮಾಡಿಕೆ ಸುರುಮಾಡ್ಚೊ. ಹಂಗೇ ಒಟ್ಟು 50 ಸೀರೆಗಳ ಸೆಲೆಕ್ಷನ್ ಆತ್.

ಇದಾದ ಮೇಲೆ ಈ ಬಣ್ಣಗಳಿಗೆ ಒಪ್ಪವಂತಹ ಬ್ಲೌಸ್ ಬಟ್ಟೆಗಳಿಗೆ ಪೆಟ್ಟಿಕೋಟ್ ಬಟ್ಟೆಗಳಿಗೆ ಸೆಲೆಕ್ಟ್‌ಮಾಡಿಕೆ ಪುನಃ ಆ ಮಹಡಿಂದ ಕೆಳಗಡೆ ಕೌಂಟರ್‌ಗೆ ಇಳ್ದ್ ಬಂದೊ. ಈ ಅಪ್ಪ ಮತ್ತೆ ಮಗಕ ಇವರ ಬಟ್ಟೆನ ಸೆಲಕ್ಟ್ ಮಾಡಿಕಾಕನ ಈ ಮೂರು ಗಂಡಜನ ಅವರ ಹತ್ರೆಲಿ ಕುದ್ದ್‌ಕಂಡ್ ಅವರ್ನ್ ನೋಡಿಕಂಡ್ ತಮ್ಮ ತಮ್ಮ ಮನಸ್ಸಿಗೆ ಬಂದ ಡಿಸೈನ್‌ಗಳ ಸಜಸ್ಟ್ ಮಾಡುತಿದ್ದೊ. ಆದ್ರೇ ಈ ಸೆಲೆಕ್ಷನ್ ಮಾಡುವ ಪೂರ್ತ ಜವಾಬ್ದಾರಿ ಆ ಎರಡ್ ಹೆಣ್ಣ್‌ಮಕ್ಕಳದೇ ಆಗಿತ್. ಹಂಗಾಗಿ ಅವು ಇವರ ಮಾತ್‌ನ ಕೆಮಿಮೇಲೆ ಹಾಕಂಡಂಗೆ ಇತ್ತ್‌ಲೆ. ಹಿಂಗೇ ಮುಖ್ಯವಾಗಿ ಈ ಮದುವಳಿಗೆ ಗೂಡೆಗೆ ಸೀರೆ ಬಟ್ಟೆಎಲ್ಲಾ ಸೆಲೆಕ್ಷನ್ ಆಗಿ ಅದರೆಲ್ಲಾ ನಾಲ್ಕ್ ಮೂಟೆ ಗಂಟ್ ಕಟ್ಟಿದೊ. ಇವರದ್ ಆದಮೇಲೆ ಈ ಮೊಣ್ಣಪಣ್ಣ ತನ್ನ ಹತ್ತಿರ ಸಂಸಾರದವುಕೆ, ಮತ್ತೆ ಮನೆಲಿ ಕೆಲ್ಸಕೆ ಇರುವ ಆಳುಗಳಿಗೆಲ್ಲಾ ಅಜ್ಜನೂ, ಅಜ್ಜಿಯೂ ಸೇರಿಕಂಡ್ ಸೀರೆ, ರವಿಕೆ, ಶರಟ್, ಪಂಚೆ, ಪ್ಯಾಂಟ್, ಬಟ್ಟೆ ಸ್ವಲ್ಪ ಗಟ್ಟಿಯಾಗಿರುವಂತಹ ದಪ್ಪ ಬಟ್ಟೆಗಳ ಸೆಲೆಕ್ಷನ್ ಆತ್. ಇದೂ ಕೂಡಾ ಎರಡ್ ಮೂಟೆಗಳಲ್ಲಿ ಕಟ್ಟಿಮಾಡಗಿದೊ. ಇವರ ಇಷ್ಟ್ ಸೆಲೆಕ್ಷನ್‌ಗೇ ಗಂಟೆ 12-30 ಆಗಿ ಹೋತ್, ಇನ್ನ್ ಅಪ್ಪಂಗೆ, ಅವ್ವಂಗೆ, ಮಂಜಂಗೆ ಸಪರೇಟಾಗಿ ಒಳ್ಳೆ ಕ್ವಾಲಿಟಿ ಬಟ್ಟೇ ಶೂಟಿಂಗ್ಸ್, ಶರ್ಟಿಂಗ್ಸ್‌ಗಳ ಒಳ್ಳೆ ದೊಡ್ಡದೊಡ್ಡ ಕಂಪೆನಿಗಳ, ಎಸ್, ಕುಮಾರ್‌ದ್, ಗ್ವಾಲಿಯರ್ ಶೂಟಿಂಗ್ಸ್, ಹಿಂಗೆಲ್ಲಾ ನೋಡಿ ಖರೀದಿಮಾಡಿದೊ.

ಇದಾದ ಮೇಲೆ ಅಲ್ಲೇ ಮಂಚ ಮೇಲೆ ಹಾಸುವಂತಹ ಒಳ್ಳೆ ಪ್ರೂರ್ನಾದ ಉಲ್ಲನ್ ರಗ್ಗ್‌ಗಳ, ಬೆಡ್‌ಸೀಟ್ ಗಳ, ಒಳ್ಳೊಳ್ಳೆ ಕ್ವಾಲಿಟಿಯ ತಲೆದಿಂಬು, ಮತ್ತೆ ಮಕ್‌ಮಲ್ ದಿಂಬುಕವರ್‌ಗಳ, ಟವಲ್‌ಗ, ಪಂಚೆಗ, ತಾ ಎಲ್ಲಾ ತೆಗ್ದ್ ಆಕ್ಯಾಕನ ಅದೂ ಕೂಡಾ ಎರಡ್ ಮೂಟೆ ಕಟ್ಟಿಕೆ ಆತ್. ಇಷ್ಟೆಲ್ಲಾ ಆದ ಮೇಲೆ ಮೊಣ್ಣಪಜ್ಜನ ದೊಡ್ಡ ಮಂಜಂಗೆ ನೀಕ್‌ಎದ್ ಬೋಂಡು ಚಾಮಿ ಮೋನೆ? ನಲ್ಲ ಒರ್ ಕೋಟ್ ಡ್ರೆಸ್‌ನ ನೋಟ್ ತಾ ಹೇಳ್ದೊ. ಆಗ ಆ ಎರಡ್ ಗೂಡೆಗ ಸೇರಿಕಂಡ್ ಅಣ್ಣ ಚಾಮಿಗೆ ಒಳ್ಳೆ ಲಾಯಕ್‌ಲ್ ಒಪ್ಪವಂತಹ 4 ಜೊತೆ, ಕೋಟು, ಪ್ಯಾಂಟ್, ಶರಟ್‌ಗಳ ಸೆಲೆಕ್ಟ್‌ಮಾಡಿ ಬುಟ್ಟೊ. ಈ ತಂಗೆಕಳ ಮಾತಿಗೆ ತಿರುಗಿಹೇಳದೆ ನಲ್ಲ ಬಟ್ಟೆನೇ ಸೆಲೆಕ್ಟ ಮಾಡಿ ತುಳ್ಳಿರಾ ತ್ತೇಳಿಕಂಡ್ ಒಪ್ಪಕಂಡತ್. ಅದೆಲ್ಲಾ ಎಸ್. ಕುಮಾರ್ ಕಂಪೆನಿಯ ತುಂಬಾ ಒಳ್ಳೆ ಕ್ವಾಲಿಟಿ ಬಟ್ಟೆಗ.

ಕೊನೆಗೆ ಆ ಶೋರೂಂನ ಮ್ಯಾನೇಜರ್ ಹತ್ತಿರಕೆ ಬಂದೊ. ಅವು ಇವರ ಬಟ್ಟೆನೆಲ್ಲಾ ಇನ್ನೊಂದು ಸರ್ತಿ ಓಪನ್ ಮಾಡಿ ತೋರ್ಸಿ. ಅಲ್ಲಿ ಹಾಕಿದಂತಹ ಲಿಸ್ಟ್‌ಪ್ರಕಾರ ಒಂದ್ ಕಡೇಂದ ಬಿಲ್ ಮಾಡಿಕೆ ಸುರು ಮಾಡಿದೊ.

ಆಗ ಮಿಸ್ಟರ್ ರಾಜು, ಮ್ಯಾನೇಜರ್‌ಗೆ ಹೇಳ್ತ್. ಜೀ ಅಜೀಜ್ ಶಾಬ್ ನೀವು ನಂಗೆ ಹಾಕುತಿದ್ದ ರೇಟ್‌ನಂಗೇ ಎಲ್ಲಾ ಹೋಲ್‌ಸೇಲ್ ರೇಟ್‌ನೇ ಹಾಕಕು. ಆಮೇಲೆ ನೀವು ಸ್ವಲ್ಪ ಜಾಸ್ತಿ ಹಾಕಿರಿನೂ ನನ್ನ ಕಡೇಂದ ಬರುವ ಗಿರಾಕಿಗಳನ್ನ ಕಳ್ಕೊಂಬಕ್ಕಾದೆ. ನಿಮ್ಮಲ್ಲಿ ಬೆಲೆ ಕಮ್ಮಿ ಹಾಕಿ ಕೊಟ್ಟರೆತ್ತೇಳುವ ವಿಶ್ವಾಸಂದ ನಾವು ನಿಮ್ಮ ಅಂಗಡಿಗೆ ಬಂದೊಳೊತಾ ಹೇಳ್ತ್. ಮೊಣಪ್ಪಜ್ಜ ಜೊತೆಗೆ ಹೇಳ್ದೊ. ಅಕ್ಕು ಮೊನೆ. ನಂಗ ಅಲ್ಲಿಂಜಿ ಬುಟ್ಟಿತ್ ಇಲ್ಲಿಕ್ ಬಂದಾಂಗ್ ಹೋಲ್‌ಸೇಲ್ ಪ್ರೈಜ್‌ಲೇ ಇಟ್ಟಿತ್ ತರೊಂಡುತಾ ಹೇಳ್ದೊ. ಆಗ ಆ ಮ್ಯಾನೇಜರ್ ಒಂದೊಂದು ಐಟಂಗಳಿಗೂ ಡಿಸ್ಕೌಂಟ್ ಬುಟ್ಟ್ ಬುಟ್ಟ್ ಬಿಲ್ ಹಾಕಿ ಕೊಟ್ಟೊ, ಒಟ್ಟು ಎಲ್ಲಾ 1ಲಕ್ಷದ 20 ಸಾವಿರ ರೂಪಾಯಿದ್ ಬಟ್ಟೆ ಆಗಿಹೋತ್.

ಎಲ್ಲಾ ಒಂದ್ ಗಾಡಿಲಿ ತುಂಬುವಷ್ಟ್ ಬಟ್ಟೆನ ಮೂಟೆಕಟ್ಟಿದೊ. ಅಂಕಲ್ ಇಚ್ಚಕ್ ಬಟ್ಟೆಕ್ ನಂಗಕ್ ಬೊರೆಕಡೆ, ಆಯ್ತುಂಡೆಂಗಿ ಒಂದೇರೆ(1½) ಲಕ್ಷ ಅಪಕಿಂಜತ್. ಇಲ್ಲಿ ನಾನ್ ಬಂದಾನ ಗುಂಡ್ ನಿಂಗಕ್ ಕಮ್ಮಿ ಎಣ್ಣ್‌ಚೆಂಗಿಯೊ ನುಪ್ಪದ್ ಆಯಿರಾ ಬಚಾವು ಆಚೀತ ಹೇಳ್ತ್. ಆಗ ಆ ಅಂಕಲ್ ಮೊಣ್ಣಪಣ್ಣ ಅಕ್ಕು ಮೊನೆ ರಾಜು ನೀಡ ಉಪಕಾರನ ನಾನ್ ಎಕ್ಕೋಲು ನೆನ್‌ಚಿಟ್ಟವಿ. ಈ ಬಟ್ಟೆ ಎಲ್ಲಾ ಇಲ್ಲೇ ಇರಡ್. ಹೋಟೇಲ್‌ಕ್ ಪೋಯ್ತಿ ನಂಗೆಲ್ಲಾ ಉಂಡಿತ್ ಬಕ್ಕಾತೇಳಿ ಆಫ್‌ರ್ ಮಾಡ್ತ್, ಛೇ, ಛೇ, ಬೊಂಡ ನಂಗಡ ಊರ್‌ಕಾರಂಗಕ್ ನಾನ್ ಸಹಾಯ ಮಾಡ್ವದ್ ನಾಡ ಧರ್ಮ. ಇಲ್ಲಿ ಬಟ್ಟೆ ಎಡ್ತಂಡ್ ಆನನೆಕೆ ವಾಪಾಸ್ ಪೊರೊಡ್ವದ್ ನಲ್ಲದ್. ನಿಂಗಡದ್ ಮಾರುತ ವ್ಯಾನ್ ಉಂಡಲ್ಲಾ? ನಿಂಗ ಪೋಪಾಚೆಂಗಿ ಇಕ್ಕಲೇ ಆ ಬಟ್ಟೆನೆಲ್ಲ ನಿಂಗಡ ಕಾರ್‌ರ ಒಳಕ್ಕ್ ಇಯಿಂಗ ಬೆಚ್ಚಿತ್‌ತಪ್ಪ ತಾ ಹೇಳ್ತ್ .

ಆಡ್‌ಮೊನೆ ನಂಗ ಇಕ್ಕ ವಾಪಾಸ್ ಪೋರೊಡೊಂಡು ತ್ತೇಳಿ ಮೊಣ್ಣಪಣ್ಣ ಅವರ ಸೂಟ್‌ಕೇಸ್‌ಂದ ಹಣನ ತೆಗ್ದ್ ಒಂದುಲಕ್ಷದ ಇಪ್ಪತ್ತು ಸಾವಿರನ ರಾಜುನ ಕೈಲಿ ಲೆಕ್ಕ ಹಾಕಿ ಕೊಡಿಕೆ ಕೊಡ್ತ್. ರಾಜು ಆ ಹಣನೆಲ್ಲಾ ಎಲ್ಲಾ ನೂರರ ನೋಟ್‌ಗ ಇನ್ನೊಂದುಸರ್ತಿ ಲೆಕ್ಕ ಹಾಕಿ ಸರಿ ಒಂದು ಲಕ್ಷ ಇಪ್ಪತ್ತು ಸಾವಿರತ ಹೇಳಿ ಸಾಹುಕಾರ ಸುಬ್ರೀಸಾಬ್‌ಗೆ ಕೊಡ್ತ್.

ಅಲ್ಲಿನ ಕೆಲಸಗಾರರ್ ಕೈಲಿ ಎಲ್ಲಾ 8 ಮೂಟೆ ಬಟ್ಟೆಗಳ ಹೊರ್ಸಿಕಂಡ್ ಹೋಗಿ ಅವರ ಚಾಮಿ ಮಂಜ ತನ್ನ ಮಾರುತಿ ವ್ಯಾನ್‌ನ ಒಳಗೆ ಇಡ್ಸಿಕಂಡತ್. ಇಷ್ಟ್ ಹೊತ್ತು ಮುಟ್ಟ ನಮ್ಮೊಟ್ಟಿಗೆ ಇಷ್ಟೊಂದು ಬಟ್ಟೆಗಳ ಖರೀದಿ ಮಾಡಿಕಂಬಕೆ ಸಹಾಯ ಮಾಡಿದ ಈ ರಾಜುಗೆ ಎಲ್ಲವೂ ಅಭಿನಂದಿಸಿ ಖುಷೀಲಿತಮ್ಮ ಕಾರ್‌ಲಿ ಈ ಮೊಣ್ಣಪ್ಪಜ್ಜನ ಫ್ಯಾಮಿಲಿ ಕೊಡಗ್‌ನ ಕಡೆಗೆ ಪ್ರಯಾಣಿಸಿದೊ.

ಈ ಶೇಟ್‌ಗೆ ಬೆಳಿಗ್ಗೆ ಶೋ ರೂಂನ ಬಾಗ್‌ಲ್ ತೆಗ್ದಂಗೆ ಇಷ್ಟೊಂದು ದೊಡ್ಡ ವ್ಯಾಪಾರ ಆಗಿ ಹೋತಲ್ಲಾ ತಾ ಬಹಳ

20 ನೇ ಪುಟಕ್ಕೆ

ಕಾಲಿನ ಮೆಟ್ಟು, ಕಾಲಿನಲ್ಲೇ ಇರಬೇಕು, ತಲೆಯ ಮೇಲೆ ಅಲ್ಲ.

# "ಸಂಸ್ಕಾರ" : ಲಲಿತ ಪ್ರಬಂಧ

ಅಂಗಡಿಗೆ ಹೋಗಿ ಮೊಟ್ಟೆ ತರುತ್ತೇನೆಂದು ಹೇಳಿ ಮನೆಯಿಂದ ಹೊರಟೆ, ಐಗೂರಮ್ಮ ಹಾಲು ತೆಗೆದುಕೊಂಡು ಬರುತ್ತಿದ್ದರು. " ಎತ್ತಾಗೊಂಟ್ರಿ" ಅಂದರು ಅಂಗಡಿಗೆ ಎಂದೆ. ಇಸ್ಯಾ ಗೊತ್ತಾ ಗುರುವಪ್ಪಣ್ಣನ ಎತ್ತು ಇಸಾ ತಿಂದ್ಯೆತೆ, ಡಾಕಟ್ರು ಬಂದು ಹೋಗೌರೆ ಮನೆಯವರು ಮಾತ್ರ ತಿನ್ನಿಸ್ಲಾಕಂತ ಹೋಗಿದ್ರು, ಏನೂ ಎತ್ತು ಉಳಿಯಾಹಂಗೆ ಕಾಣಕ್ಲ" ಅಂದ್ರು, ಸರಿ ನಾನು ಆ ಕಡೆ ಹೋಗುತ್ತೇನೆ ನವ ಸಾಕ್ಷರರಿಗೆ ನಾಳೆ ಕಟ್ಟೆ ಶಾಲೆಯಲ್ಲಿ ಬೆಳಿಗ್ಗೆ 10ಗಂಟೆಗೆ ಪರೀಕ್ಷೆ ನಡೆಯುತ್ತದ ನೆನಪಿದೆತಾನೆ ಎಂದು ಮುಂದುವರಿದೆ.

ಪೇಪರ್ ಏಜೆಂಟ್ ಗೋಪಾಲಜ್ಜನ ಮನೆಗೆ ಹೋಗಿ ಇಂದಿನ ದಿನಪತ್ರಿಕೆ ತೆಗೆದುಕೊಂಡು ಬಿಡುವ ಗುರುವಪ್ಪಣ್ಣನ ಮನೆಗೆ ಹೋಗಿ ಬರುವಾಗ ಎಸ್ಟೊತ್ತೋ?ಏನೋ? ಸಂಜೆಯಾದರೆ ಗೋಪಾಲಜ್ಜ ನಾಯಿ ಬಿಟ್ಟುಬಿಡುತ್ತಾರೆ. ಮತ್ತೆ ಕೈಯಲ್ಲಿ ಒಂದು ಕೋಲು ಹಿಡಿದುಕೊಂಡು ಹೋಗಬೇಕು. ನಾನು ಆ ಕಷ್ಟಕ್ಕೆ ನನ್ನ ದಿನಪತ್ರಿಕೆ ಅಂಗಡಿಯಲ್ಲಿ ಕೊಟ್ಟಿರಿ ನಾನು ಅಲ್ಲಿಂದಲೇ ತೆಗೆದುಕೊಳ್ಳುತ್ತೇನೆ ಎಂದರೆ, ಪಾಪ ನೀವು ಅಷ್ಟು ದೂರ ಏಕೆ ನಡೆಯುತ್ತೀರ ? ನಿಮ್ಮ ಪೇಪರ್ ಇಲ್ಲೆ ಇರುತ್ತದೆ ಬಂದು ತೆಗೆದುಕೊಳ್ಳಿ ಎನ್ನುತ್ತಾರೆ. ಅಜ್ಜ ಹೀಗೆ ಹೇಳಲು ಬೇರೊಂದು ಕಾರಣ ಕೂಡ ಇದೆ ಅದೇನೆಂದರೆ ಅಜ್ಜ ಕೊರೆಯುತ್ತಿದ್ದರೆ ನನ್ನಷ್ಟು ತಾಳ್ಮೆವಹಿಸಿ ಕೇಳುವವರು ಆ ಊರಿನಲ್ಲಿ ಮತ್ತೊಬ್ಬರು ಸಿಗಲಾರರು, ನಾನು ಊರಿಗೆ ಹೊಸಬ ಆದುದರಿಂದ ನನಗೆ ಬೇರೆ ವಿಧಿ ಇಲ್ಲ. ಮತ್ತೆ ನಾನು ಆ ಊರಿನಲ್ಲಿ ಇಲ್ಲದಿರುವಾಗ ಅಜ್ಜನಿಗೆ ದೂರವಾಣಿಯ ಮೂಲಕ ಅಜ್ಜ ನನ್ನ ಮನೆಯ ಕಡೆ..... ಎಂದು ಪ್ರಾರಂಭ ಮಾಡಿದರೆ. " ನಾನು ಇರುವಾಗ ನಿಮಗೇನು ಭಯ ಬೇಡ ನಿಮ್ಮ ಮನೆಕಡೆ ಹೋಗಿ ನೋಡಿಕೊಂಡು ಬರುತ್ತೇನೆ ಎಂದು ಧೈರ್ಯ ಹೇಳುತ್ತಾರೆ. ನಾವು ಅಜ್ಜನ ಮಾತನ್ನು ವಿನಯ ವಿದ್ಯಾರ್ಥಿಯಂತೆ ಕೇಳುತ್ತೇನಾದರೂ ಒಮ್ಮೆಮಾತ್ರ ಅಜ್ಜ ನೋಡಿ ನಮ್ಮಲ್ಲಿ ಬಿಳಿ ಒಳ್ಳೆಮೆಣಸಿನ ಬಳ್ಳಿ ಇದ್ದರೆ ತಂದು ಕೊಡಿ ಆದಕ್ಕೆ ಕರಿ ಮೆಣಸಿಗಿಂತ ಹೆಚ್ಚಿನ ಕ್ರಯ ಪೇಪರ್‌ನಲ್ಲಿ ನೋಡುತ್ತೇನೆ ಎನ್ನುವಾಗ ಮಾತ್ರ ನನಗೆ ನಗು ತಡೆಯಲಾಗಲಿಲ್ಲ, ಗೋಪಾಲಜ್ಜನ ಮಗ ನನ್ನನ್ನು ದೂರದಿಂದಲೆ ಕಂಡು, ದಿನಪತ್ರಿಕೆಯನ್ನು ಗೇಟಿನವರೆಗೆ ತಂದುಕೊಟ್ಟು ಎರಡು ಮಾತನಾಡಿ ನಾನು ಹೊರಟಾಗ ಬನ್ನಿ ಕಾಫಿ ಕುಡಿದು ಹೋಗಿ ಎಂದರು. ಅವರಿಗೆ ನಿಜವಾಗಿಯೂ ಕಾಫಿ ಕೊಡುವ ಇಚ್ಛೆ ಇದ್ದಿದ್ದರೆ ನಾನು ಗೇಟು ದಾಟುವ ಮೊದಲೇ ಅಲ್ಲಿಗೆ ಪೇಪರ್ ಏಕೆ ತಂದು ಕೊಡುತ್ತಿದ್ದರು.

ಗುರುವಪ್ಪಣ್ಣನ ಮನೆ ದಾರಿ ಹಿಡಿದು ಹೊರಟಿದ್ದೆ ಅಷ್ಟು ದೂರ ಹೋಗುವಲ್ಲಿ ಮುತ್ತಣ್ಣ ಸಿಕ್ಕಿದರು"ಏನು ಬಹಳ ದಿನಾ ಆತು ಕಾಮದೆ ಊರಿಗೆ ಹೋಗಿದ್ರೊ" ಹೀಗೆ ಪ್ರಾರಂಭಗೊಂಡು ಪ್ರಶ್ನೆಗಳು ಊಹೆಯ ಉತ್ತರಗಳು ಎಲ್ಲವನ್ನೂ ಅವರೆ ಆಡಿಕೊಂಡು ಮುಂದುವರೆಯುತ್ತಾರೆ. ಮಾತಿನ ಮಧ್ಯೆ ಪ್ರತಿಸಾರಿ " ನಿಮ್ಮ ಮನೆಗೆ ಬರುವ ಅಂತ ಮಾಡಿದ್ದೆ" ಎಂದು ಹೇಳುವುದನ್ನು ಮರೆಯುವುದಿಲ್ಲ. ಆದರೆ ಒಮ್ಮೆ ಗುರುವಪ್ಪಣ್ಣನ ಮನೆಯಲ್ಲಿ ಸಿಕ್ಕಿ ನೀನು ಅವರ ಮನೆಗೆ ಬೇರೆ ಹೋಗುತ್ತಿಏನು, ಇಲ್ಲೇ ಕಂಡು ಮಾತನಾಡುವುದು ಸಾಕು ಮಹರಾಯ ಎಂದಿದ್ದರು: ಮುತ್ತಣ್ಣನ ಮಾತು ಮುಂದುವರಿದೇ ಇತ್ತು ನಾನು ಹೋಗುತ್ತೇನೆಂದು ಹೊರಟೆ ನಾವು ಯಾರೊಂದಿಗಾದರೂ ಮಾತನಾಡುತ್ತಿದ್ದರೆ, ಅವರು ಹೇಳುವ ವಿಷಯ ಪೂರ್ತಿ ಆಗುವವರೆಗೆ ಕಾಯಲು ಸಾಧ್ಯವಾಗದಿದ್ದರೆ ಕನಿಷ್ಟ ವಾಕ್ಯ ಪೂರ್ಣ ಆಗುವವರೆಗಾದರೂ ಕಾದು ಈ ವಿಷಯ ಮುಂದೆ ಬೇಟಿ ಆದಾಗ ಮುಂದುವರೆಸುವ ಎಂದು ಬೀಳ್ಕೊಡಬಹುದು. ಆದರೆ ಮುತ್ತಣ್ಣ ನಂತವರ ಮಾತಿನಲ್ಲಿ ಅಲ್ಪ ವಿರಾಮ, ಪೂರ್ಣ ವಿರಾಮ ಎನ್ನುವುದೇ ಇಲ್ಲದಿರುವಾಗ ನಾವು ಶಿಷ್ಟಾಚಾರ ಇಟ್ಟುಕೊಳ್ಳುವುದರಲ್ಲಿ ಅರ್ಥವಿರುವುದಿಲ್ಲ. ಹಾಗಾಗಿ ಮುತ್ತಣ್ಣನ ಮಾತು ಮುಂದುವರಿದೇ ಇದ್ದಂತೆ ನಾನು ಅಲ್ಲಿಂದ ಕಾಲು ಕಿತ್ತೆ.

ಗುರುವಪ್ಪಣ್ಣನ ಮನೆ ಹತ್ತಿರ ಬಂದಾಗ ಅಂಗಡಿ ಚಂದ್ರಪ್ಪ ಎದುರಗೊಂಡು, ಅವರು ಕೊಟ್ಟಿಗೆಯಲ್ಲಿದ್ದಾರೆ ಹೋಗಿ ಎಂದಷ್ಟೇ ಹೇಳಿ ಹೋದರು, ನಾನು ನೇರವಾಗಿ ಮನೆಯ ಹಿಂಬದಿಯಲ್ಲಿ ದನ ಕಟ್ಟುವಲ್ಲಿಗೆ ಹೋದೆ, ಅಲ್ಲಿ ಐದಾರು ಜನ ಸೇರಿದ್ದರು ನನ್ನನ್ನು ಕಾಣುತ್ತಲೆ ನೋಡಿ ಮೇಷ್ಟ್ರೇ ಹೀಗೆ ಮಾಡಿ ಬಿಟ್ಟರಲ್ಲಾ ಎಂದು ಗುರವಪ್ಪಣ್ಣನ ಪತ್ನಿ (ಅಮ್ಮ ಎಂದೇ ನಾನು ಅವರನ್ನು ಕರೆಯುವುದು) ಜೋರಾಗಿ ಅಳಲು ಪ್ರಾರಂಭಿಸಿ ಬಿಟ್ಟರು, ಕೆಂಪೆತ್ತು ಹೊಟ್ಟೆ ಊದಿಸಿಕೊಂಡು ಬಿದ್ದಿತ್ತು. ನಾನು ಸಣ್ಣ ಕರುವಿನಿಂದ ಹಿಡಿದು ವಯಸ್ಸಾದ ದನಗಳವರೆಗೆ ಅವುಗಳಿಗೆ ಬರುವ ರೋಗತೊಂದರೆಗಳನೇಕ ಕಂಡಿದ್ದೇನೆ. ಆದರೆ ವಿಶ ಮಿಶ್ರಿತ ಆಹಾರವನ್ನು ತಿಂದ ಜಾನುವಾರನ್ನು ಇದೇ ಮೊದಲು ನೋಡುತ್ತಿರುವುದು. ಇದರ ಎಲ್ಲಾ ಲಕ್ಷಣಗಳನ್ನು ನೋಡಿ ತಿಳಿದುಕೊಳ್ಳಬೇಕೆನ್ನುವ ಕುತೂಹಲದಿಂದ ಹತ್ತಿರಕ್ಕೆ ಹೋದೆ ತೊಪ್ಪೆಯನ್ನು (ಸಗಣಿ) ಪರೀಕ್ಷೆ ಮಾಡಿದಾಗ ಅದು ಗಟ್ಟಿಇದ್ದು ಬಿಡಿಸಿದಾಗ ನೂಲಿನಂತೆ ಅಂಟುದ್ರವ ಇತ್ತು ಬಾಳೆ ದಿಂಡನ್ನು ಕೊಯ್ದು ಎರಡು ಹೋಲಶುಗಳನ್ನು ಬಿಡಿಸಿದಾಗ ಎಳೆಗಳು ಬರುವ ರೀತಿಯಲ್ಲಿತ್ತು ಹೊಟ್ಟೆ ಊದಿಕೊಂಡು ಮಿಡಿದಾಗ ಹಣ್ಣಾದ ಹಲಸಿನಂತೆ ಡುಬ್,ಡುಬ್ ಎಂದು ಶಬ್ದ ಬರುತ್ತಿತ್ತು, ಕಣ್ಣು ಬಿಡಿಸಿ ನೋಡಿದರೆ ಕೆಂಪಾಗಿ ನೀರು ಸುರಿಯುತ್ತಿತ್ತು. ಬಾಯಿ ಬಿಳುಚಿಕೊಂಡು ತುಂಬಾ ತಣ್ಣಗೆ ಇತ್ತು. ಕೈ ಕಾಲುಗಳು ನೆಟ್ಟಗಿದ್ದು ಮಡಚಲು ಬರುತ್ತಿರಲಿಲ್ಲ, ಎತ್ತಿನ ಹೆಸರಿಡಿದು ಕರೆದರೆ ಯಾವುದೇ ಪ್ರತಿಕ್ರಿಯೆ ಇರಲಿಲ್ಲ, ತಲೆಯನ್ನು ಶರೀರದ ಕಡೆ ತಿರುಗಿಸಿದರೆ ಮತ್ತೆ ನೆಟ್ಟಗೆ ಬಿದ್ದುಬಿಡುತ್ತಿತ್ತು. ಈ ಎತ್ತು ಬಚಾವಾಗುವ ಯಾವ ಲಕ್ಷಣಗಳೂ ಕಂಡುಬರಲಿಲ್ಲ. ಗುರುವಪ್ಪಣ್ಣನಿಗೆ ಎತ್ತು ಆಗುವುದಿಲ್ಲ ಎಂದೆ. ಎಲ್ಲೆ ಸ್ವಲ್ಪ ಹೊತ್ತು

ನಿಂತಿದ್ದೆ ಅಲ್ಲಿ ಸೇರಿದ್ದವರೆಲ್ಲ ತಮ್ಮ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸುತ್ತಿದ್ದರು. ಅಲ್ಲಿ ಇತ್ತೀಚೆಗೆ ತೋಟಗಳಲ್ಲಿ ಹಲಸಿನ ಹಣ್ಣಿಗೆ Ratol ಹಾಕಿಡುವ ಪರಿಪಾಠ ಹೆಚ್ಚಾಗಿದೆ, ನಾನು ಆ ಊರಿಗೆ ಹೋದ 4 ತಿಂಗಳಲ್ಲಿ 3 ಹಂದಿಗಳು ಹೀಗೆ ಸತ್ತಿದ್ದೊ ಮತ್ತು ಗುರುವಪ್ಪಣ್ಣನ ಎತ್ತಿನ ಜೊತೆ ಅವರ ಪಕ್ಕದ ಮನೆಯವರ ಎತ್ತೊಂದು ಹೊಟ್ಟೆಯ ಸಂಕಟ ತಾಳಲಾರದೆ ಕಟ್ಟಲು ಹೋದ ಯಜಮಾನನಿಗೆ ಹಿಗ್ಗಾಮುಗ್ಗ ಹಾದು ಕೊಟ್ಟಿಗೆಯಿಂದ ತಪ್ಪಿಕೊಂಡು ಮನಬಂದಕಡೆ ಓಡುತ್ತಾ ದಾರಿಯಲ್ಲಿ ಎದುರಿಗೆ ಸಿಕ್ಕವರಿಗೆ ಹಾದು ಹಾಗೆ ಅಲ್ಲಿ ಇಲ್ಲಿ ಓಡಿ ನೆಗೆದು ಸುಸ್ತಾಗಿ ಬಿದ್ದುಕೊಂಡಿತ್ತು.

ಆ ಊರಿನಲ್ಲಿ ಕಾಫಿ ತೋಟಕ್ಕೆ ಸ್ವಲ್ಪಮಟ್ಟಿನ ಬೆಲೆ ಇದೆ, ಏಲಕ್ಕಿ ತೋಟಗಳ ಬೇಲಿಯ ಕಂಬಗಳೆಲ್ಲ ಕುಂಟಾಗಿ ಬಿದ್ದು ಮುಳ್ಳು ತಂತಿ ನೆಲದಲ್ಲಿದೆ, ತೋಟಗಳಲ್ಲಿ ಅಲ್ಲಲ್ಲಿ ಮೊಣಕಾಲ ಮಟ್ಟ ಹುಲ್ಲು ಬೆಳೆದಿದೆ, ಏಲಕ್ಕಿ ಗಿಡಗಳಿಗೆ ಕಟ್ಟೆರೋಗ ತಗುಲಿ ತೋಟದಲ್ಲಿ ಗಿಡ ವಿರಳ ಆದಮೇಲೆ ಕೆಲವರು ತೋಟದೊಳಗೆ ದನ ಕಟ್ಟುವುದು, ಮತ್ತೆ ಕೆಲವರು ಪೂರ್ತಿ ಗಿಡ ಕಾಲಿಯಾದ ಕಡೆ ದನಗಳನ್ನು ತಡೆದು ಮೇಯಿಸುವುದೂ ಮಾಡುತ್ತಾರೆ. ತೋಟಕ್ಕೆ ಬೇರೆಯವರ ದನ ನುಗ್ಗಿತೆಂದರೆ ಸ್ವಲ್ಪ ಬೇಲಿ ಸರಿಮಾಡಿಕೊಳ್ಳಿ ಎನ್ನುತ್ತಾರೆ. ಐದು ಎಕರೆ ತೋಟದಲ್ಲಿ 10-15ಕಿಲೊ ಏಲಕ್ಕಿ ಆದರೆ ಎಲ್ಲಿಂದ ತಾನೆ ಬೇಲಿ ರಿಪೇರಿ ಕೆಲಸ ಮಾಡಿಸುವುದು. ಎರಡು ವರ್ಷಗಳ ಹಿಂದೆ ನನ್ನ ಸ್ವಂತ ಊರಲ್ಲೂ ಕೆಲವರು ಪೂರ್ತಿ ಕೂಲಿ ಕೊಟ್ಟು ಕೆಲಸ ಮಾಡಿಸುವವರು, ಸಂಬಳ ಗೀಟುವುದಿಲ್ಲ ಎಂದು ಏಲಕ್ಕಿ ಕೊಯ್ಯುವ ಕೆಲಸಕ್ಕೆ ಹೋಗಿರಲಿಲ್ಲ.

ಎತ್ತು ಕೈಕಾಲು ಒದರಲು ಪ್ರಾರಂಭ ಮಾಡಿತು, ಇನ್ನು ಈ ಪಾಪವನ್ನು ನೋಡುವುದೆಂತು ಎಂದು ಮನೆಯೊಳಗೆಬಂದು ಕುಳಿತುಕೊಂಡೆವು. ಹೇಗೂ ಎತ್ತು ಉಳಿಯುವುದಿಲ್ಲ. ಹೀಗೆ ನರಕ ಬರುವುದಕ್ಕಿಂತ ಬೇಗ ಹೋಗಿಬಿಟ್ಟರೆ ಒಳ್ಳೆಯದೆನ್ನುವುದು ಎಲ್ಲರ ಪ್ರಾರ್ಥನೆ ಆಗಿತ್ತು, ಈ ಹಿಂದೆ ಇಂತದೇ ಘಟನೆಯಲ್ಲಿ 5-6ದಿನ ನರಳಿದ ದನಗಳ ಬಗ್ಗೆ ವಿವರಿಸುತ್ತಿದ್ದರೆ ಎಂತ ಕಟು ಹೃದಯಿಗೂ ಕಣ್ಣಂಚಿನಲ್ಲಿ ಒಂದು ಹನಿ ನೀರು ಬರದೆ ಇರಲಾರದು, ಸ್ವಲ್ಪ ಹೊತ್ತಿನಲ್ಲಿ ಕೊಟ್ಟಿಗೆಯಿಂದ ಓಡಿಬಂದ ವ್ಯಕ್ತಿ ಎತ್ತು ಸತ್ತುಹೋಗಿದೆ ಎಂದ, ಎಲ್ಲರೂ ಅತ್ತಕಡೆ ದಾವಿಸಿದೆವು ಎತ್ತು ಪ್ರಾಣಬಿಟ್ಟಿತ್ತು, ಅಮ್ಮ ಒಂದು ಎತ್ತಿನ ಮೇಲೆ ಬಿದ್ದು ಜೋರಾಗಿ ಅಳಹತ್ತಿದರೂ ದನ ಸಾಕುವುದು ಕಷ್ಟ ಎಂದು ಎಲ್ಲಾ ದನಗಳನ್ನು ಮಾರಿ ಎರಡು ಎತ್ತುಗಳನ್ನು ಮಾತ್ರ ಇಟ್ಟುಕೊಂಡಿದ್ದರು ಅದರಲ್ಲಿ ಒಂದು ಹೀಗಾಗಿತ್ತು ಇರುವುದು ಅಲ್ಪ ಗದ್ದೆ. ಭತ್ತದ ಇಳುವರಿ ತೀರಾ ಕಡಿಮೆ. ಎತ್ತು ಸತ್ತದ್ದು ಅವರಿಗೊಂದು ತುಂಬಲಾರದ ನಷ್ಟ ಅಮ್ಮ ಬಿಕ್ಕಿ ಬಿಕ್ಕಿ ಅಳುವುದು ನನ್ನಿಂದ ನೋಡಲಾಗಲಿಲ್ಲ. ಆ ಊರಿನಲ್ಲಿ ನಮಗೊಂದು ಮನೆಯ ವ್ಯವಸ್ಥೆ ಆಗುವವರೆಗೆ ನನ್ನ ಸಂಸಾರವನ್ನು ಸ್ವಂತ ಮಕ್ಕಳಂತೆ ಉಪಚರಿಸಿ ಊಟ ಹಾಕಿದ ಮಹತಾಯಿ ಅವರು ಅವರಿಗೆ ಇಂತ ಕಷ್ಟ ಬರಬಾರದಿತ್ತೆಂದು ಕ್ರೂರ ವಿಧಿಯನ್ನು ಶಪಿಸುತ್ತಾ ಹಿತ್ತಲಲ್ಲಿ ಅಮ್ಮನ ಅಳುವ ಧ್ವನಿ ಕೇಳಿಸದಷ್ಟು ದೂರದಲ್ಲಿ ನಿಂತಿದ್ದೆ. ಗುರವಪ್ಪಣ್ಣ ಬಂದು ಏನು ಮಾಡುವುದು ಎಂದರು. ಎತ್ತನ್ನು ನಾಳೆ ಬೆಳಿಗ್ಗೆವರೆಗೆ ಏಕೆ ಇಲ್ಲೆ ಬಿಡುತ್ತೀರಿ, ಗುಂಡಿಗೆ ಹಾಕುವ ವ್ಯವಸ್ಥೆ ಮಾಡಿ ಎಂದೆ. ಸುದ್ದಿ ತಿಳಿದು 20,25 ಜನ ಬಂದು ಸೇರಿದರು. ಕೆಲವರು ಗುಂಡಿ ತೆಗೆಯಲು, ಉಳಿದವರು ಬಡಗಿಗೆ ಹಳೆ ಮರದ ಹಲಗೆಗಳನ್ನು ಜೋಡಿಸಿ ಅದರಲ್ಲಿ ಎತ್ತನ್ನು ಮಲಗಿಸಿ ಎತ್ತಿಕೊಂಡು ಗುಂಡಿಯ ಹತ್ತಿರ ತಂದಿಟರು.

ಊರ ಜನರ ಸ್ಪಂದನವನ್ನು ಕಂಡು ನನಗೆ ನಿಜಕ್ಕೂ ಆಶ್ಚರ್ಯವಾಯಿತು. ನನ್ನ ಅನುಭವದಲ್ಲಿ ನಾನು 10ಕ್ಕಿಂತಲೂ ಹೆಚ್ಚು ದನ ಕರುಗಳನ್ನು ಗುಂಡಿಗೆ ಹಾಕಿರಬಹುದು, ಆಗೆಲ್ಲಾ ಹೆಚ್ಚೆಂದರೆ 5-6ಜನ ಸೇರಿರಬಹುದು, ಕೆಲವೊಮ್ಮೆ ಕೆಲಸ ಬಿಟ್ಟನಂತರ ದನ ಸತ್ತರೆ ಮಾರನೆದಿನ ಕೆಲಸದವರು ಬರುವಲ್ಲಿವರೆಗೆ ಕಾದಿರುವುದಿದೆ. ಒಂದೆರಡು ಸಂದರ್ಭದಲ್ಲಿ ಕೊಟ್ಟಿಗೆಯಿಂದ ಕೊಂಚವೇ ದೂರದ ತಗ್ಗಿನ ಜಾಗದಲ್ಲಿ ಗುಂಡಿ ತೆಗೆದು ಒಬ್ಬನೇ ಸತ್ತ ಜಾನವಾರನ್ನು ಎಳೆದುಕೊಂಡು ಹೋಗಿ ಗುಂಡಿಗೆ ಹಾಕಿದ್ದು ಇದೆ. ನನ್ನ ಅನುಭವದ ಮೇಲೆ ಅಲ್ಲಿ ಸೇರಿದವರಿಗೆ ಎತ್ತನ್ನು ಗುಂಡಿ ಹತ್ತಿರಕ್ಕೆ ಎಳೆದುಕೊಂಡು ಹೋಗುವುದಾ ಎಂದು ಕೇಳಿದ್ದಕ್ಕೆ ಮೈಸೂರಿನ ಚಿತ್ರಮಂದಿರವೊಂದರಲ್ಲಿ ಒಮ್ಮೆ ಡಾ||ರಾಜ್ ನಟಿಸಿದ ಚಿತ್ರಕ್ಕೆ ಟಿಕೆಟ್ ಪಡೆಯಲು ಸಾಲಿನಲ್ಲಿ ನಿಂತಿದ್ದೆ ಪಕ್ಕದಲ್ಲಿದ್ದವನನ್ನು ಹೇಗೆ ಚಿತ್ರ ಚೆನ್ನಾಗಿದೆಯೇ? ಎಂದು ಕೇಳಿದ್ದಕ್ಕೆ, ಏನು ಅಣ್ಣಾವ್ರ ಪಿಚ್ಚರ್ ಚೆನ್ನಾಗಿದೆಯಾ ಎಂದು ಕೇಳುವೆ. ಹೇಗಿದೆ ಮೈಗೆ ಎಂದು ನನ್ನ ಸುತ್ತ ಗುಂಪು ಸೇರಿಬಿಟ್ಟರು. ಆಗ ನಾನೊಂದು ಸಬೂಬು ಹೇಳಿ ಹೇಗೂ ಬಚಾವಾಗಿದ್ದೆ, ಅಂತದ್ದೆ ಸನ್ನಿವೇಶ ಇಲ್ಲಿ ಸೃಷ್ಟಿಯಾಗಿತ್ತು, ನಾನು ಕೂಡಲೆ ಎಚ್ಚೆತ್ತು, ಹಾಗಲ್ಲಾ ನಮ್ಮ ಕಡೆ ಮಕ್ಕಳು ಆಡು ಬೇರಿಂಗ್ ಗಾಡಿ ಇರುತ್ತದಲ್ಲಾ ಅದೇರೀತಿ ಮರದ ಚಕ್ರಗಳಿರುವ ಗಾಡಿ ಇಟ್ಟುಕೊಡಿರುತ್ತಾರೆ ಅದರಲ್ಲಿ ಸತ್ತ ಜಾನುವಾರನ್ನು ಮಲಗಿಸಿ ಎಳೆದುಕೊಂಡು ಹೋಗುತ್ತಾರೆ ಎಂದೆ ಪರಿಸ್ಥಿತಿ ತಿಳಿಯಾಯಿತು.

ತಿಳಿದವರಿಂದ ಗುಂಡಿಯ ದಿಕ್ಕನ್ನು ಗುರುತಿಸಿಕೊಳ್ಳಲಾಗಿತ್ತು, ನಾನು ಗುಂಡಿ ತೆಗೆಯುವಲ್ಲಿಗೆ ಹೋಗಿ ನಾಲ್ಕು ಗುದ್ದಲಿ ಮಣ್ಣು ತೆಗೆದೆ, ಎಲ್ಲರೂ ಸೇರಿ ಕೆಲವೇ ಕ್ಷಣದಲ್ಲಿ ಆಳೆತ್ತರದ ಗುಂಡಿ ಆಗಿತ್ತು, ಎತ್ತಿನ ಬಾಯಿಗೆ ಹುಲ್ಲು ಕೊಂಬಿನ ನಡುವೆ ಹೂ, ಅದ್ಯಾವುದೊ ಸೊಪ್ಪಿನ ಕೊನೆ ತಂದು ಎತ್ತಿನ ಮೇಲಿಟ್ಟು ಮಣ್ಣು ಮಾಡಿ ಗಂಧದ ಕಡ್ಡಿ ಹಚ್ಚಿ ಎಲ್ಲರೂ ಮನೆಯ ಹತ್ತಿರ ಬಂದೆವು.

ವಿಷ ಯಾರು ಇಟ್ಟಿರಬಹುದು ಎನ್ನುವ ಬಗ್ಗೆ ಚರ್ಚೆ ನಡೆದಿತ್ತು ಊರಲ್ಲಿ ಒಂದು ಪಂಚಾಯಿತಿ ವ್ಯವಸ್ಥೆ ಇದೆ, ಪಂಚಾಯಿತಿಯ ಅಧ್ಯಕ್ಷಗಿರಿ ಯಾವುದೇ ಒಂದು ಕುಟುಂಬಕ್ಕೆ ಮೀಸಲಾಗಿರದೆ ಅನುಕ್ರಮವಾಗಿ ಎಲ್ಲಾ ಕುಟುಂಬದವರಿಗೂ ವಾರ್ಷಿಕ ಅಧ್ಯಕ್ಷರಗಾದಿ ಹೊಂದುವ ಅಧಿಕಾರದ ವಿಕೇಂದ್ರೀಕರಣ ವ್ಯವಸ್ಥೆಗೆ ಒಳಪಟ್ಟಿರುತ್ತದೆ, ಪ್ರತಿಸಾರಿ ಪಂಚಾಯಿತಿ ಸೇರಿದಾಗ ಅಂದಿನ ಕಲಾಪ ನಿರ್ಣಯ/ತೀರ್ಪುಗಳನ್ನು ಕಲಾಪ ಪುಸ್ತಕದಲ್ಲಿ ದಾಖಲಿಸಲಾಗುತ್ತದೆ, ಈ ಹಿಂದೆ,ಸಾಕುಪ್ರಾಣಿಗಳು ತೋಟ ತೊಡಿಗೆ ನಷ್ಟಪಡಿಸಿದ್ದರೆ ಬಗ್ಗೆ ಪಂಚಾಯಿತಿ ಸೇರಿದ್ದಾಗ,

18 ನೇ ಪುಟಕ್ಕೆ

# ಮಲಬದ್ಧತೆ

ಶಂಕರಪ್ಪನವರಿಗೆ ಈಗ 65ವರ್ಷ ವಯಸ್ಸು. ರಕ್ತದೊತ್ತಡ, ಸಕ್ಕರೆ ಕಾಯಿಲೆ, ಇತ್ಯಾದಿ ಯಾವುದೇ ತೊಂದರೆ ಇಲ್ಲದೆ ಆರೋಗ್ಯವಾಗಿ ಅಡ್ಡಾಡಿಕೊಂಡಿದ್ದಾರೆ. ಆದರೆ ಕಳೆದ 15ವರ್ಷಗಳಿಂದ ಬೆಳಗಿನ ಜಾವ ಅವರು ಅನುಭವಿಸುವ ಸಂಕಟ ಅವರಿಗಷ್ಟೇ ಗೊತ್ತು ! ಬೆಳಿಗ್ಗೆ ಎದ್ದೊಡನೆ ಪಾಯಿಖಾನೆಗೆ ಹೋಗಿ ಕುಳಿತರೆ ಅವರು ಹೊರಬರುವುದು ½ ಗಂಟೆಯ ನಂತರವೇ! ಅದೂ ಬೇರೆಯವರು ಬಂದು ಹತ್ತಾರು ಬಾರಿ ಕದ ತಟ್ಟಿದ ನಂತರ. ಹಾಗೆಂದ ಮಾತ್ರಕ್ಕೆ ಅವರು ಕರುಳಿನಲ್ಲಿದ್ದುದನ್ನೆಲ್ಲಾ ಹೊರ ಹಾಕುತ್ತಾರೆಂದು ಬಾವಿಸಬೇಡಿ. ಪ್ರಯಾಸ ಪಟ್ಟು ಪಟ್ಟು, ಹೊಟ್ಟೆಯನ್ನೆಲ್ಲಾ ಅದುಮಿ ಹಲ್ಲು ಕಚ್ಚಿ, ಬೊಬ್ಬಿಡುತ್ತಾ ಸಂಡಾಸು ಮಾಡುವ ಅವರ ಪ್ರಯತ್ನ ಸಫಲವಾಗುವದೇ ಇಲ್ಲ. ಹೊರಬಂದ ಮೇಲೆ ಮತ್ತೆ ಹೊಟ್ಟೆಯೊಳಗೆ ತಳಮಳ, ಮಲ ಇನ್ನೂ ಬರುತ್ತಿರುವ ಅನುಭವ, ಇನ್ನೊಮ್ಮೆ ಸಂಡಾಸಿಗೆ ಹೋಗಬೇಕು ಅಂತ ಅನಿಸುತ್ತದೆ. 'ಯಾಕೆ ಬೇಕಪ್ಪಾ ಈ ಗೋಳು"- ಅಂತ ಸಂಕಟ ಪಡುವದೇ ಅವರ ಬೆಳಗಿನ ದಿನಚರಿಯಾಗಿ ಬಿಟ್ಟಿದೆ.

'ಡಾಕ್ಟರೆ, ನನ್ನ ಹೊಟ್ಟೆಯೊಳಗೆ ಏನಾಗಿದೆಯೋ ಅರಿಯೆ. ಯಾಕೊ ನನಗೆ ಈಗೀಗ ಮಲ ಚೆನ್ನಾಗಿ ಸಲೀಸಾಗಿ ಹೊರಗೆ ಹೋಗುತ್ತಲೇ ಇಲ್ಲ. ಲ್ಯಾಟ್ರೀನ್ (Latrin) ರೂಮ್‌ನೊಳಗೆ ಪಡುವ ಸಂಕಟ ನನಗಷ್ಟೇ ಗೊತ್ತು ! ಸರಿಯಾಗಿ ಸಂಡಾಸು ಆಗುತ್ತಿಲ್ಲ, ಅಂದ ಮೇಲೆ ನಾನು ತಿಂದದ್ದೆಲ್ಲಾ ಎಲ್ಲಿಗೆ ಹೋಗುತ್ತದೆ ಡಾಕ್ಟರೆ? ಹೇಗಾದರೂ ಮಾಡಿ ಈ ಸಮಸ್ಯೆ ನಿವಾರಿಸಿಬಿಡಿ ಅಂತ ಬೊಬ್ಬಿಡುತ್ತಾರೆ ಶಿವಣ್ಣ.

' ನಮ್ಮ ಮಗು ಇತ್ತೀಚೆಗೆ ಕಕ್ಕಸೇ ಸರಿಯಾಗಿ ಮಾಡುವುದಿಲ್ಲ ಡಾಕ್ಟ್ರೆ ಕಷ್ಟಪಟ್ಟು ಮಾಡಿಸಿದರೂ ಮೊಲದ ಹಿಕ್ಕೆಯಂತೆ ನಾಲ್ಕೈದು ಗೋಲಿಗಳು ಮಲದ ರೂಪದಲ್ಲಿ ಬೀಳುತ್ತವೆ. ಹಗಲೆಲ್ಲಾ ಕೆಟ್ಟವಾಸನೆ ಹೊರಸೂಸುತ್ತಿರುತ್ತಾನೆ. ನನಗಂತೂ ಏನೂಂತ ತೋಚದಾಗಿದೆ. - ಎಂಬುದು ಮೂರು ವರ್ಷದ ಮಧುರಳ ತಾಯಿಯಿ ಅಹವಾಲು.

' ಮಲಬದ್ಧತೆ ' ಹೆಸರನ್ನು ಕೇಳದವರೇ ಇಲ್ಲ. ಅದರ ಕಷ್ಟ ಅನುಭವಿಸಿದವರಿಗೇ ಗೊತ್ತು. ಇದು ದೇಹ ಅನುಭವಿಸುವ ಒಂದು ತರದ ಕಠಿಣ ಶಿಕ್ಷೆ ಎಂದರೂ ತಪ್ಪಾಗಲಾರದು.

ಈ ಸಮಸ್ಯೆಗೆ ಕಾರಣಗಳೇನು? ಪರಿಹಾರವೇನು?

ತೀರಾ ಗಟ್ಟಿಯಾದ ಮಲ ಆಗುತ್ತಿದ್ದಲ್ಲಿ ವಾರದಲ್ಲಿ 3 ಬಾರಿಗಿಂತ ಕಡಿಮೆ ಸಂಡಾಸು ಆಗುತ್ತಿದ್ದಲ್ಲಿ, ಸಂಡಾಸು ಸಮಯದಲ್ಲಿ ಬಹಳ ಕಷ್ಟವಾಗುತ್ತಿದ್ದಲ್ಲಿ, ಅಥವಾ ನೋವು ಇದ್ದಲ್ಲಿ ಅದನ್ನು ಮಲಬದ್ಧತೆ ಎನ್ನುತ್ತೇವೆ.

ಕೆಲವರು ದಿನಕ್ಕೆ 1ಬಾರಿ ಸಹ ಮಲ ಮಾಡದೆ ಇರಬಹುದು. ಇದು ಅವರವರು ಬೆಳೆಸಿಕೊಂಡ ಅಭ್ಯಾಸವನ್ನು ಅವಲಂಬಿಸಿರುತ್ತದೆ. ಜಾಸ್ತಿ ಕಷ್ಟವಿಲ್ಲದೆ ಸರಿಯಾಗ ಮಲವಾಗುತ್ತಿದ್ದಲ್ಲಿ ಅದು ಮಲಬದ್ಧತೆ ಅಲ್ಲ.

ಅತ್ಯಂತ ಸಾಮಾನ್ಯವಾದ ಈ ತೊಂದರೆಯನ್ನು ಅನುಭವಿಸದವರೇ ಇಲ್ಲ. ವಯಸ್ಸಾದವರಲ್ಲಂತೂ ಇದೊಂದು ಬಿಡಿಸಲಾರದ ಬಂಧವಾಗಿ ಕಾಡಿಸುತ್ತಿರುತ್ತದೆ.

**ಕಾರಣಗಳು:**

ನೀವು ಪರಊರಿಗೆ ಪ್ರವಾಸ ಹೋಗುತ್ತೀರ ಎಂದುಕೊಳ್ಳೋಣ. ಅಲ್ಲಿನ ವಾತಾವರಣ, ಊಟದ ಶೈಲಿ, ಎಲ್ಲಕ್ಕಿಂತ ಮುಖ್ಯವಾಗಿ ಅಲ್ಲಿರುವ ಲ್ಯಾಟ್ರಿನ್ ಎಲ್ಲಾ ನಿಮಗೆ ಹೊಸದಾಗಿರುತ್ತದೆ. ಈ ಸಂದರ್ಭದಲ್ಲಿ ನಿಮ್ಮ ಜೀರ್ಣಾಂಗ ವ್ಯೂಹಕ್ಕೆ ಈ ರೀತಿಯ ಹೊಸ ವ್ಯವಸ್ಥೆಗೆ ಹೊಂದಿಕೊಳ್ಳಲು ಸ್ವಲ್ಪ ಸಮಯ ಬೇಕಾಗುತ್ತದೆ. ಹೊರ ಊರಿಗೆ ಪ್ರವಾಸ ಮಾಡಿದ ಸಂದರ್ಭದಲ್ಲಿ ಅಥವಾ ಕ್ಯಾಂಪ್ ಹೋಗಿರುವಾಗ 3-4 ದಿನ ಸಂಡಾಸು ಮಾಡದೆ ಇದ್ದಂತಹ ಪರಿಸ್ಥಿತಿಯನ್ನು ನೀವೂ ಅನುಭವಿಸಿರಬಹುದು. ಅಲ್ಲವೆ? ಇದು ಸಹಜ. ಒಮ್ಮೆ ಹೊಂದಿಕೆಯಾದೊಡನೆ ಎಲ್ಲವೂ ಸರಿಯಾಗಿಬಿಡುತ್ತದೆ.

ಊಟದಲ್ಲಿ ಸೊಪ್ಪು, ತರಕಾರಿ ಕಡಿಮೆ ಸೇವಿಸುವುದು, ನಾರಿನಾಂಶ ಇರುವ ತರಕಾರಿ ಕಡಿಮೆ ತಿನ್ನುವುದು, ಹಣ್ಣುಗಳನ್ನು ದಿನನಿತ್ಯ ತಿನ್ನದಿರುವುದು, ಕಡಿಮೆ ನೀರು ಕುಡಿಯುವದು, ಪ್ರತಿನಿತ್ಯ ಜಾಸ್ತಿ ಕೊಬ್ಬಿರುವ ಮಾಂಸ ತಿನ್ನುವುದು, ವ್ಯಾಯಾಮ ಕೊರತೆ, ಸೋಮಾರಿತನ ಜೀವನ ಶೈಲಿ, ಇವು ಮಲಬದ್ಧತೆಗೆ ಅತ್ಯಂತ ಸಾಮಾನ್ಯವಾದ ಕಾರಣಗಳು.

ಮಗುವಿಗೆ 4-5 ತಿಂಗಳಾದೊಡನೆ ಎದೆಹಾಲಿನ ಜೊತೆಗೆ ಇತರ ಆಹಾರ ಪದಾರ್ಥಗಳನ್ನು ನೀಡುವ ಈ ಸಂದರ್ಭದಲ್ಲೂ ಮಗುವಿನ ಜೀರ್ಣಾಂಗವ್ಯೂಹಕ್ಕೆ ಹೊಸ ಆಹಾರಕ್ಕೆ ಹೊಂದಿಕೊಳ್ಳಲು ಸಮಯ ಬೇಕಾಗಬಹುದು. ಈ ಸಂದರ್ಭದಲ್ಲಿ ಭೇದಿ ಅಥವಾ ಮಲಬದ್ಧತೆ ಎದುರಾಗುವುದು ಸಾಮಾನ್ಯ.

ಥೈರಾಯಿಡ್ ಹಾರ್ಮೋನಿನ ನ್ಯೂನತೆಗಳು, ಹಾಗೆಯೇ ಸಣ್ಣಕರುಳು, ದೊಡ್ಡಕರುಳು, ಗುದದ್ವಾರಕ್ಕೆ ಸಂಬಂಧಿಸಿದ ರೋಗಗಳು, ಮೊಲೆರೋಗ (Piles), ಗುದದ್ವಾರದ ನೋವು ಬರಿತ ಕಾಯಿಲೆಗಳು (Fistula ಇತ್ಯಾದಿ), ಕರುಳಿನ ಕ್ಯಾನ್ಸರ್ ಇತ್ಯಾದಿ ಸಂದರ್ಭಗಳಲ್ಲೂ ಮಲಬದ್ಧತೆ ಎದುರಾಗುತ್ತದೆ.

ಕೆಲವೊಂದು ಔಷಧಗಳನ್ನು ಜಾಸ್ತಿ ಸೇವಿಸುವವರಿಂದಲೂ ಮಲಬದ್ಧತೆ ತಲೆದೂರಬಹುದು. ಉದಾ : ಗ್ಯಾಸ್ಟ್ರಿಕ್ ರೋಗಿಗಳು ಬಳಸುವ ಆಂಟಾಸಿಡ್( Antacid) ಔಷದ, ನೋವು ನಿವಾರಕ ಮಾತ್ರೆಗಳು, ಕಬ್ಬಿಣಾಂಶವಿರುವ ಗುಳಿಗೆಗಳು, ಒಣಕೆಮ್ಮನ್ನು ಶಮನಗೊಳಿಸಲು ಬಳಸುವ ಕೋಡಿನ್ (Codein), ಮಾನಸಿಕ ಖಿನ್ನತೆ ಇರುವ ರೋಗಿಗಳು ಉಪಯೋಗಿಸುವ ಮಾತ್ರೆ (Anti-Depressents), ಇತ್ಯಾದಿ, ಈ ಸಂದರ್ಭದಲ್ಲಿ ಔಷಧವನ್ನು ನಿಲ್ಲಿಸಿದಲ್ಲಿ ಮಲಬದ್ಧತೆ ದೂರವಾಗುತ್ತದೆ.

**ಚಿಕಿತ್ಸೆ :**

ದಿನನಿತ್ಯ ಹಸಿರು ಸೊಪ್ಪು, ತರಕಾರಿ, ಹಣ್ಣುಗಳನ್ನು (ಮುಖ್ಯವಾಗಿ ಬಾಳೆಹಣ್ಣು) ಧಾರಾಳವಾಗಿ ಉಪಯೋಗಿಸಬೇಕು. ಮರಗೆಣಸು, ದಂಟಿನ ತರಕಾರಿ, ಕಾಳು ಬೇಳೆಗಳು, ಜಾಸ್ತಿ ನಾರಿನಾಂಶ ಇರುವ ತರಕಾರಿಗಳನ್ನು ಉಪಯೋಗಿಸಬೇಕು.

**ಹೊಟ್ಟೆ ಕಿಚ್ಚಿಗೆ ಮದ್ದಿಲ್ಲ.**

ಸಾಕಷ್ಟು ನೀರು ಕುಡಿಯಬೇಕು (ಪ್ರತಿದಿನ ಮೂರು ಲೀಟರ್‌ಗಿಂತಲೂ ಜಾಸ್ತಿ)

ದಿನನಿತ್ಯ ನಡಿಗೆ, ಸರಳ ವ್ಯಾಯಾಮಗಳು, ಅಗತ್ಯ ವಿಶ್ರಾಂತಿ, ಮನರಂಜನೆ ಇವು ಸಹ ಬಹಳ ಪ್ರಾಮುಖ್ಯವಾದದ್ದು. ಯಾವಾಗಲೂ ಚಿಂತೆ, ಉದ್ವೇಗಕ್ಕೆ ಒಳಗಾಗದೆ ಶಾಂತಚಿತ್ತರಾಗಿರಬೇಕು. ಈ ಕ್ರಮಗಳಿಂದ ಹೆಚ್ಚಿನ ಸಂದರ್ಭಗಳಲ್ಲಿ ಮಲಬದ್ಧತೆ ಎದುರಾಗದಂತೆ ನೋಡಿಕೊಳ್ಳಬಹುದು.

ಪ್ರತಿದಿನ ಕಕ್ಕಸಿಗೆ ಹೋಗಲು ಒಂದು ನಿರ್ದಿಷ್ಟ ಸಮಯ ನಿಗದಿ ಪಡಿಸಕೊಂಡಿರಬೇಕು. ಇದನ್ನು ಶಿಸ್ತಿನಿಂದ ಪಾಲಿಸಬೇಕು. ಎಲ್ಲೆಂದರಲ್ಲಿ ಅಥವಾ ಯಾವುದೇ ಸಮಯದಲ್ಲಿ ಮಲ ಮಾಡುವ ಅಭ್ಯಾಸ ತ್ಯಜಿಸಬೇಕು.

ಈ ಕ್ರಮಗಳಿಂದ ಮಲಬದ್ಧತೆ ಹಲವಾರು ಸಮಯದಿಂದ ಇದ್ದಲ್ಲಿ ತಜ್ಞ ವೈದ್ಯರನ್ನು ಕಂಡು ಪೂರ್ಣವಾಗಿ ಪರೀಕ್ಷೆಗೆ ಒಳಗಾಗಬೇಕು.

ಮಲ ಹೊರದೂಡಲು ಸಹಾಯಮಾಡಲು ವೈದ್ಯರು ಕೆಲವೊಮ್ಮೆ ಸುಖವಿರೇಚಕ (Laxztives) ಔಷಧಗಳನ್ನು ನೀಡಬಹುದು. ಆದರೆ ವೈದ್ಯರ ಸಲಹೆಯಿಲ್ಲದೆ ಈ ಔಷಧಿಗಳನ್ನು ಪದೇ ಪದೇ ತೆಗೆದುಕೊಳ್ಳುವ ಅಭ್ಯಾಸ ಒಳ್ಳೆಯದಲ್ಲ. ಮಲಬದ್ಧತೆಗೆ ಕಾರಣವನ್ನು ತಿಳಿದು ಅದನ್ನು ಪರಿಹರಿಸುವತ್ತ ಗಮನ ಹರಿಸಬೇಕು.

— ಡಾ|| ಪ್ರವೀಣ ಯಸ್. ಎಸ್. MD, DNB, ಕೇರಳ

## ದಕ್ಷಿಣ ಕನ್ನಡ ಮತ್ತು ಕೊಡಗು ಗೌಡ ಸಮಾಜ

### ಅಭಿವೃದ್ಧಿ ಸಂಘ (ರಿ), ಶಾಖೆ : ಸೋಮವಾರಪೇಟೆ

ದಿನಾಂಕ 12-11.2000ನೇ ಭಾನವಾರದಂದು ಇಲ್ಲಿಯ ಜ್ಞಾನ ವಿಕಾಸ ಅಂಗ್ಲ ಮಾಧ್ಯಮ ಶಾಲಾ ಆವರಣದಲ್ಲಿ ಸೋಮವಾರ ಪೇಟೆ ಟೌನ್ ಮತ್ತು ಆಸುಪಾಸಿನಲ್ಲಿ ವಾಸಿಸುವ ಮೇಲ್ಕಂಡ ಸಮಾಜದ ಸುಮಾರು 250 ಜನರು ಸೇರಿ ಕಾರ್ಯಕ್ರಮ ನಡೆಸಿದೆವು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ನಿವೃತ್ತ ಡಿ. ವೈ. ಎಸ್. ಪಿ. ಶ್ರೀ ಕೂಡಕಂಡಿ ಎ. ಸೋಮಣ್ಣನವರು ಹಾಗೂ ವಕೀಲರಾದ ಶ್ರೀ ಪೊನ್ನಚನ ಕೆ. ಗಣಪತಿಯವರು ಜ್ಯೋತಿ ಬೆಳಗಿಸಿ ನಮ್ಮವರ ಕೂಟದ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ತದನಂತರದ ಸಭೆಯ ಅಧ್ಯಕ್ಷತೆಯನ್ನು ಪಟ್ಟಣ ಸಮಿತಿಯ ಅಧ್ಯಕ್ಷರಾದ ಶ್ರೀ ಕುದುಕುಳಿ ಟಿ. ರಾಮಪ್ಪನವರು ವಹಿಸಿದ್ದರು.

ವೇದಿಕೆಗೆ ಮುಖ್ಯ ಅತಿಥಿಗಳಾದ ಶ್ರೀ ಕೂಡಕಂಡಿ ಎ. ಸೋಮಣ್ಣ, ನಿವೃತ್ತ ಡಿ. ವೈ. ಎಸ್. ಪಿ. ಮತ್ತು ಶ್ರೀ ಪೊನ್ನಚನ ಕೆ. ಗಣಪತಿ ವಕೀಲರು ಸೋಮವಾರ ಪೇಟೆ ಇವರುಗಳನ್ನು ಶ್ರೀ ಸೂದನ ಯಸ್. ಸೋಮಣ್ಣನವರು ವೇದಿಕೆಕೆ ಆಹ್ವಾನಿಸಿದರು.

ಕುಮಾರಿ ನಂಬೂಡಿರ ಬಸಪ್ಪ ನೀತು ರವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಸಭೆಗೆ ಆಗಮಿಸಿದ ಮುಖ್ಯ ಅತಿಥಿಗಳನ್ನು ಆಹ್ವಾನಕ್ಕೆ ಮನ್ನಣೆ ಕೊಟ್ಟು ಆಗಮಿಸಿದ ಸ್ವಜಾತಿ ಬಾಂದವರುಗಳನ್ನು ಸ್ವಾಗತಿಸಲಾಯಿತು.

ಕಳೆದ ಸಾಲಿನ ನಮ್ಮವರ ಕೂಟದ ವರದಿಯನ್ನು ಈ ದಂಡಿನ ಎಂ. ಉತ್ತಯ್ಯನವರು ಸಭೆಗ ಓದಿ ತಿಳಿಸಿದರು.

ನಂತರ ಮಾತನಾಡಿದ ಮುಖ್ಯ ಅತಿಥಿಗಳಾದ ಶ್ರೀ ಕೂಡಕಂಡಿ ಎ. ಸೋಮಣ್ಣನವರು ತಮ್ಮ ಮಕ್ಕಳಿಗೆ ಉತ್ತೇಜನ ಕೊಟ್ಟು ಉತ್ತಮ ವಿದ್ಯಾಭ್ಯಾಸವನ್ನು ಕಲ್ಪಿಸಬೇಕಂದು ನೆರೆದಿದ್ದ ತಂದೆ ತಾಯಂದಿರಿಗೆ ಕಿವಿಮಾತು ಹೇಳಿದರು. ಹಾಗೂ ನಮ್ಮ ಜನಾಂಗದವರು ಎಲ್ಲಿಯೇ ಕಾಣಲಿ ನಮ್ಮವರೊಂದಿಗೆ ಅರೆ ಭಾಷೆಯಲ್ಲಿ ಮಾತನಾಡುವಂತೆ ಸಲಹೆ ನೀಡಿದರು.

ಇನ್ನೊಬ್ಬ ಮುಖ್ಯ ಅತಿಥಿ ಶ್ರೀ ಪೊನ್ನಚನ. ಕೆ. ಗಣಪತಿ ಮಾತನಾಡಿ ಇಂತಹ ಸಮಾರಂಭಗಳಲ್ಲಿ ಮೇಲು ಕೀಳೆಂಬ ಭಾವನೆಯಿಲ್ಲದೆ ಎಲ್ಲರು ಒಬ್ಬರನ್ನೊಬ್ಬರು ಬೆರೆಯಲು ಇದೊಂದು ಸುಸಂದರ್ಭವೆಂದು ತಿಳಿಸಿದರು.

ಸಮಾಜದ ವತಿಯಿಂದ ಏರ್ಪಡಿಸಿದ್ದ ಲಾಟರಿಯನ್ನು, 1999-2000ನೇ ಸಾಲಿನ ಪಬ್ಲಿಕ್ ಪರೀಕ್ಷೆಯ 7ನೇ ತರಗತಿ 10ನೇ ತರಗತಿ ಮತ್ತು 11 ಪಿ.ಯು.ಸಿ. ಯಲ್ಲಿ ಹೆಚ್ಚು ಅಂಕಗಳಿಸಿದ ಮಕ್ಕಳಿಗೂ ಹಾಗೂ ಆಟೋಟಗಳಲ್ಲಿ ಗೆದ್ದವರಿಗೆ ಬಹುಮಾನವನ್ನು ಮುಖ್ಯ ಅತಿಥಿಗಳಿಂದ ನೀಡಲಾಯಿತು.

ಪಟ್ಟಣ ಸಮಿತಿಯ ಅಧ್ಯಕ್ಷರಾದ ಶ್ರೀ ಕುದುಕುಳಿ ರಾಮಪ್ಪನವರು ಮಾತನಾಡಿ ಮುಂದಿನ ವರುಷ ಸಹ ಇದೇ ರೀತಿ ನಮ್ಮವರ ಕೂಟಕ್ಕೆ ಸಹಕರಿಸಲು ಕೋರಿದರು ಹಾಗೂ ದಿನದ ಕಾರ್ಯಕ್ರಮವು ಸಾಂಗವಾಗಿ ನಡೆದಿರುವುದಕ್ಕೆ ಕಾರ್ಯಕರ್ತರನ್ನು ಶ್ಲಾಘಿಸಲಾಯಿತು.

ಕಾರ್ಯಕ್ರಮವನ್ನು ಸೂದನ ಸೋಮಣ್ಣ ನಿರೂಪಿಸಿದರೆ, ಶ್ರೀ ಅಂಬ್ರಾಟೆ ಬಾಸ್ಕರವರು ಮುಖ್ಯ ಅತಿಥಿಗಳನ್ನು ನೆರೆದಿದ್ದ ಬಾಂಧವರುಗಳನ್ನು ಹಾಗೂ ಈ ಕಾರ್ಯಕ್ರಮಕ್ಕೆ ಉಚಿತವಾಗಿ ಶಾಲಾ ಆವರಣವನ್ನು ಬಿಟ್ಟು ಕೊಟ್ಟ ಶಾಲಾಭಿವೃದ್ಧಿ ಸಮಿತಿಯವರನ್ನು ಹಾಗೂ ಸರ್ವರನ್ನೂ ವಂದಿಸಲಾಯಿತು.

ಮಧ್ಯಾಹ್ನಕ್ಕೆ ನೆರೆದ ಬಾಂಧವರುಗಳಿಗೆ ವಿಶೇಷವಾದ ಕೊಡಗಿನ ಊಟದ ವ್ಯವಸ್ಥೆಯಿತ್ತು.

— ವರದಿ : ಸೂದನ ಎಸ್. ಸೋಮಣ್ಣ, ಸೋಮವಾರ ಪೇಟೆ.

ಅಡಿಕೆ ಕದ್ದರೂ ಕಳ್ಳ, ಆನೆ ಕದ್ದರೂ ಕಳ್ಳ.

## ಸಂಗಾತಿ ಭವಿಷ್ಯ : ಡಿಸಂಬರ್ 16- 31

ಜ್ಯೋತಿಷ್ಯರು : ಗಿರೀಶ್‌ಕುಮಾರ್, ಕೊಯನಾಡು

**ಮೇಷರಾಶಿ** : ದೈವಾನುಕೂಲವಿದೆ. ಗೃಹವಲಯದಲ್ಲಿ ದೇವತಾಕಾರ್ಯ ಮಾಡುವ ಹವಣಿಕೆಯಲ್ಲಿರುತ್ತೀರಿ. ದೇಹದಲ್ಲಿ ಆರೋಗ್ಯವು ಹದಗೆಡುವ ಸಂಭವವಿದೆ. ಹಣಕಾಸಿನ ವ್ಯವಹಾರ ಸ್ವಲ್ಪ ಮಟ್ಟಿಗೆ ಸುಧಾರಿಸುವುದು.

**ವೃಷಭ ರಾಶಿ** : ಅದೃಷ್ಟವು ತಾನಾಗಿಯೇ ಬರುವುದು. ಅದನ್ನು ಸ್ವಬುದ್ಧಿಯಿಂದ ಮುಂದುವರಿಸುವುದು ಒಳಿತು. ಕೋರ್ಟುತಕರಾರುಗಳಲ್ಲಿ ನಷ್ಟ ಅನುಭವಿಸುವಿರಿ. ಕೈ ಹಿಡಿದ ಕೆಲಸವು ನಿಧಾನವಾಗಿ ನೆರವೇರುವುದು.

**ಮಿಥುನ ರಾಶಿ** : ಗೃಹವಲಯದಲ್ಲಿ ಹಿರಿಯರಿಗೆ ಅನಾರೋಗ್ಯ ಕಾಡುವುದು. ಅಪಘಾತ ಸಂಭವವಿದೆ. ಶುಭ ಕಾರ್ಯಗಳು ಮುಂದೂಡುವುದು. ಸ್ತ್ರೀಯರಿಂದ ಅವಮಾನಕ್ಕೊಳಗಾಗುವಿರಿ. ಶನಿಯ ಆರಾಧನೆ ಮಾಡಿಕೊಂಡು ಬನ್ನಿ.

**ಕರ್ಕಾಟಕ ರಾಶಿ** : ದೈವಾನುಕೂಲವಿದೆ. ನಿಂತು ಹೋಗಿದ್ದ ಕೆಲಸ ಕಾರ್ಯಗಳು ಮುಂದುವರೆಯುವುದು. ದೇವತಾ ಕಾರ್ಯ ಮಾಡುವ ಹವಣಿಕೆಯಲ್ಲಿದ್ದೀರಿ. ಆರೋಗ್ಯವು ತೀರಾ ಹದಗೆಡುವುದು. ನೀಚ ಜನರಿಂದ ಅಪವಾದಕ್ಕೆ ಈಡಾಗುವಿರಿ. ಶನಿಯನ್ನು ಆರಾಧನೆ ಮಾಡಿಕೊಂಡು ಬನ್ನಿ.

**ಸಿಂಹರಾಶಿ** : ದೈವಾನುಕೂಲವಿಲ್ಲ. ಗೃಹವಲಯದಲ್ಲಿ ವಿವಾಹ ಕಾರ್ಯಗಳಿಗೆ ಅಡ್ಡಿ ಬರಬಹುದು. ದೇವತಾ ಕಾರ್ಯಗಳು ಮುಂದೂಡಬಹುದು. ಸ್ತ್ರೀಯರೊಡನೆ ಕಲಹವೇರ್ಪಟ್ಟು ಸಂದಿಗ್ಧ ಪರಿಸ್ಥಿತಿ ನಿಮ್ಮದಾಗುವುದು. ನೀಚ ಜನರಿಂದ ಅಪವಾದ ಕೇಳುವಿರಿ.

**ಕನ್ಯಾರಾಶಿ** : ಹಣಕಾಸಿನ ವ್ಯವಹಾರದಲ್ಲಿ ಸ್ವಲ್ಪಮಟ್ಟಿಗೆ ನೆಮ್ಮದಿ ಉಂಟಾಗುವುದು. ಭೂಮಿ ಸಂಬಂಧವಾಗಿ ಮಿತ್ರರ ಸೂಚನೆಯಂತೆ ನಡೆದು ಕೊಳ್ಳುವುದು ಸೂಕ್ತ. ದೇವತಾಕಾರ್ಯ ಮಾಡುವುದರಿಂದ ಶುಭವಾಗುವುದು.

**ತುಲಾ ರಾಶಿ** : ದೈವಾನುಕೂಲವಿದೆ. ಆರೋಗ್ಯವು ಸ್ವಲ್ಪ ಮಟ್ಟಿಗೆ ಸುಧಾರಿಸುವುದು. ಭೂಮಿ ಖರೀದಿ ಯೋಗವಿದೆ. ಗೃಹವಲಯದಲ್ಲಿ ಲಗ್ನ ಕಾರ್ಯಗಳಾಗಬಹುದು. ಶನಿಯ ಜಪ ಮಾಡಿದಲ್ಲಿ ಶುಭಕಾರಕ.

**ವೃಶ್ಚಿಕರಾಶಿ** : ಹೊಸ ಭೂಮಿ ಖರೀದಿ ಯೋಗವಿದೆ. ಸ್ತ್ರೀ ಮೂಲಕ ಧನ ಪ್ರಾಪ್ತಿಯಾಗಬಹುದು. ಮತ್ತು ಅಪವಾದವೂ ಬರಬಹುದು. ಸಾಲದಲ್ಲಿ ಸಿಕ್ಕಿ ಒದ್ದಾಡುವಿರಿ. ಶನಿಯ ಆರಾಧನೆಯಿಂದ ಗೃಹವಲಯದಲ್ಲಿ ಕ್ಷೇಮವಿದೆ.

**ಧನಸ್ಸು ರಾಶಿ** : ಗುರುವು ಶುಭ ಸ್ಥಾನದಲ್ಲಿದ್ದ ಕಾರಣ ಸರಕಾರಿ ಸಂಬಂಧ ವ್ಯಾಜ್ಯಗಳು ಬರಬಹುದು. ಕೋರ್ಟು ಕಛೇರಿ ವ್ಯವಹಾರವಿದೆ. ಉಗ್ಯೋಗ ಸಂಬಂಧವಾಗಿ ಸ್ಥಳಾಂತರವಾಗುವಿರಿ. ಹಣಕಾಸಿನ ವ್ಯವಹಾರದಲ್ಲಿ ಮುಂಜಾಗ್ರತೆ ವಹಿಸಿರಿ.

**ಕುಂಬ ರಾಶಿ** : ಗುರು ಬಲ ಚೆನ್ನಾಗಿದೆ. ಗೃಹವಲಯದಲ್ಲಿ ಸ್ವಲ್ಪಮಟ್ಟಿಗೆ ನೆಮ್ಮದಿ. ಹಣಕಾಸು ವ್ಯವಹಾರ ಕೈಗೂಡುವುದು. ಉದ್ಯೋಗಕ್ಕಾಗಿ ಅಲೆದಾಟ ಬೇಡ. ಶೀಘ್ರದಲ್ಲಿ ಸಿಗುವ ಸಂಭವವಿದೆ.

**ಮೀನ ರಾಶಿ** : ಹಣಕಾಸು ಸ್ಥಿತಿ ಪರವಾಗಿಲ್ಲ. ಉದ್ಯೋಗ ಸಿಗುವ ಸಂಭವವಿದೆ. ಗೃಹವಲಯದಲ್ಲಿ ಹೊಸ ಮಿತ್ರ ಭೇಟಿಯಿಂದ ಮನಸ್ಸಿಗೆ ನೆಮ್ಮದಿ. ಪಂಚೇಂದ್ರಿಯಗಳಿಗೆ ಕಡಿವಾಣ ಹಾಕಿ ವ್ಯವಹರಿಸಿ.

---

**15 ನೇ ಪುಟದಿಂದ**

ಅಂದು ಕೆಂಪು ಮೆಣಸಿನ ಗಿಡವೊಂದನ್ನು ದನ ಮೇದರೆ ರೂ. 5/- ಕಾಫಿ ಗಿಡಕ್ಕೆ ರೂ10/ ಏಲಕ್ಕಿ, ಬಾಳೆ ಹೀಗೆ ಬೇರೆ ಬೇರೆ ಗಿಡಗಳಿಗೆ ಇಂತಿಷ್ಟೇ ಹಣದ ರೂಪದಲ್ಲಿ ನಷ್ಟ ಬರಿಸಿಕೊಳ್ಳುವ ಬಗ್ಗೆ ತೀರ್ಮಾನ ಆಗಿತ್ತು, ಆದರೆ ಇದು ಕೇವಲ ಕಡತದಲ್ಲೇ ಉಳಿದಿದ್ದು ಕಾರ್ಯರೂಪಕ್ಕೆ ಬಂದಿರಲಿಲ್ಲ, ಮೂಕ ಪ್ರಾಣಿಗಳಿಗೆ ವಿಶ ಉಣ್ಣಿಸುವ ತಿಳಿಗೇಡಿ ಕೆಲಸ ನಡೆದೇ ಇತ್ತು, ವರ್ಷದ ಹಿಂದೊಮ್ಮೆ ಇಂತಹದ್ದೆ ಘಟನೆಯಲ್ಲಿ ಎಮ್ಮೆಯೊಂದು ವಿಷಮಿಶ್ರಿತ ತಿಂಡಿ ತಿಂದು ಸತ್ತಾಗ, ತಪ್ಪಿತಸ್ಥರಿಂದ ಎಮ್ಮೆಯ ಕ್ರಯ ದಂಡ ಸಮೇತ ವಸೂಲಿ ಮಾಡಲಾಗಿತ್ತು, ಅಲ್ಲಿ ಎಮ್ಮೆಯ ಮಾಲಿಕ ಸಂಶಯ ಇರುವವರ ತೋಟಕ್ಕೆ ಊರಿನ ಜವಾಬ್ದಾರಿಯುತ ವ್ಯಕ್ತಿಗಳಿಬ್ಬರನ್ನು ಸಾಕ್ಷಿಯಾಗಿ ಕರೆದು ಕೊಂಡು ಹೋಗಿ, ಹಲಸಿನ ಹಣ್ಣಿನಲ್ಲಿ ವಿಷ ಬೆರೆಸಿದ್ದನ್ನು ಪತ್ತೆಹಚ್ಚಿ ಪಂಚಾಯಿತಿಯವರ ಮುಂದೆ ಹಾಜರು ಪಡಿಸಿದ್ದ ತೀರಾ ಸಾದು ಸ್ವಭಾವದ ಗುರುವಪ್ಪಣ್ಣನಿಗೆ ಈ ಎಲ್ಲಾ ಕೆಲಸ ಸಾಧ್ಯವಿಲ್ಲ, ಬರಿದೆ ಪಂಚಾಯಿತಿ ಸೇರಿ ಬೊಬ್ಬೆ ಹೊಡೆದು ಮನೆಗೆ ಬರಬೇಕಷ್ಟೆ.... ಎಂದು ನನಗೆ ತಿಳಿದಿತ್ತು. ಅಂತೆ ಮರುದಿನ ಸಂಜೆ ಪಂಚಾಯಿತಿ ಸೇರಿತ್ತು ಪಂಚಾಯಿತಿಯ ಮುಂದೆ ವಿಷ ಇಟ್ಟವನು ನಾನೆ ಎಂದು ಯಾವ ಮೂರ್ಖನೂ ಹೇಳಿಕೊಳ್ಳಲಿಲ್ಲವಾದುದರಿಂದ, ಗುರುವಪ್ಪಣ್ಣ ಅದ್ಯಾವುದೋ ದೇವರಿಗೆ ಹರಕೆ ಹೊರುವುದಾಗಿ ಹೇಳಿ ಸಪ್ಪುಮೋರೆ ಮಾಡಿಕೊಂಡು ಮನೆಗೆ ಬಂದರು.

ಕುಂಬಗೌಡನರಂಜಿತ್ ಮುಕ್ಕಂದೂರು

---

**ಕೆಲಸದ ದಡ್ಡಿಗೆ ಮಕ್ಕಳ ಅಡ್ಡಿ.**

# ಮರುಕದ ಕರುಳು

ಬಿ. ಆರ್. ಜೋಯಪ್ಪ

ನಾನು ಅಮ್ಮನ ಮಡಿಲಲ್ಲಿ ತಲೆ ತೂರಿಸಿಕೊಂಡು ಕೂತಿದ್ದೆ. ಅಕ್ಕ ಕುಕ್ಕರಗಾಲಲ್ಲಿ ಕೂತು ಅವ್ವನ ಮೈಗಂಟಿದ್ದಳು. ತಿಂಗಳ ಬೆಳಕಿನ ರಾತ್ರಿ. ನಮ್ಮ ಕಾಡಿನ ಕತೆಗಾರ ರಾಮನ ಕತೆಗೆ ತಡಿಸಲ ಮರದ ಕೊಂಬೆಯ ನೆರಳೂ ಕಾದು ಕೂತಿತ್ತು. ರಾಮ ಒಂದೆರಡು ದಂ ಬೀಡಿ ಎಳೆದು ಗಂಟಲು ಸರಿಮಾಡಿಕೊಂಡು ಅವನ ಮನಸ್ಸು ಹಿಂದೆ ಹಿಂದೆ ಹೋಗುತ್ತಾ ಇದ್ದ ಹಾಗೆ ಅವನ ಕತೆ ಮುಂದೆ ಮುಂದೆ ಸಾಗಿತು.

ಒಂದು ಬೆಳಗಿನ ಹೊತ್ತು. ರಾಮ ಜೇನು ಬೇಟೆಗೆ ಹೊರಟ. ಎಳೆ ಬಿಸಿಲಾದರೂ ಜೇನುನೊಣ ಬೀಳುವುದು ಕಾಣದೆ ನಿರಾಸೆಗೊಂಡ. ಎಲ್ಲೋ ನಾಯಿ ಒರಲುವ ಸದ್ದು. ಇವನೊಂದಿಗೆ ನಾಯಿ ಬಂದಿರಲಿಲ್ಲ. ಯಾಕೆ ನಾಯಿ ಒರಲುತ್ತಿದೆ? ಆ ಸದ್ದಿನೆಡೆ ಸಾಗಿದ. ನಾಯಿ ಒರಲುತ್ತಲೇ ಇತ್ತು. ಗಾಂಧಿ ಗುಲಾಬಿ ಮೆಳೆ ದಾಟಿದ ಸ್ವಲ್ಪ ಬಾಣೆಜಾಗ. ಅದರಾಚೆ ತಗ್ಗಿ ಬಗ್ಗಿ ನೋಡಿದರೆ ಕಂಡದ್ದು ಕೆನ್ನಾಯಿ.

ಆ ಕೆನ್ನಾಯಿ ರಾಮನನ್ನು ಕಂಡೊಡನೆ ಕುಂಯಿಗುಡುವುದನ್ನು ಹೆಚ್ಚು ಮಾಡಿತು. ಅದು ನಿಂತಲ್ಲಿ ನಿಲ್ಲದೆ ಅಲ್ಲಿದ್ದ ಕಪ್ಪದ( ಹೊಂಡ) ಸುತ್ತಲೂ ಸುತ್ತುತ್ತಾ ಇಣುಕುತ್ತಾ ಸಣ್ಣಕೆ ಊಳಿಡುತ್ತಲೇ ಇತ್ತು. ರಾಮ ಅಂಜುತ್ತಾ ಆ ಕಡೆಗೆ ಹೆಜ್ಜೆ ಇಟ್ಟ. ನಾಯಿ ಓಡಲೇ ಇಲ್ಲ. ಅದು ರಾಮನನ್ನೊಮ್ಮೆ ಕಪ್ಪವನ್ನೊಮ್ಮೆ ನೋಡುತ್ತಾ ಕುಂಯಿಗುಡುತ್ತಿತ್ತು. ರಾಮನಿಗೆ ಕಪ್ಪದಲ್ಲಿ ಯಾವುದಾದರೂ ಮಿಕ ಇದ್ದೀತು. ಇದ್ದರೆ ನಾಯನ್ನೋಡಿಸಿ ತಾನೊಂದು ಗೌಜಿ ಮಾಡಬಹುದು ಎಂಬ ಆಸೆ. ಇನ್ನೊಂದು ಕಡೆ ನಾಯಿ ಯಾವ ಚಣದಲ್ಲಾದರೂ ಮೈಮೇಲೆ ಬಿದ್ದೀತೆಂಬ ದಿಗಿಲು. ಕಪ್ಪದ ಆಚೆಗೆ ಕೆನ್ನಾಯಿ, ಈಚೆಗೆ ರಾಮ!

ರಾಮನ ಆಸೆಯು ಅವನ ದಿಗಿಲಿಗಿಂತ ಬಲವಾಗಿ, ಬಲಗೈಯಲ್ಲಿ ಕತ್ತಿಯನ್ನು ಬಿಗಿಯಾಗಿ ಹಿಡಿದು ನಾಕು ಹೆಜ್ಜೆ ಹಾಕಿದ. ನಾಯಿ ಇವನನ್ನು ನೋಡುತ್ತಾ ಮತ್ತೆ ಗುಳಿಯನ್ನು ಬಗ್ಗಿ ನೋಡಿತು. ರಾಮನೂ ಕಪ್ಪದತ್ತ ಇಣುಕಿದ. ಬಿದ್ದರೆ ಏಳಲಾಗದ ಆಳ. ಅದರಲ್ಲಿ ಆ ಕೆನ್ನಾಯಿಯ ಮರಿ ಬಿದ್ದಿದೆ.

ರಾಮನಿಗೆ ಏನಾಯಿತೊ. ತಕ್ಷಣ ಕಪ್ಪದ ಕಡೆ ಬಾಗಿದ್ದ ರೆಂಬೆಗೆ ಕೊಕ್ಕೆಯೊಂದನ್ನು ತಗಲಿಸಿ ಕಪ್ಪದ ಒಳಗೆ ಇಳಿದ. ಒಳಗಿದ್ದ ನಾಯಿ ಮರಿ ಹತ್ತಲು ಪರದಾಡಿ ಸುಸ್ತಾಗಿ ಹತಾಶವಾಗಿತ್ತು. ರಾಮ ಅದನ್ನು ಎತ್ತಿಕೊಂಡ. ಅದು ವಿಲವಿಲನೆ ಒದ್ದಾಡಿತು. ಕೈಚೀಲದೊಳಗೆ ಹಾಕಿ ಹಿಡಿದುಕೊಂಡು ಮೇಲೇರಿ ಬಂದು ಅದನ್ನು ಚೀಲದಿಂದ ಹೊರತೆಗೆದು ಬಿಟ್ಟ. ಮರಿ ಕುಣಿದಾಡಿ ತಾಯಿಯನ್ನು ಸೇರಿತು. ತಾಯಿಗೋ ಖುಷಿ. ಅದು ಆ ಮರಿಯ ಕುತ್ತಿಗೆಯನ್ನು ನಯವಾಗಿ ಕಚ್ಚಿಕೊಳ್ಳುವ ಮುಂಚೆ ರಾಮನನ್ನು ನೋಡುತ್ತಾ ಕುಂಯಿಗುಟ್ಟಿ ಆಬಾರಿ ಹೇಳಿದ್ದೆನ್ನು ಯಾವ ಮಾತು ತಾನೇ ತರ್ಜುಮೆ ಮಾಡೀತು? ಕ್ಷಣದಲ್ಲೇ ಕೆನ್ನಾಯಿ ತನ್ನ ಮರಿಯ ಸಮೇತ ಕಾಡಲ್ಲಿ ಮರೆಯಾಯಿತು.

ರಾಮನ ಕೆನ್ನಾಯಿ ತಾಯಿ ಕರುಳಿನ ಕತೆಯೋ ರಾಮನ ತಾಯಿ ಕರುಳಿನ ಕತೆಯೋ ಆದ ಈ ಕತೆ ನಮ್ಮ ಕಣ್ಣ ಮುಂದಾಡುತ್ತಾ ನಮ್ಮ ತಾಯಿಗೊತ್ತಿಕೊಂಡು ಕೂತಿದ್ದಾಗ ರಾಮನ ಮನಸ್ಸು ಇನ್ನೊಂದು ತಾಯಿಯನ್ನು ನೆನೆದುಕೊಳ್ಳುತ್ತಿತ್ತು.

ಒಂದು ಸಾರಿ ರಾಮ ಕಾಡಾನೆಗಳು ದಾಟುವ ಸ್ಥಳವನ್ನು ಹುಡುಕುತ್ತಾ ಕಾಡಲ್ಲಿ ತುಂಬಾ ದೂರ ಸಾಗಿಬಿಟ್ಟಿದ್ದ. ಕಪ್ಪವನ್ನು ತೋಡಲು ಆಯಕಟ್ಟಿನ ಸ್ಥಳವನ್ನು ಹುಡುಕುತ್ತಾ ನೋಡುತ್ತಾನೆ.

ಸಿಡಿಲಿನ ಹಾಗೆ ಘೀಳಿಡುತ್ತಾ ಆನೆ ನುಗ್ಗಿ ಬರುತ್ತಿದೆ. ರಾಮನಿಗೆ ಗೊತ್ತಿದ್ದ ದಿಕ್ಕು ದೆಸೆಗಳೆಲ್ಲ ಕಳಚಿಬಿದ್ದವು. ಅಂಕುಡೊಂಕಾಗಿ ಓಟಕಿತ್ತ. ಆನೆ ಸ್ವಲ್ಪ ಓಂದೆ ಬಿತ್ತು. ರಾಮ ಮರ ಹತ್ತಿದ. ಆನೆ ಅದೇ ಮರವನ್ನು ಸಾರಿ ನಿಂತಿತು. ರಾಮನ ಒಡಲು ಮೇಲೆ ಮೇಲೆ ಏರುತ್ತಾ ಮರದ ತುದಿ ತಲುಪಿತು. ಆದರೆ ಸಲಗ ಇವನನ್ನು ಬಲಿತೆಗೆಯಲೇಬೇಕೆಂದು ಹಠ ಮಾಡಿಕೊಂಡಿರುವ ಹಾಗಿದೆ. ಮರವನ್ನು ತಿವಿಯುತ್ತಿದೆ. ಇನ್ನೇನು ಮುಗಿಯಿತು ರಾಮನ ಕತೆ. ಮರದಿಂದ ಇಳಿಯುವ ಹಾಗಿಲ್ಲ. ಹಾರೋಣವೆಂದರೆ ಹತ್ತಿರದಲ್ಲಿ ಇನ್ನೊಂದು ಮರವೂ ಇಲ್ಲ. ಈ ಮರ ಈ ತನ್ನ ಜೀವದಾಸೆಯನ್ನು ಬಿಟ್ಟು ನಡುಗುತ್ತಾ ನಿಂತಿದೆ. ಅದರ ಮೇಲೆ ರಾಮನ ನಡುಗುವ ಮೈ. ಆನೆ ಮರವನ್ನು ತಿವಿಯುತ್ತಲೇ ಇದೆ.

ಅಷ್ಟರಲ್ಲಿ ಮತ್ತೊಂದು ಆನೆ ಅಲ್ಲಿಗೆ ಬರಬೇಕಾ? ಬಂದ ಆ ಹೆಣ್ಣಾನೆ ಸಲಗದೊಂದಿಗೆ ಸೇರಿ ಮರ ಕೆಡವಿದರೆ ಇನ್ನೊಂದು ಕ್ಷಣದಲ್ಲೆ ಮುಗಿಯಿತು ಕತೆ. ರಾಮನ ಎದೆ ಜೀವನದ ಪೂರ್ತಿ ಬಡಿತವನ್ನು ಈಗಲೇ ಬಡಿದು ಮುಗಿಸಲು ಹೊರಟಿದೆ. ಇಡೀ ಆಯುಸ್ಸಿನ ಎಲ್ಲ ಉಸಿರನ್ನೂ ಅವನ ಎದೆ ಈಗಲೇ ಉಸಿರಾಡಿಬಿಡಲು ತೀರ್ಮಾನ ಮಾಡಿದೆ. ಆದರೆ ಇದೇನಿದು? ಬಂದ ಹೊಸ ಆನೆ ಮರ ಬೀಳಿಸಲು ಸಹಕರಿಸುತ್ತಿಲ್ಲ. ಸಲಗ ಮರದ ಸುತ್ತ ಉಚ್ಚೆ ಹುಯ್ದು ನೆಲವನ್ನು ಕೆಸರು ಮಾಡುತ್ತಿದೆ. ಮರದ ಬೇರು ಸಡಿಲಾಗಲಿ ಎಂದು. ಮರ ಇನ್ನೂ ಪೂರಾ ಸಡಿಲವಾಗಿಲ್ಲ. ಆನೆಯ ಯೋಚನೆ ಬದಲಾಯಿತು. ಆ ಹೆಣ್ಣಾನೆಯ ಕಡೆಗೆ ಒಂದು ಸಾರಿ ನೋಡಿ ಈ ಮರದ ಮೇಲೆ ' ನಿಗಾ' ಇಡು ಎಂಬಂತೆ ಕಣ್ಣು ಮಾಡುತ್ತಾ ಅಲ್ಲಿಂದ ಹೊರಟೇ ಹೋಯಿತು. ಈಗ ಹೆಣ್ಣಾನೆಯ ಸರದಿಯೇನೊ ಎಂದುಕೊಂಡ ರಾಮ. ಇನ್ನು ಬದುಕುವುದಕ್ಕೆ ಆಸೆಪಡಲೂ ಅವನಿಗೆ ತ್ರಾಣ ಇರಲಿಲ್ಲ.

ಹೀಗಿರುವಾಗ...

ಆ ಹೆಣ್ಣಾನೆ ಮರದ ಕಡೆ ನೋಡಿ ಸೊಂಡಿಲನ್ನು ಎತ್ತುತ್ತಾ ಇಳಿಸುತ್ತಾ ಮೂರು ನಾಕು ಬಾರಿ ಮಾಡಿತು!? ರಾಮನಿಗೆ ಮೊದಲು ಏನೂ ಅರ್ಥವಾಗಲಿಲ್ಲ. ಆದರೆ ಕೊನೆಗೆ ಹೆಣ್ಣಾನೆ "ನೀನು ಮರದಿಂದ ಇಳಿದುಹೋಗು" ಎಂದು ಹೇಳುತ್ತಿರಬೇಕು ಎನಿಸಿತು. ಇದ್ದರೂ ಇರಬಹುದು. ಇಳಿಯದಿದ್ದರೂ

ಗುಪ್ತದಾನ ಮಹಾ ಪುಣ್ಯ.

ಸಾಯುವುದಂತೂ ಖಂಡಿತ. ಇಳಿದೇ ನೋಡೋಣ ಎನಿಸಿ ತಕು ಪುಕು ಎನ್ನುತ್ತಿದ್ದರೂ ಹೇಗೋ ಇಳಿದ. ಅಲ್ಲೇ ನಿಂತಿದ್ದ ಹೆಣ್ಣಾನೆ ಇವನು ಇಳಿಯುವುದನ್ನು ನೋಡಿತು. ಇಳಿದದ್ದನ್ನು ನೋಡಿತು. ಇಳಿದು ನಿಂತಿದ್ದನ್ನ ನೋಡಿತು. ಆದರೆ ಏನೂ ಮಾಡಲಿಲ್ಲ. ರಾಮ ಓಡಲು ಶುರು ಮಾಡಿದ. ಆನೆ ಮಿಸುಕಲೂ ಇಲ್ಲ. ಹಾಗೆ ಓಡುತ್ತಲೇ ಎಲ್ಲಿಗೆ ಓಡಿಯಾನು? ದೂರದಲ್ಲಿ ಹೆಮ್ಮರ ಒಂದಿತ್ತು. ಒಂದು ಕಡೆ ಆ ಹೆಣ್ಣಾನೆಯನ್ನು ಇನ್ನೊಮ್ಮೆ ನೋಡುವ ಆಸೆ. ಜತೆಗೆ ಓಡಲಾರದಷ್ಟು ಸುಸ್ತು. ಹೀಗಾಗಿ ಆ ಹೆಮ್ಮರವನ್ನು ಹತ್ತಿ ಕೂರುವುದೆ ಸರಿ ಎನಿಸಿ ಆ ಮರ ಹತ್ತಿ ಕೂತ. ಅವನ ಕಣ್ಣೆಲ್ಲ ತಾನು ಹಿಂದೆ ಕೂತ ಮರದ ಕಡೆಗೇ ಇತ್ತು.

ಕೆರೆಯ ಕಡೆಗೆ ಹೋಗಿದ್ದ ಗಂಡಾನೆ ಸರಸರನೆ ಮರಳಿತು. ರಾಮ ಮೊದಲಿದ್ದ ಮರದ ಬಳಿ ಬಂದು ಸೊಂಡಿಲಲ್ಲಿ ತುಂಬಿಕೊಂಡಿದ್ದ ನೀರನ್ನು ಮರದ ಸುತ್ತಾ ಸುರಿಯಿತು. ಬಾಯೊಳಗೆ ಸೊಂಡಿಲು ತೂರಿ ನೀರೆಳೆದು ಮತ್ತೆ ಸುರಿಯಿತು. ಹಾಗೆ ಸುರಿದು ಸುರಿದು ತುಳಿದು ಸುಳಿದು ಕೆಸುರು ಮಾಡಿತು. ನಂತರ ಮೆತ್ತಗೆ ಒಂದು ಹಿಂದಕ್ಕೆ ಹೋಗಿ ಅಲ್ಲಿಂದ ಓಡುತ್ತಾ ಬಂದು ಮರಕ್ಕೆ ಡಿಕ್ಕಿ ಹೊಡೆದು ತಳ್ಳಿತು. ಹೀಗೆ ತಳ್ಳಲು ಮೊದಲೇ ನಡುಗುತ್ತಿದ್ದ ಮರ ಇನ್ನು ನಡುಗಲಾರದೆ ನಿಲ್ಲಲಾರದೆ ನೆಲ ಕಚ್ಚಿತು. ಹೆಣ್ಣಾನೆ ಇನ್ನೂ ಅಲ್ಲೇ ನಿಂತಿತ್ತು. ಮರ ಬಿದ್ದೊಡನೆ ಗಂಡಾನೆ ತನ್ನ ಕೋರೆಯಿಂದ ಮರ ದಿಂಡನ್ನು ಸೀಳಿಸಿಕೊಂಡಂತೆ ತಿವಿಯುತ್ತಿತ್ತು. ಸೊಂಡಿಲಿನಿಂದ ರೆಂಬೆ ಒಪ್ಪನ್ನೆಲ್ಲಾ ಎಳೆದಾಡಿ ಚೂರು ಚೂರು ಮಾಡಿತು. ಇಲ್ಲ, ಅಲ್ಲಿ ರಾಮ ಕಾಣಲಿಲ್ಲ. ಘೀಳಿಡುತ್ತಾ ತುಳಿದಾಡಿತು. ಇಲ್ಲ. ಅಲ್ಲಿ ನಮ್ಮ ರಾಮ ಸಿಗಲಿಲ್ಲ.

ಸಲಗಕ್ಕೆ ಏನನಿಸಿತೋ! ಸರ್‍ರನೆ ಹೆಣ್ಣಾನೆಯ ಕಡೆ ತಿರುಗಿತು. ಸೊಂಡಿಲ ಬಲವನ್ನೆಲ್ಲಾ ಬಿಟ್ಟು ಆ ಹೆಣ್ಣಾನೆಯ ಬೆನ್ನ ಮೇಲೆ ಬಾರಿಸಿತು. ಒಂದಲ್ಲ ಎರಡಲ್ಲ ಅಷ್ಟೊಂದು ಏಟು. ಅದೂ ಸಾಲದೆ ಹೋಗಿ ತನ್ನ ಕೊಂಬಿನಿಂದ ಆ ಹೆಣ್ಣಾನೆಗೆ ತಿವಿಯಲು ಶುರು ಮಾಡಿತು. ಆ ಹೆಣ್ಣಾನೆ 'ಅಯ್ಯೋ' ಎನ್ನುತ್ತಾ ಘೀಳು ಹಾಕುತ್ತಾ ಹಾಗೇ ನಿಂತಿತ್ತು.

ಇದ ಹೇಳುತ್ತಿರುವಾಗಲೇ ಆ ಹೆಣ್ಣಾನೆಗಾದ ನೋವೆಲ್ಲಾ ರಾಮನ ಮೈಯೊಳಗೆ ಮೂಡುತ್ತಿರುವ ಹಾಗೆ ಅವನ ಕಣ್ಣು ತುಂಬಿಕೊಂಡವು. ಕಥೆ ಕೇಳಿದ ನಮ್ಮ ಕಣ್ಣೂ...

---

13 ನೇ ಪುಟದಿಂದ

ಖುಷಿ ಆಗಿ ಹೋತ್. ಈ ವ್ಯಾಪಾರಕ್ಕೆ ಆ ಗಿರಾಕಿನ ಕರ್ಕೊಂಡ್ ಬಂದಂತಹ Mr. ರಾಜುನ ಇವು ನೋಡಿ ಖುಷಿ ಪಟ್ಟಿದ್ದೊ. ಏನೋ ಒಂದ್ ಐವತ್ತು ಸಾವಿರದ ವ್ಯಾಪಾರ ಮಾಡುವೋತೇಳ್ಳ ಲೆಕ್ಕಚಾರನ ಈ ಸುಕ್ರಿಸಾಬ್ ಅಂದಾಜ್ ಮಾಡಿದ್ದೊ. ಈಗ ನೋಡ್ರೆ 1¼ ಲಕ್ಷದ ವ್ಯಾಪಾರ ಒಂದೇ ಪಾರ್ಟಿಂದ ತ್ತೇಳಿ ಖುಷಿಂದ ಇನ್ನೊಂದು ಸರ್ತಿ ಆ ಹಣನ ಎಣಿಸಿನೊಡುತಿದ್ದೊ. ಕತ್ತೆತ್ತಿ ನೋಡಿರೆ ಎದುರುಗಡೆ Mr.ರಾಜು ತನ್ನ ಕಾಲರ್‌ನ ಮೇಲಕ್ಕೆ ಎತ್ತಿ ಕುಷೀಲಿ ನಗೆ ಆಡಿಕಂಡ್ ನಿಂತಿತ್.

ಆಗ ಆ ಸಾಹುಕಾರ ನಗೆ ಆಡಿಕಂಡ್ Mr. ರಾಜು ಈತರ ಗಿರಾಕಿಗ ಇನ್ ಯಾರ್‍ಯಾದರೂ ಇದ್ದರೆ ಹಂಗೆ ಇಲ್ಲಿಗೆ ಕರ್ಕೊಂಡ್ ಬನ್ನಿ, ನಿಮಿಗೆ, ಕಮೀಷನ್ ಸಿಕ್ಕಿದೆ ತಾ ಹೇಳಿಕಂಡ್ ಕೈಗೆ 100ರ 60ನೋಟ್‌ಗಳ (6000) ಹಿಡ್ಸಿತ್. Mr. ರಾಜುಗೆ ಇಷ್ಟೊಂದು ಹಣ ಕೈಗೆ ಬಿದ್ದಾಕ್ಷಣ ತುಂಬಾ ಖುಷಿಆಗಿ ಆ ಕಂತೆಗಳ ಎರಡೂ ಕಣ್ಣ್‌ಗಳಿಗೆ ಒತ್ತಿಕಂಡ್ ಆಮೇಲೆ ಖುಷೀಲಿ ಹೇಳ್ತ್. ಶುಕ್ರಿ ಶಾಬ್ ಈ ದುಡ್ಡ್ ನಿಮ್ಮ ಹತ್ರನೇ ಇರ್‍ಲಿ ಇದರೊಟ್ಟಿಗೆ ನಾನ್ 30ಸಾವಿರನೂ ಕೊಟ್ಟನೆ ನಾನ್ ಈಗ ಸ್ವಲ್ಪ ಬಟ್ಟೆನ ಸೆಲೆಕ್ಟ್‌ಮಾಡಿಕಂಡನೆ. ಅದರ ಬಿಲ್‌ನ ಆಮೇಲೆ ಲೆಕ್ಕ ಹಾಕಿ ತ್ತಾ ಹೇಳ್ತ್ ತನ್ನ ತಂಗೆ ಶೋಭಂಗೆ ಅವಳ ಮೈ ಬಣ್ಣಕ್ಕೆ ಒಪ್ಪುವ ಎರಡ್ ರೇಶ್ಮೆಸೀರೆ, 4 ಸಿಪಾನ್ ಸೀರೆಗಳ ಎರಡ್ ಟೆರಿಕಾಟ ಪ್ರಿಂಟೆಡ್ 4 ನೈಲಾನ್ ಸೀರೆಗಳ ಹಂಗೆ ಇವುಗಳಿಗೆ ಸರಿಹೊಂದುವ ಬ್ಲೌಸ್ ಬಟ್ಟೆಗಳ ಪೆಟ್ಟಿಕೋಟ್ ಬಟ್ಟೆಗಳ ಆಮೇಲೆ ನಾಲ್ಕು ಒಳ್ಳೆ ಡಿಸೈನ್ ಇರುವ ಚೂಡಿದಾರ್‌ಗಳ ಸೆಲೆಕ್ಟ್ ಮಾಡ್ತ್.

ಆಮೇಲೆ ತನ್ನ ಹೆಣ್ಣ್ ಶಾಂತಿ ಗೂಡೆಗೋಸ್ಕರ ಒಂದ್ ಜೊತೆ ಒಳ್ಳೆ ಬಣ್ಣದ ರೇಶ್ಮೆಸೀರೆಗಳ, 4ಪ್ರಿಂಟೆಡ್ ನೈಲಾನ್ ಸೀರೆಗಳ, 4ಟೆರಿಕಾಟ್ ಸೀರೆಗಳ ಮತ್ತೆ ಅದಕ್ಕೆ ಮ್ಯಾಚಿಂಗ್ ಬ್ಲೌಸ್‌ಪೀಸ್‌ಗಳ ಹಂಗೆ ಇನ್ನಿತರರ ಬಟ್ಟೆಗಳ ಸೆಲೆಕ್ಟ್ ಮಾಡಿಕಂಡತ್. ಇದಾದ ಮೇಲೆ Mr. ರಾಜು ತನುಂಗೂ ತನ್ನ ಅಪ್ಪಂಗೂ ಒಳ್ಳೆ ಕ್ವಾಲಿಟಿ ಗ್ವಾಲಿಯರ್ ಶೂಟಿಂಗ್ಸ್‌ಲಿ ಕೋಟು, ಪ್ಯಾಂಟ್, ಶರಟ್ ಬಟ್ಟೆಗಳ ತಕಂಡ್ ಆದಮ್ಯಾಲೆ ತನ್ನ ಅವ್ವನ ಗ್ಯಾನ ಬಾತ್,. ಅವ್ವಂಗೆ ಅವು ಇಷ್ಟಪಡುವ ಉದ್ದಕೈ ಸ್ವೆಟರ್, ಜಾಕೀಟ್, ಮತ್ತೆ ಕಲಾಪತ್ ರೇಶ್ಮೆ ಸೀರೆಗಳ ಆರಸಿಕಂಡ್ ಎಲ್ಲಾ ಬಟ್ಟೆಗಳ ಬಿಲ್ಲನ ಮಾಡ್ಸಿಕಂಡತ್. ಒಟ್ಟು ಬಿಲ್ 40 ಸಾವಿರ ರೂಪಾಯಿ ಆತ್. ಕಮೀಷನ್ ಹಣದ ಲೆಕ್ಕ ಅಲ್ಲದೆ ಅದರ ಮೇಲೆ ಬಂದ ಹೆಚ್ಚಿನ ಹಣನ ಆ ಸಾಹುಕಾರಂಗೆ ಕೊಟ್ಟ್ ಅಲ್ಲಿಂದ ಆ ಬಟ್ಟೆ ಪಾರ್ಸಲ್‌ನ ತೆಗ್ಸಿಕಂಡ್ ಆ ಸಾಹುಕಾರಂಗೆ ಸೇಕ್‌ಹ್ಯಾಂಡ್ ಮಾಡಿ ಅಲ್ಲಿಂದ ಕುಷೀಲಿ ಹೊರಗೆ ಹೊರಟತ್.

---

ನಿಧನ

ಭಾಗಮಂಡಲನಾಡು ಸಣಪುಲಿ ಕೋಟುಗ್ರಾಮದ ಕುಯ್ಯಮುಡಿ ದಿ|| ಉತ್ತಯ್ಯನವರ ಪ್ರಥಮಪುತ್ರ ಚಂಗಪ್ಪನವರು ದಿನಾಕ 5- 12-2000 ರಂದು ನಿಧನರಾದರು. ಇವರಿಗೆ 46 ವರ್ಷ ಪ್ರಾಯವಾಗಿತ್ತು. ಶ್ರೀಯುತರು ಪತ್ನಿ, ಇಬ್ಬರು ಪುತ್ರಿಯರನ್ನು, ಒಬ್ಬ ಪುತ್ರನನ್ನು ಹಾಗೂ ಅಪಾರ ಬಂಧು ವರ್ಗದವರನ್ನು ಅಗಲಿದ್ದಾರೆ. ಇವರು ಹಾಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಚಿಕ್ಕ ಮಗಳೂರು ಶಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು.

ವರದಿ : ಸೂದನ ಮೋಹನ್, ಮೈಸೂರು.


---

**ಬೇಸಿಗೆಯ ಬಿಸಿಲು ಬೆನ್ನಿಗೆ ಮಾರಿ, ಕೆಟ್ಟ ಹೆಣ್ಣು ಮನೆಗೆ ಹೆಮ್ಮಾರಿ**


*ದಿನಾಂಕ 3-4-2000 ದಲ್ಲಿ ಕಲಾಮಂದಿರದಲ್ಲಿ ಗೌಡ ಆದರ್ಶ ದಂಪತಿಗಳ ಮತ್ತು ಫ್ಯಾಷನ್ ಷೊ ನಡೆಯಿತು.*




ಗೌಡ ಕಿಶೋರಿ ವಿಜೇತೆ ಬಿಟ್ಟೀರ ರೀನಾ ಶಂಭುರವರಿಗೆ ಪ್ರಥಮ ಬಹುಮಾನವನ್ನು ನೀಡುತ್ತಿರುವ ಶ್ರೀ ಮೊಟ್ಟನ ರವಿಕುಮಾರ್



ಗೌಡ ಕಿಶೋರಿ ದ್ವಿತೀಯ ಬಹುಮಾನವನ್ನು ತನ್ನದಾಗಿರಿಸಿದ ಶಿರಕಜೆ ಸುಮ ಚೆಟ್ಟಿಯಪ್ಪನವರಿಗೆ ಸಂಘದ ಅಧ್ಯಕ್ಷರಿಂದ ಬಹುಮಾನ ಪ್ರಧಾನ



ಗೌಡ ಕಿಶೋರ ಪ್ರಥಮ ಬಹುಮಾನ ವಿಜೇತ ಮೂಡಗದ್ದೆ ಸುಮನ್‌ನವರಿಗೆ ಶ್ರೀ ದಿನಕರಗೌಡನವರು ಟ್ರೋಫಿ ನೀಡುತ್ತಿರುವುದು.



ಗೌಡ ಕಿಶೋರ ದ್ವಿತೀಯ ಬಹುಮಾನವನ್ನು ತನ್ನದಾಗಿರಿಸಿದ ಪರಚನ ಪ್ರದೀಪ್‌ನವರಿಗೆ ತುಂತಜೆ ಗಣೇಶ್‌ನವರು ಟ್ರೋಫಿ ನೀಡುತ್ತಿರವುದು

/SK/MYS-88 10-01-96 TCI Kar. 09592

ಕೊಡಗು ಗೌಡ ಮಾಜಿ ಸೈನಿಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ದಿನಾಂಕ 3-4-2000 ದಂದು ಮೈಸೂರಿನ ಕಲಾಮಂದಿರದಲ್ಲಿ ಕಾರ್ಯಕ್ರಮ ನಡೆಯಿತು.



ಎಡದಿಂದ ಬಲಕ್ಕೆ ವೇದಿಕೆಯಲ್ಲಿರುವ ಗಣ್ಯ ವ್ಯಕ್ತಿಗಳು,


ಶ್ರೀಮತಿ ಚೀಯಂಡಿರ ರಾಧ ಯಾದವ್, ತೋಟಂಬೈಲು ನಾಣಯ್ಯ, ತಡಿಯಪ್ಪನ ಕುಮಾರ ಜಯ, ತುಂತಜೆ ಗಣೇಶ್, ಮೊಟ್ಟನ ರವಿಕುಮಾರ್ ಹಾಗೂ ನೂಜಿ ದಿನಕರ ಗೌಡರವರು.



ಫ್ಯಾಶನ್ ಶೋ ಸ್ಪರ್ಧೆಯಲ್ಲಿ ಭಾಗವಹಿಸಿದ ಕೊಡಗಿನ ಗೌಡ ಸೊಬಗಿಯರು.



ಆದರ್ಶ ದಂಪತಿ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವನ್ನು ಗಿಟ್ಟಿಸಿದ ಮೊಟ್ಟನ ರವಿಕುಮಾರ್ ದಂಪತಿಗಳಿಗೆ ಟ್ರೋಫಿ ನೀಡುತ್ತಿರುವ ಶ್ರೀ ತೋಟಂಬೈಲು ನಾಣಯ್ಯನವರು.



ಆದರ್ಶ ದಂಪತಿ ಸ್ಪರ್ಧೆಯಲ್ಲಿ ದ್ವಿತಿಯ ಬಹುಮಾನವನ್ನು ಕುದುಕುಳಿ ಜನಾರ್ಧನ ದಂಪತಿಗಳಿಗೆ ನೀಡುತ್ತಿರುವವರು ಶ್ರೀಮತಿ ಚೀಯಂಡಿರರಾಧ ಯಾದವ್‌ನವರು.

**Kodagu Sangathi** Kannada Fortnightly Edited, Published, Printed Owned by Pattada P. Sheelamani, No. 35, Savitha Nilaya, I Cross, 4th Block, **Jayalaxmipuram, Mysore - 12.** And **SANGATHI** Office ✆ **: 0821/516771.** And Printed at Sri Guru Raghavendra Printers, 489, Devamba Agrahara, K. R. Mohalla, Mysore - 24. ✆ : 0821/431792.